# 28. ಭಗವತ್ಪ್ರಾರ್ಥನೆ

ಪರಮ ಪಾವನವಾದ ಪವಿತ್ರ ಪದವಿಯನ್ನು ಪಡೆದು ಪರಮಾತ್ಮನೆನಿಸಿ ಪರಮಾನಂದ ಸುಖಿಸಾಮ್ರಾಜ್ಯಕ್ಕೊಡೆಯನಾದ ಪರಮ ಮಂಗಲ ಮೂರ್ತಿಯೇ, ದೋಷರಹಿತನೇ, ರಾಗ, ದ್ವೇಷ ರಹಿತನೇ, ಸರ್ವಜ್ಞನೇ, ಹಿತೋಪದೇಶಿಯೇ, ನಿನಗೆ ಇದೋ ನಿನ್ನ ಭಕ್ತನಾದ ನಾನು ಅನನ್ಯ ಭಕ್ತಿಯಿಂದ ಸಲ್ಲಿಸುವ ಅನಂತಾನಂತ ಪ್ರಣಾಮಗಳು.

ಹೇ ಭಗವಾನ್! ನೀನು ಅನಾದಿಯಿಂದ ಅಂಟಿಬಂದಿದ್ದ ನಿನ್ನ ಕರ್ಮಶತ್ರುಗಳನ್ನು ಗೆದ್ದು ಜನ್ಮ ಜರಾಮರಣಗಳಿಂದ ಪಾರಾಗಿ ಪರಮಾತ್ಮ ಪದವಿಯನ್ನು ಪಡೆದು ಪೂಜ್ಯನಾಗಿದ್ದೀಯೇ. ಅನೇಕ ಜನ್ಮಗಳ ಪುಣ್ಯದಿಂದ ನಿನ್ನ ದರ್ಶನ ನನಗಾಗಿರುವುದರಿಂದ, ನಿನ್ನ ಪ್ರಾರ್ಥನೆಯನ್ನು ಭಕ್ತಿಯಿಂದ ಮಾಡಿ ಪುನೀತನಾಗಲು ನಿನ್ನ ಸನ್ನಿಧಿಗೆ ಬಂದು ನನ್ನ ದುರ್ಗುಣಗಳನ್ನು ಬಿಟ್ಟು ಸುಗುಣಿಯಾಗಬಯಸಿದ್ದೇನೆ. ನೀನು ಜಗತ್ತಿನ ಹಿಂಸೆ ಎಂಬ ಪಾಪದಿಂದ ಪಾರು ಹೊಂದಿದ್ದೀಯೆ. ಅಹಿಂಸೆಯನ್ನು ಬೋಧಿಸಿದ್ದೀಯೇ. ಇದೇ ಧರ್ಮವೆಂದಿದ್ದೀಯೆ, ಹೌದು ಅದು ಧರ್ಮದಮೂಲವಾಗಿದೆ. ಹಿಂದೆ ನಾನು ಇದನ್ನು ನಂಬದೆ ತಿಳಿಯದೆ ಕೊಲೆ, ಸುಲಿಗೆ, ಸುಳ್ಳು, ವಂಚನೆ, ಮೋಸ, ಠಕ್ಕು, ದರೋಡೆ, ಕಳ್ಳತನ, ಪರಸ್ತ್ರೀಗಮನ, ದುರ್ನಡತೆ, ದುರಾಶೆ, ಜೂಜು ಹಿಂಸೆಗಳೆಂಬ ಪಾಪದ ಸುಳಿಯಲ್ಲಿ ಸಿಲುಕಿ ಭವ ಭವಗಳಲ್ಲಿ ದುಃಖಿಯಾಗಿ ಬಂದೆ. ಈಗ ಇದರಿಂದ ಬಿಡುಗಡೆಯಾಗಲು ನೀನು ಉಪದೇಶಮಾಡಿರುವ ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಅಪರಿಗ್ರಹಗಳೆಂಬ ವ್ರತಗಳನ್ನು ಪಾಲನೆ ಮಾಡುತ್ತಾ ಬಂದಿದ್ದೇನೆ. ಅಜ್ಞಾನಿಯಾದ ನಾನು ಸುಜ್ಞಾನಿಯಾದ ನಿನ್ನ ಬಳಿಗೆ ಬಂದು ನನ್ನ ತಪ್ಪುಗಳನ್ನು ನಿನ್ನೆದುರಿಗೆ ತೋಡಿಕೊಂಡು ಕ್ಷಮೆ ಬೇಡುತ್ತೇನೆ. ನೀನು ಸುಗುಣಗಳಗಣಿ. ನಿನ್ನ ಆಶ್ರಯದಿಂದ ನಾನೂ ಆ ಗುಣಗಳನ್ನು ಹೊಂದಿ ಸುಖಿಯಾಗಲು ಬಯಸಿ ಬಂದಿದ್ದೇನೆ. ನಿನ್ನ ಮುಖ ಕಮಲವು ಶಾಂತಿ, ತ್ಯಾಗ, ಕ್ಷಮೆ, ತಾಳ್ಮೆ, ದಯೆ ಮತ್ತು ತೃಪ್ತಿಯ ಬೋಧೆಯನ್ನು ನೀಡುತ್ತಿದೆ. ನಿನ್ನೆದುರಿಗೆ ನಿಂತ ನನ್ನಲ್ಲೂ ಈ ಗುಣಗಳು ಉಂಟಾಗಲೆಂದು ಬಯಸಿ ನಿನ್ನ ದರ್ಶನ, ಸ್ತುತಿಗಳನ್ನು ಅನನ್ಯ ಭಕ್ತಿಯಿಂದ ಮಾಡುತ್ತಿದ್ದೇನೆ. ಪ್ರಭೋ ನಾನು ಎಲ್ಲಿಯಾದರೂ ತಪ್ಪಿ ನಡೆದಿದ್ದರೆ ನಿನ್ನಲ್ಲಿ ಕ್ಷಮೆ



ಬೇಡುತ್ತೇನೆ. ಭಗವಾನ್ ನೀನು ಜಗತ್ತಿಗೆ ಅಹಿಂಸೆ, ಸತ್ಯ ಮುಂತಾದ ಸಂದೇಶವನ್ನು ಬೀರಿ ಜಗದೋದ್ಧಾರಕನಾಗಿದ್ದೀಯೇ. ನಿನ್ನ ಅಂತಃಶಕ್ತಿ ಎಂತಹುದು, ನಿನ್ನ ಮಹಿಮೆ ಎಂತಹುದು, ನಿನ್ನ ಜ್ಞಾನವೆಂತಹುದು, ಎಂಬುದನ್ನು ಅಲ್ಪಜ್ಞನಾದ ನಾನು ವರ್ಣಿಸಲು ಸಾಧ್ಯವಿಲ್ಲ. ನಿನ್ನಂತಹ ಪುನೀತನಾದವನನ್ನು ಹೆತ್ತ ಆ ನಿನ್ನ ತಂದೆ ತಾಯಿಯರು ಧನ್ಯರು. ನಿನ್ನ ದರ್ಶನ ಮಾಡಿದ ನಾನೂ ಧನ್ಯನೆಂದು ಭಾವಿಸುತ್ತೇನೆ. ನೀನು ತೋರಿರುವ ಒಳ್ಳೆಯ ಜ್ಞಾನ, ಒಳ್ಳೆಯ ಆಚರಣೆಗಳೆಂಬ ರತ್ನತ್ರಯ ಮಾರ್ಗದಲ್ಲಿ ಸಾಗಿ ಬರುತ್ತಿದ್ದೇನೆ. ಇದರಿಂದ ಎಂದಾದರೂ ಒಂದು ದಿನ ನಿನ್ನ ಸಾನಿಧ್ಯವನ್ನು ಸೇರಿ ಅನಂತ ಸುಖಿಸಾಮ್ರಾಜ್ಯಕ್ಕೆ ಒಡೆಯನಾಗುತ್ತೇನೆಂಬ ಭರವಸೆ ಇದೆ. ಇಂತಹ ಮಹದುಪಕಾರ ಮಾಡಿದ ನಿನ್ನ ಚರಣಾರವಿಂದವನ್ನು ನನ್ನ ಮನೋ ಮಂದಿರದಲ್ಲಿ ಸ್ಥಾಪಿಸಿ ಕೊಂಡು ಸದಾ ಅನನ್ಯ ಭಕ್ತಿಭಾವನೆಯಿಂದ ಸ್ಮರಿಸುತ್ತಿರುತ್ತೇನೆ. ನಮೋ ನಮಃ।

# 29. ಆತ್ಮವಿಕಾಸಕ್ಕೆ ಸಂಸ್ಕಾರ ಅಗತ್ಯ

ಪತಿತನು ಪಾವನನಾಗುವುದು ಅಥವಾ ಆತ್ಮನು ಪರಮಾತ್ಮನಾಗುವುದು ಮಾನವ ಜೀವನದ ಮುಖ್ಯ ಧ್ಯೇಯವಾಗಿದೆ. ಆದ್ದರಿಂದ ಯಾವಾಗಲೂ ಅದಕ್ಕೋಸ್ಕರ ಪುರುಷಾರ್ಥ ಮಾಡುವುದು ಅಗತ್ಯವಾಗಿದೆ.

ನಾವು ವ್ಯಾಪಾರಕ್ಕೋಸ್ಕರ ಮುಂಬಯಿ ಅಥವಾ ಕಲ್ಕತ್ತೆಗೆ ಹೋಗ ಬೇಕಾದರೆ ಮೊದಲು ಅದಕ್ಕೆ ಬೇಕಾದ ಸಲಕರಣೆಗಳನ್ನು ಸಿದ್ಧಗೊಳಿಸ ಬೇಕಾಗುತ್ತದೆ. ಎಲ್ಲಿಗೆ ಹೋಗಬೇಕು? ಎಲ್ಲಿ ಉಳಿದುಕೊಳ್ಳಬೇಕು. ಎಲ್ಲಿ ಮಾಲು ಖರೀದಿ ಮಾಡಬೇಕು? ಎಷ್ಟು ಹಣ ಬೇಕು? ಮುಂತಾದ ವಿಷಯಗಳನ್ನು ಚೆನ್ನಾಗಿ ವಿಚಾರಿಸುತ್ತೇವೆ. ಹಾಗೆ ಮಾಡಿದರೇನೆ ಸರಿಯಾದ ಲಾಭವು ದೊರೆಯುತ್ತದೆ. ಇದೇರೀತಿ ಆತ್ಮನು ಕರ್ಮದಿಂದ ಮುಕ್ತನಾಗಿ ಪರಮಾತ್ಮನಾಗಬೇಕಾದರೆ, ಮೋಕ್ಷ ಸಾಮ್ರಾಜ್ಯವು ದೊರೆಯಬೇಕಾದರೆ ಪುರುಷಾರ್ಥದ ಅಗತ್ಯವಿದೆ ಎಂಬುದು ನಿರ್ವಿವಾದ. ಆದರೆ ನಾವು ಈ ವಿಚಾರವನ್ನು ಮಾಡಿದ್ದೇವೆ ಮತ್ತು ಈ ವಿಷಯದಲ್ಲಿ ಪ್ರಯತ್ನಿಸಿದ್ದೇವೆ ಎಂದು ಹೇಳಲಾಗುವುದಿಲ್ಲ. ಬದಲಾಗಿ ಮಾನವ ಜೀವನವು ದುರ್ಲಭವೆಂದು ತಿಳಿದಿದ್ದರೂ ನೀಚಪ್ರವೃತ್ತಿಯಲ್ಲಿ ಮಗ್ನರಾಗಿ ಅಧಃಪತನವನ್ನು ಹೊಂದುತ್ತಿರುವುದು

ಎಲ್ಲೆಲ್ಲಿಯೂ ಕಾಣಬರುತ್ತಿದೆ. ಸನ್ಮಾರ್ಗಗಾಮಿಗಳು ಬಹಳ ವಿರಳ. ಇದಕ್ಕೆಲ್ಲಾ ಕಾರಣವು ಸುಸಂಸ್ಕಾರದ ಅಭಾವ. ನಾವು ಯಾವ ರೀತಿಯ ಸಂಸ್ಕಾರವನ್ನು ಪಡೆದಿರುತ್ತೇವೆಯೋ ಅದೇ ಅಭ್ಯಾಸವು ವೃದ್ಧಿಯಾಗುತ್ತಾ ಜೀವನವು ಅದೇ ರೀತಿ ಪ್ರವರ್ತಿಸುತ್ತದೆ. ಆಚಾರ್ಯ ವೀರನಂದಿ ಮುನಿಗಳು ಒಂದು ಕಡೆ ಹೀಗೆ ಹೇಳಿದ್ದಾರೆ:-

ಗುಣಾನಗೃಹ್ಣನ್ ಸುಜನೋ ನ ನಿವೃತಿಂ ಪ್ರಯಾತಿ ದೋಷಾನವದನ್ನ ದುರ್ಜನಃ ಚಿರಂತನಾಭ್ಯಾಸನಿಬಂಧನೇರಿತಾ ಗುಣೇಷು ಚ ದೋಷೇಷು ಜಾಯತೇ ಮತಿಃ||

(ಚಂದ್ರಪ್ರಭಚರಿತ್ರ)

ಇದರ ಅರ್ಥವೇನೆಂದರೆ-ಗುಣವನ್ನು ಗ್ರಹಿಸದೆ ಸಜ್ಜನರು ವಿರಾಮ ಹೊಂದುವುದಿಲ್ಲ. ದೋಷವನ್ನು ಹುಡುಕದೆ ದುರ್ಜನರು ವಿರಮಿಸಲಾರರು. ಇದಕ್ಕೆಕಾರಣವೇನೆಂದರೆ ಬಹುಕಾಲದ ಅಭ್ಯಾಸವೆಂದು ಆಚಾರ್ಯರು ಹೇಳುತ್ತಾರೆ. ಇದಕ್ಕೆ ಉದಾಹರಣೆ-

ಪಾಂಡವರು ಮತ್ತು ಕೌರವರು ಸಭೆಯಲ್ಲಿ ಕುಳಿತಿರುವ ಸಮಯ ದ್ರೋಣಾಚಾರ್ಯರು ಧರ್ಮರಾಜನನ್ನು ಕುರಿತು 'ಈ ಸಭೆಯಲ್ಲಿ ಸಜ್ಜನರು ಹಾಗೂ ದುರ್ಜನರು ಎಷ್ಟು ಮಂದಿ ಇದ್ದಾರೆ? ಎಂದು ಪ್ರಶ್ನಿಸಲು 'ನನಗೆ ಎಲ್ಲರೂ ಸಜ್ಜನರಾಗಿಯೇ ತೋರುವರು, ದುರ್ಜನರೆಲ್ಲಿಯೂ ಕಾಣುವುದಿಲ್ಲವೆಂದು ಧರ್ಮರಾಯನು ಉತ್ತರಿಸಿದನು. ದ್ರೋಣಾಚಾರ್ಯರು ಅದೇ ಪ್ರಶ್ನೆಯನ್ನು ದುರ್ಯೋಧನನಲ್ಲಿ ಕೇಳುವಾಗ ದುರ್ಯೋಧನನು "ಸಜ್ಜನರು ನನಗೆಲ್ಲಿಯೂ ತೋರುವುದಿಲ್ಲ. ಎಲ್ಲರೂ ದುರ್ಜನರೇ ಕಾಣುತ್ತಾರೆ" ಎಂದನು. ಇದರ ಅಭಿಪ್ರಾಯ ವೇನಂದರೆ ದೋಷವನ್ನೇ ಹುಡುಕುತ್ತಾ ಹೋದರೆ ಮುಂದೆ ಅದೇ ಅಭ್ಯಾಸವುವೃದ್ಧಿಯಾಗುತ್ತ ಹೋಗುತ್ತದೆ. ಬಹುಕಾಲದಿಂದ ಗುಣವನ್ನೇ ಗ್ರಹಿಸುತ್ತಾ ಬಂದರೆ ಪ್ರತಿಯೊಂದು ವಸ್ತುವಿನಲ್ಲಿಯೂ ಗುಣಗಳೇ ತೋರುತ್ತವೆ. ಹಾಗೆ ಆ ಗುಣಗಳೇ ತನ್ನಲ್ಲಿಯೂ ಅಭಿವೃದ್ಧಿಯಾಗುತ್ತವೆ. ಈ ಕಾರಣದಿಂದ ಗುಣಗ್ರಹಣ ಮಾಡುವ ಯೋಗ್ಯತೆಯು ಲೋಕದಲ್ಲಿ ಮಹತ್ತ್ವವುಳ್ಳದ್ದು. ಇದಕ್ಕೆ ಸಂಸ್ಕಾರಗಳ ಸತ್‌ಸಂಗದ ಪರಮ ಆವಶ್ಯಕತೆ ಇದೆ.

ದುರ್ಲಭವಾದ ಈ ಮಾನವ ಜೀವನವನ್ನು ಸುಸಂಸ್ಕೃತವನ್ನಾಗಿ ಮಾಡಿ ಉಚ್ಚಗುಣಗಳ ಪ್ರಾಪ್ತಿಗಾಗಿ ನಿರಂತರ ಪ್ರಯತ್ನ ಪಡಬೇಕು. ನಮ್ಮ ಜೀವನವನ್ನು



ಸುಲಭವಾಗಿ ಕೆಡಿಸಬಹುದು. ಆದರೆ ಜೀವನ ಸಾಫಲ್ಯವನ್ನು ಮಾಡುವುದು ಅತಿ ಕಷ್ಟ. ಒಂದು ಮನೆಯನ್ನು ಕ್ಷಣಕಾಲದಲ್ಲಿ ನಾಶಗೊಳಿಸಬಹುದು. ಹೆಚ್ಚು ಕಷ್ಟವಿಲ್ಲ. ಆದರೆ ಮನೆಯನ್ನು ಕಟ್ಟಲು ತುಂಬಾ ಸಮಯ ತಗಲುವುದು. ಹೆಚ್ಚು ಹಣ ಖರ್ಚು ಮಾಡಿ ಬಹಳ ಪ್ರಯತ್ನ ಪಡಬೇಕಾಗುವುದು.

ಆತ್ಮನ ಅಭ್ಯುದಯಕ್ಕೋಸ್ಕರ ಅನೇಕ ಭವಗಳಿಂದಲೂ ಪ್ರಯತ್ನ ಪಡಬೇಕಾಗುವುದು. ಕೇವಲ ಬಾಲ್ಯಾವಸ್ಥೆಯಿಂದಲ್ಲ, ತಾಯಿಯ ಗರ್ಭದಿಂದಲೇ ಸಂಸ್ಕಾರ ಪಡೆಯುವುದಗತ್ಯ. ಹಾಗೆ ಪಡೆಯುತ್ತಾ ಬಂದ ಸಂಸ್ಕಾರಗಳಿಂದ ಮಾನವನು ಮುಂದೆ ಮೋಕ್ಷಪ್ರಾಪ್ತಿಗೆ ಯೋಗ್ಯನಾಗುವನು 'ಯನ್ನವೇ ಭಾಜನೇ ಲಗ್ನಸಂಸ್ಕಾರೋ ನಾನ್ಯಥಾ ಭವೇತ್' 'ಅರ್ಥಾತ್ ಹೊಸ ಪಾತ್ರೆಗೆ ಹಾಕಿದ ಕಲಾಯಿಯು ಸ್ಥಿರವಾಗಿ ನಿಲ್ಲುವುದು. ಹಳೆಯ ಪಾತ್ರೆಗೆ ಕಲಾಯಿಯು ಚೆನ್ನಾಗಿ ಹಿಡಿಯಲಾರದು. ಅದರಂತೆ ಬಾಲ್ಯಕಾಲದಲ್ಲಿ, ಯೋಗ್ಯಕಾಲದಲ್ಲಿ ಮಾಡಲ್ಪಟ್ಟ ಸಂಸ್ಕಾರವು ಜೀವನ ಸೌಂದರ್ಯವನ್ನು ವೃದ್ಧಿಗೊಳಿಸಲು ಸಹಾಯಕವಾಗುವುದು. ನಮಗೆ ಈ ಜೀವನದಲ್ಲಿ ಉಂಟಾಗುವ ವೈಭವ ಉತ್ತಮ ಕುಲ, ಎಲ್ಲಾ ತರದ ಅನುಕೂಲತೆ ಮುಂತಾದುವು ಅನೇಕ ಭವಗಳ ಸಂಸ್ಕಾರಗಳಿಂದ ಉಂಟಾಗುತ್ತವೆ. ಇವೆಲ್ಲಕ್ಕೂ ಪೂರ್ವಪುಣ್ಯದ ಆವಶ್ಯಕತೆಯು ಅತಿ ಮುಖ್ಯವೆಂದು ನಾವು ತಿಳಿಯಬೇಕಾದುದು ಮೊದಲ ಕರ್ತವ್ಯ. ಆ ಪುಣ್ಯವಾದರೋ ಉತ್ತಮ ಸಂಸ್ಕಾರಗಳಿಲ್ಲದೆ ಎಂದಿಗೂ ದೊರೆಯಲಾರದು. ಪುಣ್ಯಾನು ಬಂಧಿನೀ ಪುಣ್ಯವೇ ತೀರ್ಥಂಕರ ಪದವಿಯಂತಹ ಶ್ರೇಷ್ಠಪದವನ್ನು ದೊರಕಿಸಿ ಕೊಡಲು ಸಮರ್ಥವಾದುದು, ಪುಣ್ಯಪ್ರಾಪ್ತಿಯು ಪುಣ್ಯ ಕ್ರಿಯೆಗಳಿಂದ ಉಂಟಾಗುವುದು. ದೇವಪೂಜೆ, ಗುರೂಪಾಸ್ತಿ. ಸ್ವಾಧ್ಯಾಯ ಸತ್ಪಾತ್ರದಾನ ಮುಂತಾದ ಸತ್ಕ್ರಿಯೆಗಳಿಂದ ಗೃಹಸ್ಥರಿಗೆ ಪುಣ್ಯ ಪ್ರಾಪ್ತಿಯಾಗುವುದೆಂದೂ ಆ ಸತ್ಕ್ರಿಯೆಗಳು ಗೃಹಸ್ಥರಿಗೆ ಆವಶ್ಯಕವೆಂದು ಆಗಮದಲ್ಲಿ ಹೇಳಿರುವರು. ಇವು ಸಂಸ್ಕಾರದ ಸಾಧನಗಳು.

ಕೆಲವು ಆಧುನಿಕ ಆಧ್ಯಾತ್ಮ ಏಕಾಂತವಾದಿಗಳು ಪುಣ್ಯವು ಸ್ವೀಕರಿಸಲು ಯೋಗ್ಯವಲ್ಲವೆಂದು ಹೇಳುತ್ತಿದ್ದಾರೆ. ಆದರೆ ಆಚಾರ್ಯರು, ಪುಣ್ಯಕರ್ಮವು ಗೃಹಸ್ಥರಿಗೆ ಆವಶ್ಯಕವೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಯಾರ ಮಾತನ್ನು ನಂಬಬೇಕೆಂಬ ವಿಚಾರದಲ್ಲಿ ಸಾಮಾನ್ಯ ಜನರಿಗೆ ಸಂಶಯವುಂಟಾಗುವುದು ಸಹಜವೇ ಆಗಿದೆ. ಆದರೆ ಯಾರಿಗೆ ಜೈನಾಗಮದಲ್ಲಿ ನಂಬಿಕೆ ಇದೆಯೋ ಅವರು ಶಾಸ್ತ್ರದಲ್ಲಿ ಹೇಳಿದ ವಿಷಯಗಳನ್ನು ನಂಬಲೇಬೇಕು.

ಪುಣ್ಯೋಪಾರ್ಜನೆಯು ಗೃಹಸ್ಥರಿಗೆ ಅಗತ್ಯವಷ್ಟೇ ಅಲ್ಲ. ಅನಿವಾರ್ಯ ವಾಗಿದೆ. ಪಾಪವನ್ನು ಸುಲಭವಾಗಿ ಗಳಿಸಬಹುದಾಗಿದೆ. ಕಷ್ಟವಿಲ್ಲ. ಪಾಪ ಮತ್ತು ಪುಣ್ಯ ಇವೆರಡನ್ನೂ ಬಿಟ್ಟು ಪರಿಶುದ್ಧಾವಸ್ಥೆಯನ್ನು ಪಡೆಯುವುದು ಆದರಣೀಯವೇ. ಆದರೆ ವಿಷಮವಾದ ವಿಷಯ ಲಾಲಸೆಯು ಹೆಚ್ಚುತ್ತಿರುವ ಈಗಿನ ಯುಗದಲ್ಲಿ ಅಂತಹ ಅವಸ್ಥೆಯನ್ನು ಹೊಂದುವುದು ಕೇವಲ ಸ್ವಪ್ನಪ್ರಾಯ! ಗಗನಗೃಹ ನಿರ್ಮಾಣದಂತೆಯೇ ಸರಿ! ಈ ಪರಿಸ್ಥಿತಿಯಲ್ಲಿ ಪುಣ್ಯಾರ್ಜನೆಯೊಂದೇ ಮಧ್ಯಮ ಮಾರ್ಗವು ಉಳಿದಿರುತ್ತದೆ. ಇದೇ ಕ್ರಮೇಣ ಮನುಷ್ಯನನ್ನು ಉತ್ತಮ ಮಾರ್ಗಕ್ಕೆ ಒಯ್ಯುತ್ತದೆ. ಮುಂದೆ ಪರಿಶುದ್ಧಾವಸ್ಥೆ ಯನ್ನು ಪಡೆಯುವುದು ಅತ್ಯಂತ ಸುಲಭಾವಾಗುತ್ತದೆ. ಕಿಂತು ಇದನ್ನೇ ಜಪಿಸುತ್ತಾ ಸುಮ್ಮನೆ ಕುಳಿತರೆ ಇತೋ ಭ್ರಷ್ಟಸ್ತತೋಭ್ರಷ್ಟಃ ಎಂದ ಹಾಗೆ ಪುಣ್ಯವೂ ಇಲ್ಲ. ಪರಿಶುದ್ಧಾವಸ್ಥೆಯು ಮೊದಲೇ ಇಲ್ಲ. ಇವೆಲ್ಲವನ್ನೂ ಚೆನ್ನಾಗಿ ವಿಚಾರಿಸಿ ಪುಣ್ಯೋಪಾರ್ಜನೆ ಮಾಡಲು ಪ್ರಯತ್ನಿಸುವುದು ಆ ಮಾರ್ಗದಲ್ಲಿ ತಲ್ಲೀನನಾಗುವುದು ಅಗತ್ಯವಾಗಿದೆ. ಪುಣ್ಯವು ವಿಶಿಷ್ಟ ಸಂಸ್ಕಾರದಿಂದಲೇ ಉಂಟಾಗುತ್ತದೆ. ಇದಕ್ಕೆ ಕೂಡ ಪೂರ್ವ ಪುಣ್ಯದ ಅಗತ್ಯವಿದೆ ಎಂದು ತಿಳಿಯಬೇಕು.

## 30. ಅಹಿಂಸಾ ಧರ್ಮ

ಧರ್ಮಬಂಧುಗಳೇ! ಲೋಕದಲ್ಲಿ ಧರ್ಮವನ್ನು ನಾನಾ ವಿಧವಾಗಿ ವರ್ಣಿಸಲಾಗುತ್ತಿದೆ. ಹಸಿದವನಿಗೆ ಅನ್ನ ಹಾಕುವುದು ಧರ್ಮ, ರೋಗಿಗೆ ಔಷಧ ಕೊಡುವುದು ಧರ್ಮ, ದೇವಾಲಯ, ವಿದ್ಯಾಲಯ, ವೈದ್ಯಾಲಯ, ಅನಾಥಾಲಯಗಳನ್ನು ಕಟ್ಟಿಸುವುದು ಧರ್ಮ, ಪರೋಪಕಾರ ಮಾಡುವುದೂ ಧರ್ಮ. ಭಯಭೀತವಾದ ಮೂಕ ಪ್ರಾಣಿಗಳಿಗೆ ದುಃಖವನ್ನುಂಟು ಮಾಡದಿರುವುದೂ ಧರ್ಮ, ಅಂದ ಮೇಲೆ ಈ ಭೇಧ (ಶಾಖೆ) ಗಳೆಲ್ಲಾ ಯಾವುದರಿಂದ ಕವಲೊಡೆದವು. ಇವುಗಳ ಬುಡಯಾವುದು, ಎಂಬುದನ್ನು ಮುಖ್ಯವಾಗಿ ಪರಿಶೀಲನೆ ಮಾಡಬೇಕು. ಅನೇಕ ಉಪನದಿಗಳಿಂದ ಸೇರಿದ ಗಂಗಾನದಿಯು ದೊಡ್ಡ ಸಮುದ್ರದಲ್ಲಿ ಅಡಕವಾಗುವಂತೆ ಈ ಧರ್ಮ ಭೇದಗಳು ಅಹಿಂಸಾ ಧರ್ಮದಲ್ಲಿ ಅಡಕವಾಗಿದೆ.



ಹೇಗೆಂದರೆ, ಹಸಿದವನಿಗೆ ಅನ್ನ ಹಾಕುವ ಉದ್ದೇಶವೇನು? ದಯೆಯಿಂದ ಹಸಿವೆಂಬ ಹಿಂಸೆಯನ್ನು ತಪ್ಪಿಸಬೇಕೆಂದಲ್ಲವೇ? ರೋಗಿಗೆ ಔಷಧ ಕೊಡುವ ಉದ್ದೇಶವೇನು? ರೋಗ ಬಾಧೆ ಎಂಬ ದುಃಖವನ್ನು ನಿವಾರಿಸಬೇಕೆಂದಲ್ಲವೆ.? ಹಾಗೆಯೇ ಭಯಭೀತವಾದ ಮೂಕ ಪ್ರಾಣಿಗಳಿಗೆ ಪ್ರಾಣದಾನ ಮಾಡುವ ಉದ್ದೇಶವೇನು? ಆಕಾಲದಲ್ಲಿ ಉಂಟಾಗುವ ಪ್ರಾಣಿಗಳ ದುಃಖವನ್ನು ನಾಶಮಾಡ ಬೇಕೆಂದಲ್ಲವೇ? ಅದೂ ಅಹಿಂಸೆ. ಆದ್ದರಿಂದ ಸಾರ್ವಮಾನ್ಯ ಸನಾತನ ಧರ್ಮವಾದ ಅಹಿಂಸೆಯನ್ನು ಸರ್ವರೂ ಮನನ ಮಾಡಬೇಕು. ಮಾನವನಿಗೆ ದಯೆ ಉಂಟಾಗಬೇಕು. ದಯೆಯೇ ಧರ್ಮ, ಮತ್ತದೇ ಅಹಿಂಸೆ.

ಹಿಂಸೆಯ ತ್ಯಾಗವೇ ಅಹಿಂಸೆ. ಆದ್ದರಿಂದ ಮಾನವನು ವ್ಯವಹಾರದಲ್ಲಿ ನಿಶ್ಚಯದಲ್ಲಿ ಯಾರಿಗೂ, ಮನ, ವಚನ, ಕಾಯ, ಕೃತ, ಕಾರಿತ ಅನುಮೋದನಾದಿ ಕಾರ್ಯಗಳಿಂದ ತೊಂದರೆ ಪಡಿಸದಿರುವುದೇ ಅಹಿಂಸೆ.

ಕೇವಲ ಪ್ರಾಣಿಗಳನ್ನು ಕೊಲ್ಲದ ಮಾತ್ರಕ್ಕೆ ಅಹಿಂಸೆಯಾಗದು. ಆದ್ದರಿಂದ ಮನ, ವಚನ, ಕಾಯಗಳ ಸಂಯಮಕ್ಕನೇ ಅಹಿಂಸೆ ಎಂದೂ, ಇವುಗಳ ಸಾಧನೆಗೆ ಪರಮಾತ್ಮಧ್ಯಾನ, ಜಪ ಸ್ತೋತ್ರ, ಪೂಜೆ ಇತ್ಯಾದಿಗಳನ್ನು ಪ್ರತಿಯೋರ್ವನೂ ನಿತ್ಯವೂ ಮಾಡಬೇಕೆಂದೂ ಆಚಾರ್ಯರ ವಚನವಾಗಿದೆ. ಅಹಿಂಸೆಯು ಶ್ರೇಷ್ಠ ಆಚಾರ ಮಾತ್ರವಲ್ಲದೆ, ಶುದ್ಧ ವಿಚಾರಗಳ ಮೂಲಕವಾಗಿ ಕ್ರಮೇಣ ಆತ್ಮೋನ್ನತಿಯ ಸರ್ವೋಚ್ಚ ಶಿಖರಕ್ಕೆ ಮುಟ್ಟುವ ರಾಜಮಾರ್ಗವಾಗಿದೆ. ವಿಶ್ವಶಾಂತಿಯ ಹೆಗ್ಗುರಿಯಾಗಿದೆ. ವಿಶ್ವಪ್ರೇಮ ಔದಾರ್ಯ ಪರೋಪಕಾರ ಇವುಗಳಿಂದ ಕೂಡಿದ ಅಹಿಂಸೆಯನ್ನು ನಿಜವಾಗಿ ಮಹಾ ಉತ್ಕೃಷ್ಟ ಧರ್ಮವೆಂದು ಘಂಟಾಘೋಷವಾಗಿ ಸಾರಬಹುದು. ಮಾನವನು ಕೇವಲ ನಾಲಿಗೆಯ ಚಾಪಲ್ಯಕೋಸ್ಕರ ಕ್ರೋಧ, ಮಾನ, ಮಾಯ, ಲೋಭಕ್ಕೆ ವಶನಾಗಿ ಸ್ಥೂಲ, ಸೂಕ್ಷ್ಮರೂಪವಾದ ಜಂತುಗಳ ಪ್ರಾಣವನ್ನು ದಯೆಯಿಲ್ಲದೆ ದೇವರಿಗೆಂದೂ, ಹಿರಿಯರಿಗೆಂದೂ, ಔಷಧಕ್ಕೆಂದೂ ಧರ್ಮದ ಹೆಸರಿನಲ್ಲಿ ಹಿಂಸೆಯನ್ನು ಮಾಡುವುದುಂಟು. ಆದರೆ ಅದು ಧರ್ಮವೆನಿಸದು. ಧರ್ಮವೆಲ್ಲಿದೆಯೋ ಅಲ್ಲಿ ದಯೆ (ಅಹಿಂಸೆ) ಇದ್ದೇ ಇರುತ್ತದೆ. ಆದ್ದರಿಂದ ನಾಗರಿಕನೆನಿಸಕೊಳ್ಳಬೇಕಾದರೆ, ಧಾರ್ಮಿಕನೆನಿಸಿಕೊಳ್ಳಬೇಕಾದರೆ, ಪಾಪಭೀರುವಾಗಬೇಕಾದರೆ ಹಿಂಸಾದಿ ಕ್ರೂರಾಚರಣೆಯನ್ನು ತ್ರಿಕರಣ, ತ್ರಿಗುಪ್ತಿಗಳಿಂದ ದೂರ ಮಾಡಬೇಕು. ಯಥಾರ್ಥ ದೇವ, ಗುರು, ಶಾಸ್ತ್ರಗಳನ್ನು ತಿಳಿಯಬೇಕು. ಆಗ ಅವನು ಅಹಿಂಸಕನೆನಿಸಿಕೊಳ್ಳುತ್ತಾನೆ. ಆದ್ದರಿಂದ ಸರ್ವಧರ್ಮ ಶ್ರೇಷ್ಠವಾದ ಅಹಿಂಸಾಧರ್ಮವನ್ನು ಸರ್ವರೂ ತಿಳಿದು ಆಚರಿಸಬೇಕು. ಹಿಂಸೆಯಲ್ಲಿ ಮುಖ್ಯವಾಗಿ

ಎರಡು ವಿಧವೆಂದು ಆಚಾರ್ಯರು ಹೇಳಿರುತ್ತಾರೆ. (1) ಹಿಂಸಕನ ಕ್ರೂರವಾದ ಹಿಂಸಾಭಾವಕ್ಕೆ ಭಾವಹಿಂಸೆಯೆಂದೂ (2) ಪ್ರತ್ಯಕ್ಷ ಪ್ರಾಣಿವಧೆಗೆ ದ್ರವ್ಯಹಿಂಸೆಯೆಂದೂ ಹೆಸರು ಆದ್ದರಿಂದ ಪ್ರತಿಯೋರ್ವನೂ ಆಚಾರ ವ್ಯವಹಾರಗಳಲ್ಲಿ ಜಾಗರೂಕನಾಗಬೇಕೆಂದೂ, ಆಸೆ, ಕೋಪ, ವಂಚನೆ, ಅಜಾಗ್ರತೆ, ಮೋಹಗಳನ್ನು ತೊರೆದು ಪಾಪಕಾರ್ಯಗಳಿಗೆ ಕೈಹಾಕದೆ, ಪಂಚಪಾಪಗಳ ನಿವೃತ್ತಿಗೋಸ್ಕರ ಪಂಚವ್ರತಗಳನ್ನು ಆಚರಿಸಿ, ಪಂಚಪರಮೇಷ್ಠಿಗಳ ಧ್ಯಾನವನ್ನು ಮಾಡುತ್ತಾ ಸಮ್ಯಕ್ತ್ವ ಶಾಲಿಯಾಗಬೇಕೆಂದೂ ಧರ್ಮಶಾಸ್ತ್ರವು ಸಾರುತ್ತಿದೆ. ಸರ್ವಶಕ್ತಿಯುಕ್ತವಾದ ಅಹಿಂಸಾಧರ್ಮವು ಜಗತ್ತಿನಲ್ಲಿ ಮೆರೆಯಲೆಂದು ಸರ್ವರೂ ಹಾರೈಸಬೇಕು. "ಜೀವಿಸಿರಿ, ಜೀವಿಸಲು ಬಿಡಿರಿ" ಎಂಬ ವೀರವಾಣಿಯನ್ನು ನಡೆನುಡಿಯಲ್ಲೂ ಮನನ ಮಾಡಬೇಕು.

ಈ ರೀತಿಯಾದ ಅಹಿಂಸಾ ವಾಕ್ಯಗಳ ಭೋಧಕನೂ, ಸನಾತನ ಧರ್ಮ ಪ್ರಕಾಶಕನೂ, ಜನಮನ ಆಕರ್ಷಕನೂ ಆದ ವಿಶ್ವಬಂಧುವಾದ ಜಿನೇಂದ್ರನೂ ಜಿನಧರ್ಮವೂ ಚಿರಕಾಲ ಮೆರೆಯಲೆಂದು ಆದರದಿಂದ ಹಾರೈಸೋಣ.

## ಪ್ರಾಣಿದಯಾ ಪ್ರಸಾರ

(ಎರಡನೇ ಪಾದವನ್ನು ಎರಡು ಸಾರಿ ಹೇಳಬೇಕು)
ದಾಟಿ - (ಸಮ್ಮೇದಗಿರಿ ಸಿದ್ಧಕ್ಷೇತ್ರ ಪುಣ್ಯಪಾತ್ರ)

ಪ್ರಾಣಿಗಳನು ಕೊಲ್ವುದೇಕೆ ಮನುಜ ಶ್ರೇಷ್ಠನೇ ।
ಜ್ಞಾನಿಯಾಗಿ ಹುಟ್ಟಿರುವೇ ಪುಣ್ಯವಂತನೇ ॥ ಪಲ್ಲ ॥

ಸಿಕ್ಕ ಸಿಕ್ಕ ಪ್ರಾಣಿಗಳನು ಕೊಂದು ತಿಂಬೆಯಾ ॥
ಬೆಕ್ಕು ನಾಯಿ ನರಿಗಳಂತೆ ಹಿಂಸೆ ಗಯ್ವೆಯಾ ॥೧॥

ಹಿರಿಯರೂಟಕೆಂದು ಪ್ರಾಣಿಗಳನು ಕೊಯ್ಯುತಾ ॥
ನರಕಕೆಳಿದು ಕಷ್ಟಪಡುವಿರಲ್ಲಿ ಬೆಯ್ಯುತಾ ॥೨॥

ಕಾಳುಕಡ್ಡಿ ಕಾಯಿ ಪಲ್ಲೆ ತಿಂದು ಬಾಳಿರೀ ॥
ಹಾಳು ಮಾಂಸವೇಕೆ ಬಯಸಿ ಪ್ರಾಣಗೊಲ್ವಿರೀ ॥೩॥



ಸಾರಿ ಹೇಳ್ವೆ ಮಾಂಸತಿಂಬ ಮನುಜವರ್ಗಕ್ಕೆ ॥
ಘೋರಕೃತ್ಯ ಬಿಟ್ಟು ಪ್ರಾಣಿ ದಯೆಯ ಪಾಲಿಸೀ ॥೪॥

ವಿಶ್ವಶಾಂತಿ ಕೋರಿ ನೀವು ಸಗ್ಗಕೇರಿರೀ ॥
ವಿಶ್ವಹೃದಯ ಸತ್ವದಿಂದ ಮುಕ್ತಿಗಳಿಸಿರೀ ॥೫॥

ನಿನ್ನಬಾಯಿ ಹಲ್ಲು ನೋಡೆ ಮಾಂಸಕೊಪ್ಪದು ।
ಅನ್ನ ತುತ್ತುಮಾಡಿ ನುಂಗುವಂತೆ ಇರ್ಪುದು ॥ ॥೬॥

ಧರ್ಮದಿಂದ ನಡೆದು ಜನರ ಕೀರ್ತಿ ಪಡೆಯಿರೀ ॥
ಕರ್ಮನಾಶದಿಂದ ಜಗದಿ ಶಾಂತಿ ಮಾಡಿರೀ ॥೭॥

ಭಕ್ತಿಯಿಂದ ದೇವರನ್ನು ಧ್ಯಾನ ಮಾಡಿರೀ ॥
ಯುಕ್ತಿಯಿಂದ ದೇವರನ್ನು ನೀವು ಕಾಣಿರೀ ॥೮॥

ವಿಶ್ವಬಂಧು ಅಹಿಂಸಾಧರ್ಮ ನಂಬಿರೀ ॥
ವಿಶ್ವದಲ್ಲಿ ಶಾಂತಿ ನೆಲಸಲೆಂದು ಹರಸಿರೀ ॥೯॥

# 31. ಯಜ್ಞೋಪವೀತ

(ರತ್ನತ್ರಯ ಸೂತ್ರ)

ಆತ್ಮನ ಅಹಿತಕ್ಕೆ ಕ್ರೋಧ, ಮಾನ, ಮಾಯ, ಲೋಭಾದಿ ಮನೋವಿಕಾರಗಳೇ ಕಾರಣ, ಇದರಿಂದ ಭವಭ್ರಮಣೆಯುಂಟಾಗಿ ಆಯಾ ಭವದಲ್ಲಿ ಮಾಡಿದ ಶುಭಾಶುಭಯೋಗದಿಂದ ಕಟ್ಟಿಕೊಂಡು ಪುಣ್ಯಪಾಪಗಳ ಫಲವನ್ನು ಸುಖದುಃಖ ರೂಪವಾಗಿ ಅನುಭವಿಸುತ್ತಾ ಹುಟ್ಟು, ಮುಪ್ಪು, ಆಳಿವೆಂಬ ತಾಪತ್ರಯಗಳಲ್ಲಿ ತೊಳಲಬೇಕಾಗಿದೆ. ಆದರೂ ಜೀವನಗುರಿ ಇಷ್ಟೇ ಅಲ್ಲ. ಈ ತಾಪತ್ರಯ ಚಕ್ರದಿಂದ ಬಿಡುಗಡೆಹೊಂದಿ ಶಾಶ್ವತ ಸುಖಸನ್ನಿಧಿಯನ್ನು ತಲುಪುವ ಮಹತ್ವಾಕಾಂಕ್ಷೆ ಇದೆ. ಇದನ್ನು ಪಡೆಯುವ ಗುಣ ಆತ್ಮನಲ್ಲಿ ಶತಃ ಸಿದ್ಧವಾಗಿದೆ. ಈ ತಾಪತ್ರಯದಿಂದ ಬಿಡುಗಡೆಹೊಂದಲು ಹೊರಟವರು ಮನ ಮತ್ತು ಇಂದ್ರಿಯಗಳನ್ನು ತನ್ನ ವಶದಲ್ಲಿಟ್ಟುಕೊಂಡು ಶಾಂತಿ, ಸಂಯಮದಿಂದ ಸತ್ಪಥದಲ್ಲಿ ಸಾಗುತ್ತಾ

ತತ್ತ್ವಾಭ್ಯಾಸ, ಆತ್ಮಚಿಂತನೆ, ತಪಃಸಾಧನೆ, ದೈವಭಕ್ತಿ, ಪ್ರಾಣಿದಯೆ ಮುಂತಾದ ಮಾನವತ್ವದ ಸಹಜ ಗುಣಭೂಷಿತರಾಗಿ ತನ್ನ ಜೀವನ ಸಾಗಿಸುತ್ತಾರೆ. ಈ ಸಾಧನೆಯು ಜೀವನದಲ್ಲಿ ಒಂದು ನಿಯಮಕ್ಕೆ ಒಳಪಟ್ಟು ಸಾಗುತ್ತಿರುತ್ತದೆ. ಆ ನಿಯಮವೇ ವ್ರತ. ವ್ರತವೇ ಆತ್ಮೋತ್ಥಾನದ ಮಹತ್ ಸಾಧನ. ಇದು ಅಣುವ್ರತ ಮತ್ತು ಮಹಾವ್ರತವೆಂದು ವಿಭಾಗವಾಗಿದೆ. ಅಣುವ್ರತ ಗೃಹಸ್ಥನಿಗೂ, ಮಹಾವ್ರತ ಮುನಿಗಳಿಗೂ ನಿಯಮಿತವಾಗಿದೆ.

ಗೃಹಸ್ಥನು ತನ್ನ ವ್ಯವಹಾರದಲ್ಲಿ ನಿರತನಾಗಿದ್ದರೂ ನಿಶ್ಚಯ ಧರ್ಮಮಾರ್ಗವನ್ನು ಮರೆಯದಿರಲಿ, ಎಚ್ಚರ ತಪ್ಪದಿರಲಿ ಎಂದು ತನ್ನ ಮೈ ಮೇಲೆ ಒಂದು ಧರ್ಮದ ಹೆಗ್ಗುರುತಿನ ಸೂತ್ರವನ್ನು ಧರಿಸಲಾಗಿದೆ. ಅದೇ ಯಜ್ಞೋಪವೀತ. ಅದನ್ನು ಉರೋಲಿಂಗ, ಜನಿವಾರ, ರತ್ನತ್ರಯಸೂತ್ರ ಎನ್ನುವರು. "ಧರ್ಮವನ್ನೇ ನೀನು ಧರಿಸಿದ್ದೀಯೆ" ಎಂಬುದನ್ನು ಸದಾ ನೆನಪು ಮಾಡಿಕೊಡುವ ಈ ಚಿಹ್ನೆಯೇ ಜಿನದಾರ. ಇದನ್ನು ಧರಿಸಿದವನೇ ಜೈನ.

ಈ ಯಜ್ಞೋಪವೀತವು ಜೈನಜನಾಂಗದಲ್ಲಿ 8 ರಿಂದ 10 ವರ್ಷದ ಬಾಲಕನಿದ್ದಾಗಲೇ ಗುರೂಪದೇಶದೊಂದಿಗೆ ವ್ರತೋಪನಯನವಾಗಿ ಧರಿಸಲ್ಪಡುತ್ತದೆ. ಅಂದಿನಿಂದ ವರ್ಷೇ ವರ್ಷೇ ಹಳೆಯ ಸೂತ್ರವನ್ನು ತೆಗೆದು ಹೊಸ ಸೂತ್ರವನ್ನು ಧರಿಸುವ ಪದ್ಧತಿ ಇದೆ. ಇದೂ ಒಂದು ರೀತಿಯ ಧರ್ಮದ ಲೈಸೆನ್ಸನ್ನು ರಿನ್ಯೂ ಮಾಡಿಸಿದಂತೆ ಎಂದು ತಿಳಿಯಬೇಕು. ಆ ಪವಿತ್ರವಾದ ದಿನವೇ ಶ್ರಾವಣ ಮಾಸದ ಪೂರ್ಣಿಮೆ. ಶ್ರಮಣರಿಗೆ ಅಂದರೆ ಜೈನರಿಗೇ ಮೀಸಲಾಗಿದೆ ಮಾಸ ಶ್ರಾವಣಮಾಸ. ಈ ಮಾಸದಲ್ಲಿಯೇ ಹೆಚ್ಚು ವ್ರತ ನೋಂಪಿಗಳು ಬರುತ್ತವೆ. ಅದರಲ್ಲಿಯೂ ಶ್ರಾವಣ ಪೂರ್ಣಿಮೆಯಂತೂ ಜೈನ ಪುರುಷರಿಗೆ ಪವಿತ್ರವಾದ ಬಹು ಸಡಗರದ ದಿನ. ಎಂದೂ ಕಾಣದವರನ್ನೂ ಅಂದು ಬಸದಿಯಲ್ಲಿ ನೋಡಬಹುದು. ಏಕೆಂದರೆ ಧರ್ಮದ ಸೂತ್ರವನ್ನು ಧರಿಸಿ ಧಾರ್ಮಿಕನಾಗಿ ಬಾಳುತ್ತೇನೆಂದು ಭಗವಂತನೆದುರು ಪ್ರತಿಜ್ಞೆ ಮಾಡುವ ಸಲುವಾಗಿ ಜೈನನೆನಿಸಿಕೊಂಡ, ಜೈನವ್ರತಾನುಯಾಯಿ; ಧರ್ಮಾವಲಂಬಿಗಳೆಲ್ಲಾ ಜಿನ ಮಂದಿರದಲ್ಲಿ ಸೇರುವ ಪದ್ಧತಿಯು ಬಹುಕಾಲದಿಂದಲೂ ಬಂದಿದೆ. ಧಾರ್ಮಿಕ ಪ್ರಜ್ಞೆ ಒಡ ಮೂಡುವ ಮಂಗಲಕರವಾದ ಪರ್ವತಿಥಿಯೇ ಶ್ರಾವಣ ಪೂರ್ಣಿಮೆ.

ಈ ಧರ್ಮಸೂತ್ರದ ಧಾರಣೆಗೆ ಪುರಾಣ, ಇತಿಹಾಸ ಮತ್ತು ಧರ್ಮಶಾಸ್ತ್ರಗಳ ಆಧಾರಗಳಿವೆ.



ಈ ಅವಸರ್ಪಿಣೀಕಾಲದಲ್ಲಿ ದುಷಮ ಸುಷಮಾ ಎಂಬ ನಾಲ್ಕನೇ ಕಾಲದ ಪ್ರಾರಂಭದಲ್ಲಿ ಪ್ರಥಮ ತೀರ್ಥೇಶರಾದ ಶ್ರೀ ವೃಷಭನಾಥರು ಕ್ಷತ್ರಿಯ, ವೈಶ್ಯ, ಶೂದ್ರರೆಂಬ ವೃತ್ತಿನಿಷ್ಠರನ್ನು ನಿಯಮಿಸಿದರು. ಮುಂದೆ ವೃಷಭನಾಥರ ಹಿರಿಯಮಗ ಭರತಚಕ್ರವರ್ತಿಯು ಶ್ರಾವಣ ಪೂರ್ಣಿಮೆಯ ದಿನದಂದು ಯಜನ, ಯಾಜನ, ಅಧ್ಯಯನ, ಅಧ್ಯಾಪನ, ಗ್ರಹಣ ಮತ್ತು ದಾನವೆಂಬ ಷಟ್ ಕ್ರಿಯಾರತರಾದ ಬ್ರಾಹ್ಮಣ ವರ್ಣಾಶ್ರಮವನ್ನು ವಿಂಗಡಿಸಲು ಕುತೂಹಲ ಉಳ್ಳವನಾಗಿ ಮಂಗಲ ನಿಮಿತ್ತವಾಗಿಯೂ ಪರೀಕ್ಷಾರ್ಥವಾಗಿಯೂ ಬೆಳೆಸಲ್ಪಟ್ಟ ಧ್ಯಾನ್ಯಗಳ ಅಂಕುರಗಳಿಂದ ವ್ಯಾಪ್ತವಾದ ಪ್ರದೇಶದಲ್ಲಿ ಆ ಅಂಕುರಗಳನ್ನು ತುಳಿಯದೆ ಬಂದ ಅಹಿಂಸಾ ನಿಷ್ಠರಾದ ಜನರಿಗೆ ಬ್ರಹ್ಮಸೂತ್ರವನ್ನು ಹಾಕಿದನು. ಅಂದಿನಿಂದ ಈ ಸೂತ್ರವನ್ನು ಕೇವಲ ಬ್ರಾಹ್ಮಣರೆ (ಜೈನ ಬ್ರಾಹ್ಮಣ) ಧರಿಸುತ್ತಿದ್ದರೂ ಮುಂದೆ ಕ್ರಮೇಣ ಸರ್ವ ಜನಸಾಮಾನ್ಯವಾಗಿ ಅಹಿಂಸಾ ಧರ್ಮಪಾಲಕರಾದ ಎಲ್ಲರೂ ಬ್ರಹ್ಮಚಾರಿಗಳೂ, ಗೃಹಸ್ಥರೂ, ವಾನಪ್ರಸ್ಥಾಶ್ರಮಿಗಳೂ ಧರಿಸಲು ಯೋಗ್ಯರಾದರು. ಆ ಪದ್ಧತಿ ಮುಂದೆ ಬರುಬರುತ್ತಾ ಅತ್ತಿ, ಆಲ, ಗೋಣಿ, ಅರಳಿ, ಬಸರಿ ಎಂಬ ಪಂಚೌದುಂಬರ ಫಲವನ್ನೂ ಮಧು, ಮಧ್ಯ, ಮಾಂಸವನ್ನೂ ತ್ಯಾಗಮಾಡಿದ ಅಷ್ಟಮೂಲಗುಣ ವ್ರತಧಾರಿ ಸಮ್ಯಕ್ತ್ವಶಾಲಿ ಶ್ರಾವಕರೂ, ಈ ಸೂತ್ರವನ್ನು ಧರಿಸಿ ಧಾರ್ಮಿಕರೆನಿಸಿ ಧರ್ಮಾನುಯಾಯಿಗಳಾದರು. ಈ ಪಂಚಮ ಕಾಲದಲ್ಲಿನ ಆಚಾರ್ಯರೂ ಈ ಸೂತ್ರಧಾರಣೆಗೆ ಸಮ್ಯಕ್ತ್ವ ಶಾಲಿಗೆ ಅವಕಾಶಕೊಟ್ಟು ಅನೇಕರನ್ನು ಧರ್ಮಮಾರ್ಗದಲ್ಲಿ ನಡೆಸಿ ಧರ್ಮಪ್ರಭಾವನೆ ಮಾಡಿದರು.

ಹರಿವಂಶದ ನೇಮಿನಾಥ ಭಗವಾನರ ತೀರ್ಥಕಾಲದಲ್ಲಿ ಹಸ್ತಿನಾಪುರ ದಲ್ಲಿ ಒಮ್ಮೆ ಅಕಂಪನಾಚಾರ್ಯರ ಸಂಘದ ಏಳುನೂರು ಮುನಿಗಳಿಗೆ ಬಲಿ ಎಂಬುವನು ಘೋರವಾದ ಉಪಸರ್ಗವನ್ನು ಕೊಟ್ಟು ಅವರ ಹತ್ಯೆಯನ್ನು ಮಾಡಲು ಪ್ರಯತ್ನಿಸುತ್ತಿರುವಾಗ ಬೇರೊಂದು ಕಡೆ ಇದ್ದ ಶ್ರೀವಿಷ್ಣು ಕುಮಾರೆಂಬ ಮುನಿಗಳು ಬಂದು ಆ ಉಪಸರ್ಗವನ್ನು ತಮ್ಮ ತಪೋ ವೃದ್ಧಿಯ ಬಲದಿಂದ ದೂರ ಮಾಡಿದರು. ಬಲಿಗೆ ತಕ್ಕ ಬುದ್ಧಿಯನ್ನು ಕಲಿಸಿದರು. ಆಗ ಮುನಿಗಳೆಲ್ಲರೂ ಉಪಸರ್ಗದಿಂದ ನಿವೃತ್ತರಾಗಿ ಪಾರಣೆಯನ್ನು ಮಾಡಿದ್ದು ಶ್ರಾವಣ ಶುದ್ಧ ಪೂರ್ಣಿಮೆಯ ದಿನ. ಅಂದೇ ಉಪಾಕರ್ಮದ ದಿನವೂ ಆಗಿತ್ತು. ಆದುದರಿಂದ ಆ ದಿನ ಪವಿತ್ರವಾದ ಪರ್ವದಿನವೇ ಆಯಿತು. ಅಂದು ಇದನ್ನು ಉತ್ತರ ದೇಶದಲ್ಲಿ ರಕ್ಷಾಬಂಧನ ಪರ್ವವೆಂದು ಬಹುಸಂಭ್ರಮದಿಂದ ಆಚರಿಸುತ್ತಾರೆ. ದಕ್ಷಿಣದಲ್ಲಿ ಉಪಾಕರ್ಮವೆಂದು ಆಚರಿಸುತ್ತಾರೆ. ಮಳೆಯ ನೀರಿನಿಂದ ರಕ್ಷಿಸಲ್ಪಟ್ಟ ಪೈರು

ಪಚ್ಚೆಗಳಿಂದ ಭೂಮಿಯು ಹಸಿರಾಗುತ್ತಿರಲು ಉಪನಯನವಾದವರಿಗೆ ಶ್ರಾವಣಮಾಸದ ಪೌರ್ಣಿಮೆಯ ದಿನ ಮಾಡತಕ್ಕ ರತ್ನತ್ರಯ ಸೂತ್ರಧಾರಣೆಯ ಕ್ರಿಯೆಗೆ ಉಪಾಕರ್ಮವೆಂದು ಹೆಸರು.

ಈ ಯಜ್ಞೋಪವೀತದ ಸ್ವರೂಪವೇನೆಂದರೆ :- ಯಜ್ಞ+ಉಪವೀತ. ಅಂದರೆ ದೇವ ಪೂಜೆ ಮೊದಲಾದ ಧರ್ಮಕಾರ್ಯಗಳ ಜ್ಞಾಪಕ ಮಾಡಿಕೊಡುವ ಧರ್ಮಸೂತ್ರ. ಇದೇ ಬ್ರಹ್ಮಸೂತ್ರವೂ ಆಗಿದೆ. ಅಂದರೆ ಜಿನಭಗವಂತನ ಧರ್ಮಾಂಕಿತವಾದ ತತ್ವಾರ್ಥ ಸೂತ್ರಗಳಿಂದ ನಿರ್ಮಿತವಾದ ಸಂಕೇತ. ಆದುದರಿಂದ ಇದನ್ನು ಜನಿವಾರವೆನ್ನುವುದಕ್ಕಿಂತ ಜಿನ ದಾರವೆನ್ನುವುದು ಸೂಕ್ತ. ಎದೆಯ ಮೇಲೆ ಧರ್ಮದ ಗುರುತನ್ನು ಧರಿಸಿರುವ ಚಿಹ್ನೆಯಾದುದರಿಂದ ಇದಕ್ಕೆ ಉರೋಲಿಂಗವೆಂದೂ ಹೆಸರುಂಟು.

ಶ್ರಾವಣ ಪೂರ್ಣಿಮೆಯದಿನ ಜಿನಮಂದಿರದಲ್ಲಿ ಹೋಮಕುಂಡದ ಮುಂದೆ ಜಿನದಾರಗಳನ್ನಿಟ್ಟು ಆಜ್ಯಾಹುತಿ, ಸಮಿದಾಹುತಿ, ಮುಂತಾದ ಹೋಮಕಾರ್ಯಗಳಾದ ನಂತರ ಅಗ್ನಿಗೆ ಪ್ರದಕ್ಷಿಣೆಹಾಕಿ ಶ್ರಮಣಸಂಕಲ್ಪ ಪೂರ್ವಕವಾಗಿ ಅಂದರೆ ಭರತೇಶನು ಮಾಡಿದ ಕಾರ್ಯವನ್ನು ಸ್ಮರಿಸಿ ಸೂತ್ರವನ್ನು ಧರಿಸಬೇಕು. ಮತ್ತೆ ಕೆಲವು ಸೂತ್ರಗಳನ್ನು ಇಟ್ಟುಕೊಂಡು ಧರಿಸಿರುವ ಸೂತ್ರವು ಮೈಲಿಗೆಯಾದಾಗ, ಭಿನ್ನವಾದಾಗ, ಸೂತಕ ಪಾತಕಗಳುಂಟಾದಾಗ, ನೂತನ ಮಂಗಲಕಾರ್ಯವನ್ನು ಪ್ರಾರಂಭಿಸುವಾಗ ಹೊಸ ಸೂತ್ರವನ್ನು ಧರಿಸಬೇಕು. ಸೂತ್ರವನ್ನು ಧರಿಸುವಾಗ "ಓಂ ನಮೋ ಅರ್ಹತೇ ಭಗವತೇ ಸಮ್ಯಗ್ದರ್ಶನ ಜ್ಞಾನ ಚಾರಿತ್ರ ರೂಪೀ ರತ್ನತ್ರಯ ಪವಿತ್ರೀ ಕೃತಾಂಗಾಯ ಯಜ್ಞೋಪವೀತ ಧಾರಣಂ ಕರೋಮಿ, ಕೇವಲ ಜ್ಞಾನ ಸಾಮ್ರಾಜ್ಯ ಯೌವರಾಜ ಪದಪ್ರಾಪ್ತಯೇ ರತ್ನತ್ರಯ ಮಹಾಸೂತ್ರಂ ಕಂಠಾಭರಣ ಮಸ್ತು ಮೇ'' ಎಂದು ಹೇಳಿಕೊಂಡು ಧರಿಸಬೇಕು. ನಂತರ ತತ್ವಾರ್ಥಸೂತ್ರವನ್ನು ಓದಬೇಕು. ಏಕೆಂದರೆ ಜಿನಭಗವದ್ಗೀತೆಯಾದ ತತ್ವಾರ್ಥಸೂತ್ರದ ಸಾರಭೂತ ಸೂತ್ರವೇ ಜಿನದಾರವಾಗಿದೆ. ಆ ಸೂತ್ರಕ್ಕೆ ಶಕ್ತಿತುಂಬಲು ಸೂತ್ರಪಠಣೆಬೇಕು. ತತ್ವಾರ್ಥ ಸೂತ್ರದ ಮೊದಲ ವಾಕ್ಯವೇ "ಸಮ್ಯಗ್ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗಃ'' ಎಂಬ ರತ್ನತ್ರಯ ಸೂಚಕ ಸೂತ್ರವಾಗಿದೆ. ಈ ರತ್ನತ್ರಯವೇ ಜೈನಧರ್ಮದ ಸಾರಸರ್ವಸ್ವವಾಗಿದೆ. ಧರ್ಮವೆಂಬ ವೃಕ್ಷಕ್ಕೆ ಸಮ್ಯಗ್ದರ್ಶನವೇಬೇಕು. ಸಮ್ಯಜ್ಞಾನವೇ ಪುಷ್ಪ, ಸಮ್ಯಚ್ಚಾರಿತ್ರವೇ ಫಲ. ಆದುದರಿಂದ ಧರ್ಮವೃಕ್ಷವು ಕಲ್ಪವೃಕ್ಷಕ್ಕೆ ಮಿಗಿಲಾದುದು. ಇಂತಹ ರತ್ನತ್ರಯ ರೂಪಸೂಚಕ ಚಿಹ್ನೆಯೇ ಯಜ್ಞೋಪವೀತ. ಆದುದರಿಂದ ಇದು ಮೂರು ದೊಡ್ಡ



ಎಳೆಗಳಿಂದ ಕೂಡಿದೆ. ಮತ್ತೆ ಇವುಗಳನ್ನು ಬಿಡಿಸಿದಾಗ, ಇಪ್ಪತ್ತೇಳು ಎಳೆಗಳಾಗುತ್ತವೆ.

ಅವುಗಳ ವಿವರಣೆ ಹೀಗಿದೆ :-

ಜೀವಾಸ್ತಿಕಾಯ. ಪುದ್ಗಲಾಸ್ತಿಕಾಯ, ಧರ್ಮಾಸ್ತಿಕಾಯ, ಅಧರ್ಮಾಸ್ತಿ ಕಾಯ, ಆಕಾಶಾಸ್ತಿಕಾಯಗಳೆಂಬ ಪಂಚಾಸ್ತಿಕಾಯಗಳೂ,

ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲಗಳೆಂಬ ಷಡ್ದ್ರವ್ಯಗಳೂ,

ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ, ಮೋಕ್ಷ, ಪಾಪ, ಪುಣ್ಯ ಎಂಬ ನವಪದಾರ್ಥಗಳೂ ಸೇರಿ(5+6+7+9=27) ಇಪ್ಪತ್ತೇಳು ಪದಾರ್ಥಗಳಾಗುತ್ತವೆ. ಜೈನಧರ್ಮ ಸಿದ್ಧಾಂತವೆಲ್ಲಾ ಈ ಪದಾರ್ಥದಲ್ಲಿ ಅಡಕವಾಗಿದೆ. ಇವುಗಳಲ್ಲಿ ಶ್ರದ್ಧೆಯೇ ಸಮ್ಯಗ್ದರ್ಶನ, ಇವುಗಳ ಪರಿಜ್ಞಾನವೇ ಸಮ್ಯಜ್ಞಾನ, ಇವುಗಳನ್ನು ನಿರೂಪಿಸುವ ದೇವ, ಗುರು, ಶಾಸ್ತ್ರಾನುಸಾರವಾದ ಆಚರಣೆಯೇ ಸಮ್ಯಕ್ಚಾರಿತ್ರ. ಹೀಗೆ 27 ತತ್ವಸೂಚಕವಾದ 27 ಎಳೆಗಳಿಂದ ಕೂಡಿದ ಯಜ್ಞೋಪವೀತವನ್ನು ಧರಿಸಬೇಕು. 9 ಎಳೆಗಳಿಂದ ಕೂಡಿದ ಮೂರು ದಾರಗಳನ್ನು ಜೋಡಿಸುವುದರಿಂದ 27 ಎಳೆಗಳಾಗುತ್ತವೆ. ಇದಿಷ್ಟೂ ಒಂದು ಸೂತ್ರವೆನಿಸುತ್ತದೆ. ವಟುವು ಒಂದು ಸೂತ್ರವನ್ನೂ, ಬ್ರಹ್ಮಚಾರಿಯು ಮೂರು ಸೂತ್ರವನ್ನು ಧರಿಸುತ್ತಾರೆ. ಪತ್ನಿಯನ್ನು ಧರ್ಮಮಾರ್ಗದಲ್ಲಿ ನಡೆಸಿಕೊಂಡು ಹೋಗುವ ಹೊಣೆಯನ್ನು ಹೊತ್ತು ಜೀವನ ಬಂಡಿಯನ್ನು ಸಮತೂಕದಲ್ಲಿ ಸತ್ಯ ಸಾತ್ವಿಕ, ಸುಂದರವಾಗಿ ಸಾಗಿಸಿಕೊಂಡು ಹೋಗುತ್ತೇನೆಂಬ ಗುರುತಿಗಾಗಿಯೇ ವಿವಾಹಿತನು ಎರಡು ಸೂತ್ರವನ್ನು ಧರಿಸುವುದು ಅವಶ್ಯಕವಿದೆ. ಆದುದರಿಂದ ಧರ್ಮಸೂತ್ರಕ್ಕೆ ತಾನಾಗಲೀ ತನ್ನಪತ್ನಿಯಾಗಲೀ ತಪ್ಪಿನಡೆಯುವಂತೆ ಇಲ್ಲ ಎಂಬುದರ ಸಾಕ್ಷಿಯೇ ಯಜ್ಞೋಪವೀತ. ಈ ಮೋಕ್ಷಮಾರ್ಗ ನಿರೂಪಿತವಾದ, ರತ್ನತ್ರಯ ರೂಪಿಯಾದ ಧರ್ಮಸೂತ್ರಮಾರ್ಗದಲ್ಲಿ ಸಾಗುತ್ತಿರುವ ಶ್ರಾವಕರೇ ಶ್ರೇಷ್ಠರು. ಮಾನವ ಜನ್ಮದಲ್ಲಿ ಅದರಲ್ಲೂ ಸತ್ಕುಲದಲ್ಲಿ ಜನಿಸಿ ಸದ್ಗೃಹಸ್ಥನಾಗಿ ಬಾಳಲು ಪುಣ್ಯಬೇಕು. ಅಂತ ಪುಣ್ಯವನ್ನು ಗಳಿಸಲು ಧರ್ಮವೆಂಬ ಸಾಧನೆಯ ಆಶ್ರಯಬೇಕು. ಆ ಸದ್ಧರ್ಮ ಸೂಚಕ ಸೂತ್ರವೇ ಜಿನದಾರ. ಇದು ಧರ್ಮಪ್ರಜ್ಞೆಯನ್ನು ಮೂಡಿಸುತ್ತಿರುತ್ತದೆ. ಧರ್ಮಮಾಡು, ಧಾರ್ಮಿಕನಾಗು ಎಂದು ಎಚ್ಚರಿಸುತ್ತದೆ. ಯಜ್ಞೋಪವೀತ, ಜನಿವಾರ, ಜಿನದಾರ, ರತ್ನತ್ರಯಸೂತ್ರ ಎಂದೂ ಇದಕ್ಕೆ ಹೆಸರುಂಟು. ಇದು ಧರ್ಮ ಸಂಸ್ಕಾರದ ಗುರುತು.

# 32. ಅಷ್ಟಾಹ್ನಿಕಪರ್ವ

ಅಷ್ಟಾಹ್ನಿಕಾಪರ್ವ ಅತ್ಯಂತ ಪವಿತ್ರವಾದುದು. ಆತ್ಮಶೋಧಕವಾದುದು. ಪ್ರಾಯಃ ಅನೇಕ ಸ್ತ್ರೀಪುರುಷರು ಈ ವ್ರತವನ್ನು ಅತ್ಯಂತ ಉತ್ಸಾಹದಿಂದ ಆಚರಿಸುತ್ತಾರೆ. ಈ ವ್ರತವನ್ನು ಪ್ರತಿ ವರುಷ ಆಷಾಢ ಕಾರ್ತಿಕ ಫಾಲ್ಗುಣ ಮಾಸ ಗಳಲ್ಲಿ ನಡೆಸುತ್ತಾರೆ. ಈ ವ್ರತದ ವಿಧಿಯನ್ನು ವರ್ಣಿಸುತ್ತ ಶ್ರೀ ಸಿಂಹಸೇನ ಆಚಾರ್ಯರು ವ್ರತದ ತಿಥಿ ನಿರ್ಣಯವನ್ನು ಈ ಕೆಳಗೆ ಸೂಚಿಸಿದಂತೆ ಅಪ್ಪಣೆ ಕೊಟ್ಟಿರುತ್ತಾರೆ.

ಅಷ್ಟಾಹ್ನಿಕಾವ್ರತಂ ಕಾರ್ತಿಕ ಫಾಲ್ಗುಣಾಷಾಢಮಾಸೇಷು ಅಷ್ಟಮೀ ಮಾರಭ್ಯ ಪೂರ್ಣಿಮಾಂತ್ಯಂ ಭವತೀತಿ ವೃಧ್ಯಾವಧಿಕತಯಾ ಭವತ್ಯೇವ ಮಧ್ಯ ತಿಥಿಹ್ರಾಸೆ ಸಪ್ತಮೀತೋ ವ್ರತಂ ಕಾರ್ಯಂ ಭವತೀತಿ। ತದ್ಧಥಾ ಸಪ್ತಮ್ಯಾಮುಪವಾಸೋ ಅಷ್ಟಮ್ಯಾಂ ಪಾರಣಾನವಮ್ಯಾಂ ಕಾಂಜಿಕಂ ದಶಮ್ಯಾಮವಮೌದರ್ಯ್ಯಮಿತ್ಯೇಕೋ ಮಾರ್ಗ ಸುಗಮಃ ಸೂಚಿತಃ, ಜಘನ್ಯಾಪೇಕ್ಷಯಾಃ ತದಾದಿ ದಿನಮಾರಭ್ಯ ಪೂರ್ಣಿಮಾಂತಂ ಕಾರ್ಯಃ ಷಷ್ಠೋಪವಾಸಃ ಪದ್ಮದೇವ ವಾಕ್ಯ ಸಮಾದರ್ಯೈಃ ಭವ್ಯ ಪುಂಡರೀಕೈಃ ಅನ್ಯಥಾ ಕ್ರಿಯಮಾಣೆ ಸತಿ ವ್ರತ ವಿಧಿರ್ನಶ್ಯೇತ॥

ಅರ್ಥ-ಅಷ್ಟಾಹ್ನಿಕಾವ್ರತ ಕಾರ್ತಿಕ ಫಾಲ್ಗುಣ ಆಷಾಢ ಮಾಸಗಳ ಶುಕ್ಲಪಕ್ಷದ ಅಷ್ಟಮೀ ಮೊದಲ್ಗೊಂಡು ಪೌರ್ಣಿಮೀ ಮೊದಲ್ಗೊಂಡು ಪೌರ್ಣಿಮೀವರೆಗೆ ಆಚರಿಸಲ್ಪಡುತ್ತದೆ.

ತಿಥಿಯು ಅಧಿಕವಾಗಿದ್ದರೆ ಒಂದು ದಿನ ಅಧಿಕ ಆಚರಿಸತ್ಕದ್ದು. ವ್ರತದ ದಿನಗಳ ಮಧ್ಯದಲ್ಲಿ ತಿಥಿಯು ಹ್ರಾಸ (ಕಮ್ಮಿ)ವಾಗಿದ್ದರೆ ಒಂದು ದಿನ ಮೊದಲೇ ವ್ರತದ ನಿಯಮವನ್ನು ಸ್ವೀಕರಿಸತಕ್ಕದ್ದು. ಉದಾಹರಣೆಗೋಸ್ಕರ ಹೀಗೆ ತಿಳಿಯತಕ್ಕದ್ದು. ಹೇಗಂದರೆ-ಮಧ್ಯದಲ್ಲಿ ತಿಥಿಯ ಅಭಾವವಿದ್ದರೆ ಷಷ್ಠೀ ತಿಥಿಯಲ್ಲಿಯೇ ವ್ರತವನ್ನು ಧಾರಣೆ ಮಾಡಿಕೊಳ್ಳತಕ್ಕುದು. ಸಪ್ತಮಿಯಲ್ಲಿ ಉಪವಾಸ ಅಷ್ಟಮೀ ಪಾರಣೆ ನವಮೀ ಕಾಂಚಿಕಾಹಾರ (ಸಪ್ಪೆಗಂಜಿ) ದಶಮೀ ಊನೋದರ (ಅರ್ಧಊಟ) ಏಕಾದಶೀ ಉಪವಾಸ ದ್ವಾದಶೀ ಪಾರಣೆ, ತ್ರಯೋದಶೀ ನೀರಸ, ಚತುರ್ದಶಿ ಉಪವಾಸ. ಶಕ್ತಿ ಇದ್ದರೆ ಪೂರ್ಣಿಮೀ ಯಲ್ಲಿಯೂ ಉಪವಾಸ ಶಕ್ತಿ. ಇಲ್ಲದಿದ್ದರೆ ಊನೋದರ, ಪಾಡ್ಯ ಪಾರಣೆ



ಮಾಡತಕ್ಕದ್ದು. ತಿಥಿಯು ಸರಿಯಾಗಿದ್ದರೆ ಸಪ್ತಮೀಯಲ್ಲಿ ವ್ರತಧಾರಣೆ ಮಾಡಿ ಅಷ್ಟಮೀ ಉಪವಾಸ ಮಾಡಬೇಕು. ನವಮೀ ಏಕಾಶನ ದಶಮೀ ಉಪವಾಸ ಏಕಾದಶೀ ಪಾರಣೆ, ದ್ವಾದಶೀ ಉಪವಾಸ, ತ್ರಯೋದಶಿ ಪಾರಣೆ, ಚತುರ್ದಶೀ ಪೌರ್ಣಮೀಗಳಲ್ಲಿ ಪೂರ್ಣ ಉಪವಾಸ, ಪಾಡ್ಯಪಾರಣೆ. ವ್ರತದ ಸಮಾಪ್ತಿಯು ಬಿದಿಗೆಗೆ ಪೂರ್ಣವಾಗುತ್ತದೆ.

ವ್ರತದ ಆದಿಯಾಗಲಿ ಅಂತ್ಯವಾಗಲಿ ಕ್ಷಯವಾಗಿದ್ದರೆ ವ್ರತವನ್ನು ಒಂದು ದಿವಸ ಮೊದಲೇ ಮಾಡತಕ್ಕುದು. ಸಪ್ತಮೀ ಮೊದಲ್ಗೊಂಡು ಉಪವಾಸಪಾರಣೆ ಮಾಡುತ್ತಾ ಇರತಕ್ಕುದು. ಶಕ್ತಿಯು ಕಮ್ಮಿಯಾಗಿದ್ದರೆ ಪೌರ್ಣಮೀಯಲ್ಲೇ ಉಪವಾಸ ಅಥವಾ ನೀರಸ ಭೋಜನ ಮಾಡಬೇಕು. ಇದು ವ್ರತದ ಸರಳ ವಿಧಿಯು.

ಅಷ್ಟಮಿ ಆದಿಯಾಗಿ ದ್ವಾದಶಿವರೆಗೆ ಉಪವಾಸ, ತ್ರಯೋದಶಿ ಭೋಜನ, ಚತುರ್ದಶಿ ಪೌರ್ಣಮಿ ಉಪವಾಸ, ಪಾಡ್ಯ ಪಾರಣೆ ಈ ಪ್ರಕಾರ ಆಚರಿಸುವುದು ಉತ್ಕೃಷ್ಟವಿಧಿಯು. ಪೂರ್ಣ ಬ್ರಹ್ಮಚರ್ಯವಿರಬೇಕು.

ವ್ರತ ಧಾರಣೆ ಮಾಡುವ ವಿಧಿಯು-ವ್ರತವನ್ನು ಧಾರಣೆ ಮಾಡುವವನು ಧಾರಣೆ ಮಾಡುವ ದಿನದಲ್ಲಿ ಪ್ರಾತಃಕಾಲ ಹಾಸಿಗೆಯಿಂದ ಎದ್ದ ಕೂಡಲೇ ಸಾಮಾಯಿಕವನ್ನು ಮಾಡಬೇಕು. ಆ ಮೇಲೆ ನಿತ್ಯ ವಿಧಿಯನ್ನು ತೀರಿಸಿಕೊಂಡು ಜಿನಾಲಯಕ್ಕೆ ಹೋಗಿ ಭಗವಂತರಿಗೆ ಅಭಿಷೇಕ ಮಾಡಿ ಅಥವಾ ಮಾಡಿಸಿ ಪೂಜೆ ಮಾಡಬೇಕು. ಆ ಮೇಲೆ ಗುರುಗಳ ಸನ್ನಿಧಿಯಲ್ಲಿ ವ್ರತವನ್ನು ಸ್ವೀಕರಿಸಬೇಕು. ಗುರುಗಳ ಅಭಾವದಲ್ಲಿ ಜಿನಬಿಂಬದ ಸಮೀಪದಲ್ಲಿ ಕೆಳಗೆ ಕಾಣಿಸಿದ ಸಂಕಲ್ಪ ಪೂರ್ವಕ ವ್ರತವನ್ನು ಸ್ವೀಕರಿಸಬೇಕು.

ಓಂ ಆದ್ಯಭಗವತೋ ಮಹಾಪುರುಷಸ್ಯ ಬ್ರಹ್ಮಣೋಮತೇ ಮಾ ಸಾನಾಂ ಮಾಸೋತ್ತಮೋ ಮಾಸೆ ಆಷಾಢ ಮಾಸೆ ಶುಕ್ಲಪಕ್ಷೇ ಸಪ್ತ ಮ್ಯಾಂ ತಿಥೌ ಬುಧವಾಸರೆ ಜಂಜೂದ್ವೀಪೆ ಭರತಕ್ಷೇತ್ರೆ ಆರ್ಯಾಖಂಡೆ (ತಾನಿರುವ ಊರು) ಏತತ್ ಅವಸರ್ಪಿಣಿ ಕಾಲಾವಸಾನ ಚತುರ್ದಶ ಪ್ರಾಭೃತಮಾನಿತ ಸಕಲಲೋಕವ್ಯವಹಾರೆ ಶ್ರೀ ಗೌತಮಸ್ವಾಮಿ ಶ್ರೇಣಿಕಮಹಾ ಮಂಡಲೇಶ್ವರ ಸಮಾಚರಿತ ಸನ್ಮಾರ್ಗವಶೇಷೆ ಅತೀತಿ ಅಧಿಕ ಚತುರ್ವಿಂಶತಿ ಶತತಮ ಶ್ರೀ ವೀರ ನಿರ್ವಾಣ ಸಂವತ್ಸರೇ ಅಷ್ಟಮಹಾ ಪ್ರಾತಿಹಾರ್ಯಾದಿ ಶೋಭಿತ ಶ್ರೀ ಮದರ್ಹತ್ಪರಮೇಶ್ವರ ಪ್ರತಿಮಾ ಸನ್ನಿಧೌ ಅಹಂ ಅಷ್ಟಾಹ್ನಿಕಾ ವ್ರತಸ್ಯ ಸಂಕಲ್ಪಂ ಕರಿಷ್ಯೇ ಅಸ್ಯ ವ್ರತಸ್ಯ ಸಮಾಪ್ತಿಪರ್ಯಂತಂ ಮೇ ಸಾವದ್ಯ ತ್ಯಾಗಃ ಗೃಹಸ್ಥಾಶ್ರಮಜನ್ಯಾರಂಭಪರಿಗ್ರಹಾದೀನಾಮಪಿ ತ್ಯಾಗಃ॥

ಈ ರೀತಿಯ ಸಂಕಲ್ಪ ಪೂರ್ವಕವಾಗಿ ವ್ರತವನ್ನು ಧರಿಸಿ ಭೋಜನ ಮಾಡಬೇಕು. ಇದೇ ದಿನದಾರಭ್ಯ ಗೃಹಸ್ಥಾಶ್ರಮ ಸಂಬಂಧವಾದ ಪರಿಗ್ರಹಗಳನ್ನು ತ್ಯಾಗಮಾಡಿ ಶುಭಧ್ಯಾನದಲ್ಲಿರಬೇಕು. ರಾತ್ರಿಯಲ್ಲಿ ಬರೇ ಚಾಪೆಯ ಮೇಲೆ ಮಲಗಬೇಕು ಸಚಿತ್ತವಸ್ತುಗಳನ್ನು ತ್ಯಾಗ ಮಾಡಿ ಸಾಮಾಯಿಕಾದಿ ಕ್ರಿಯೆಗಳನ್ನು ಆಚರಿಸುತ್ತಿರಬೇಕು. ಅಷ್ಟಮೀ ತಿಥಿಯಲ್ಲಿ ನಂದೀಶ್ವರ ಮಂಟಪವನ್ನು ಸ್ಥಾಪಿಸಿ ಅಲಂಕಾರಿಸಿ ಅಷ್ಟದ್ರವ್ಯಗಳಿಂದ ನಂದೀಶ್ವರ ಸಂಬಂಧಿಯಾದ ಐವತ್ತೆರಡು ಜಿನಚೈತ್ಯಾಲಯಗಳ ಪೂಜೆಯನ್ನು ಮಾಡಬೇಕು. ಪೂಜಾನಂತರ ನಂದೀಶ್ವರ ವ್ರತದ ಕಥೆಯನ್ನು ಓದಬೇಕು. ಅಥವಾ ಓದಿಸಬೇಕು. ಆಮೇಲೆ-

ಓಂ ಹ್ರೀಂ ನಂದೀಶ್ವರ ದ್ವೀಪ ಜಿನಾಲಯಸ್ಥ ಜಿನಬಿಂಬೇಭ್ಯೋ ನಮಃ ಎಂಬ ಈ ಮಂತ್ರದ 108 ಜಪ ಮಾಡಬೇಕು. ಪುನಃ ನವಮೀ ದಶಮೀ ತಿಥಿಯಲ್ಲಿ ಮೊದಲಿನ ದಿನದಂತೆ ಪೂಜಾದಿಗಳನ್ನು ಮುಗಿಸಿ ಓಂ ಹ್ರೀಂ ಅಷ್ಟ ಮಹಾ ವಿಭೂತಿ ಸಂಜ್ಞಾಯೈ ನಮಃ ಈ ಮಂತ್ರವನ್ನು ಜಪಿಸಬೇಕು.

ಏಕಾದಶಿಯಲ್ಲಿ ಪೂರ್ವೋಕ್ತ ವಿಧಿ ತೀರಿಸಿ-ಓಂ ಹ್ರೀಂ ಚತುರ್ಮುಖ ಸಂಜ್ಞಾಯೈ ನಮಃ ಎಂಬ ಮಂತ್ರದ ಜಪ ಮಾಡಬೇಕು.

ದ್ವಾದಶಿಯಲ್ಲಿ-ಓಂ ಹ್ರೀಂ ಪಂಚಮಹಾಲಕ್ಷಣಸಂಜ್ಞಾಯೈ ನಮಃ ಎಂದೂ ತ್ರಯೋದಶಿಯಲ್ಲಿ ಓಂ ಹ್ರೀಂ ಸ್ವರ್ಗಸೋಪಾನ ಸಂಜ್ಞಾಯೈ ನಮಃ ಎಂದೂ ಚತುರ್ದಶಿಯಲ್ಲಿ ಓಂ ಹ್ರೀಂ ಸಿದ್ಧಚಕ್ರಾಯೆ ನಮಃ ಎಂದೂ ಪೌರ್ಣಮೀಯಲ್ಲಿ ಓಂ ಹ್ರೀಃ ಇಂದ್ರಧ್ವಜಸಂಜ್ಞಾಯೈ ನಮಃ

ಈ ಪ್ರಕಾರ ಒಂದೊಂದು ತಿಥಿಯಲ್ಲಿ ಒಂದೊಂದು ವಿಧದ ಮಂತ್ರಗಳ 108 ಜಪ ಮಾಡುತ್ತ ಬರಬೇಕು.

ವ್ರತ ಸಮಾಪ್ತಿಯ ದಿನದಲ್ಲಿ ಪಾಡ್ಯತಿಥಿಯಲ್ಲಿ ಅಭಿಷೇಕ, ಪೂಜೆಗಳನ್ನು ನಡಿಸಿ ಈ ಕೆಳಗಿನ ಸಂಕಲ್ಪವನ್ನು ಹೇಳಿ ಭಗವಂತನಿಗೆ ಉತ್ತಮತರದ ಫಲಗಳನ್ನು ಪುಷ್ಪಗಳನ್ನು ಅರ್ಪಿಸಿ ಏಕಾಶನವನ್ನು ಮಾಡಬೇಕು.

ಓಂ ಆದ್ಯಾನಾಂ ಆದ್ಯೆ ಜಂಬೂದ್ವೀಪೆ ಭರತಕ್ಷೇತ್ರೆ (ತಾನಿರುವ ಊರ ಹೆಸರು) ಶುಭ ಆಷಾಢಮಾಸೆ ಕೃಷ್ಣಪಕ್ಷೆ ಅದ್ಯ ಪ್ರತಿಪದಾಯಾಂ ಶ್ರೀಮದರ್ಹತ್ಪ್ರತಿಮಾ ಸನ್ನಿಧೌ ಪೂರ್ವಂ ಯದ್ ವ್ರತಂ ಗೃಹೀತಂ ತಸ್ಯ ಪರಿಸಮಾಪ್ತಿಂ ಕರಿಷ್ಯೆ ಅಹಂ. ಪ್ರಮಾದಾಜ್ಞಾನ ವಶಾತ್ ವ್ರತೇ ಜಾಯಮಾನದೋಷಾಃ ಶಾಂತಿಂ ಉಪಯಾಂತಿ



ಓಂ ಹ್ರೀಂ ಝ್ವೀಂ ಕ್ಷ್ವೀಂ ಸ್ವಾಹಾ ಶ್ರೀಮಜ್ಜಿನೇಂದ್ರ ಚರಣೇಷು ಆನಂದ ಭಕ್ತಿಃ ಸದಾ ಅಸ್ತು ಸಮಾಧಿ ಮರಣಂ ಭವತು ಪಾಪವಿನಾಶನಂ ಭವತ್ತು. ಓಂ ಹ್ರೀಂ ಅ ಸಿ ಆ ಉ ಸಾ ನಮಃ ಸರ್ವಶಾಂತಿರ್ಭವತು ಸ್ವಾಹಾ॥

ಈವರೆಗೆ ಹೇಳಿದ ವಿಧಿಯಂತೆ ಅಷ್ಟಾಹ್ನಿಕ ವಿಧಿಯನ್ನು ಆಚರಿಸುವವರಿಗೆ ಪೂರ್ಣ ಫಲವು ಲಭಿಸುವುದು. ಮತ್ತು ಯಾರು ನಿಯಮಿತ ರೂಪದಿಂದ ನಡೆಸುತ್ತಾರೋ ಅವರಿಗೆ ಪೂರ್ಣ ಫಲ ಲಭಿಸುವುದಿಲ್ಲ. ಭಾವನೆಗೆ ತಕ್ಕ ಫಲ ದೊರೆಯುವುದು.

ವ್ರತದ ದಿವಸಗಳಲ್ಲಿ ಕ್ರೋಧಾದಿ ಕಷಾಯ ಭಾವಗಳನ್ನು ಮಂದದಲ್ಲಿರಿಸ ತಕ್ಕದ್ದು. ಕಷಾಯಗಳು ಮಂದವಾದರೆ ವ್ರತದ ಫಲವು ಪೂರ್ಣ ಲಭಿಸುವುದು. ಜೈನಧರ್ಮದಲ್ಲಿ ಬಂಧಮೋಕ್ಷಕ್ಕೆ ಭಾವವೇ ಪ್ರಧಾನವೆಂದು ಹೇಳಿರುತ್ತಾರೆ.

ಈ ಅಷ್ಟಾಹ್ನಿಕ ಪರ್ವವು ಬಹಳ ಪ್ರಾಚೀನವಾದುದು. ಇದರಿಂದ ಅನೇಕ ಲೌಕಿಕ ಪಾರಮಾರ್ಥಿಕ ಫಲಗಳು ಪ್ರಾಪ್ತವಾಗುತ್ತವೆ. ಈ ವ್ರತದಿಂದ ಸ್ತ್ರೀ ಪರ್ಯಾಯ ನಾಶವಾಗಿ ಪುರುಷಪರ್ಯಾಯ ಲಭಿಸಿ ಅನಂತ ಸುಖರೂಪವಾದ ಮೋಕ್ಷವೂ ಲಭಿಸುವ ಉತ್ತಮವಾದ ದ್ರವ್ಯ, ಕ್ಷೇತ್ರ, ಕಾಲ, ಭವ, ಭಾವಗಳನ್ನು ಹೊಂದಿ ಇಹಪರ ಸುಖವನ್ನು ಪಡೆದು ಅನಂತರ ಅವಿನಾಶೀ ಮೋಕ್ಷವನ್ನು ಹೊಂದುವರು.

ಭೂಲೋಕದ 8ನೆಯ ದ್ವೀಪವೇ ನಂದೀಶ್ವರ ದ್ವೀಪ. ಆದರ ನಾಲ್ಕೂ ದಿಕ್ಕಿನಲ್ಲಿ 13-13 ರಂತೆ 52 ಅಕೃತ್ರಿಯ ಚೈತ್ಯಾಲಯಗಳಿವೆ. ಅಷ್ಟಾಹ್ನಿಕದಲ್ಲಿ ದೇವತೆಗಳು ಅಲ್ಲಿಗೆ ಹೋಗಿ ವೈಭಾವದಿಂದ ಪೂಜೆ, ಗಾಯನ ನೃತ್ಯ-ವಂದನೆ ಮಾಡಿ ನಲಿಯುತ್ತಾರೆ. ಇಂತಹ ಲಬ್ಧಿ ನಮಗೂ ದೊರೆಯಲೆಂದು ಗೃಹಸ್ಥರು ಈ ಅಷ್ಟಾಹ್ನಿಕ ಪೂಜೆ ನೋಂಪಿ ಮಾಡುತ್ತಾರೆ.

## 33. ತುಮಕೂರು ಜಿಲ್ಲಾ ಜಿನಮಂದಿರಗಳ ಸಂಕ್ಷಿಪ್ತ ವಿವರಣೆ

ತುಮಕೂರು ಜಿಲ್ಲೆಯು ಕರ್ನಾಟಕರಾಜ್ಯದ ಒಳ್ಳೆಯ ಆಯಕಟ್ಟಿನಲ್ಲಿದೆ. ಹಿಂದೊಂದು ಕಾಲದಲ್ಲಿ ಈ ಜಿಲ್ಲೆಯಾದ್ಯಂತ ಜೈನ ಧರ್ಮ ಪ್ರಭಾವನೆಯು ಬಹು

ಪ್ರಭಾವಕಾರಿಯಾಗಿ ನಡೆಯುತ್ತಿದ್ದು, ಹಲವು ಸಣ್ಣ ಪುಟ್ಟ ಜೈನ ಸಂಸ್ಥಾನಗಳು ಆಡಳಿತ ನಡೆಸಿದ ಕುರುಹುಗಳು ಅಲ್ಲಲ್ಲಿ ಸಿಗುತ್ತವೆ. ಹಿಂದೆ ಪ್ರಸಿದ್ಧಿ ಪಡೆದಿದ್ದ ಹಲವು ಸ್ಥಳಗಳಲ್ಲಿ ಈಗ ಜೈನರಿಲ್ಲ. ಜಿನ ಮಂದಿರಗಳಿಲ್ಲ, ಅಲ್ಲಲ್ಲಿದ್ದ ಶ್ರಾವಕ ಮಂಡಲಿಯು ಯಾವ ಕಾರಣದಿಂದಲೋ ಪರಸ್ಥಳಗಳಿಗೆ ಹೋಗಿ ನೆಲೆಸಿದರು. ಇದರಿಂದಾಗಿ ಹಲವು ಕಡೇ ಬರೀ ಜಿನಮಂದಿಗಳಿದ್ದು ಪೂಜಾವ್ಯವಸ್ಥೆಯೂ ಇಲ್ಲದೆ ಶಿಥಿಲವಾಗಿವೆ. ತುಮಕೂರು ಜಿಲ್ಲೆಯ ಹಲವು ಕ್ಷೇತ್ರಗಳಲ್ಲಿ ಹಿಂದೆ ಹೆಸರಾಂತ ವಿದ್ವಾಂಸರೂ, ಕವಿಗಳೂ, ದಾನಿಗಳೂ, ತ್ಯಾಗಿಗಳೂ, ರಾಜರೂ, ಪ್ರಧಾನಿಗಳೂ ಸೇನಾನಾಯಕರೂ, ಮತ್ತು ಹಲವು ಮಂದಿ ಮಹಿಳಾ ಮಣಿಗಳೂ, ಇದ್ದು ಬಾಳಿ ಬೆಳಗಿದ್ದರೆಂದು ತಿಳಿಯುತ್ತದೆ.

**1. ತುಮಕೂರು** :– ಜಿಲ್ಲೆಯ ಮುಖ್ಯಸ್ಥಳ. ಇಲ್ಲಿನ ಚಿಕ್ಕಪೇಟೆಯಲ್ಲಿ ನವ್ಯ ಭವ್ಯ, ದಿವ್ಯವಾದ ಶ್ರೀ ಪಾರ್ಶ್ವನಾಥ ಸ್ವಾಮಿಯ ಬಸದಿ ಇದೆ. ಇದು ಪೂಜೆ ಮತ್ತು ಸ್ವಚ್ಛತೆಗೆ ಹೆಸರಾಗಿ ಸತ್ಪರಿಣಾಮದಾಯಕವಾಗಿದೆ. ಇಲ್ಲಿ ಸುಮಾರು 500 ಶ್ರಾವಕರ ಮನೆಗಳಿವೆ. ಈ ಊರಿನಲ್ಲಿ ಶ್ರೀ ಪಾರ್ಶ್ವನಾಥ ಜೈನ ವಿದ್ಯಾರ್ಥಿ ನಿಲಯವು ಇದೆ. ತ್ರಿಲೋಕ ಭವನ, ಸಮುದಾಯ ಭವನಗಳೂ ಇವೆ.

**2. ಮಂದರಗಿರಿ** :– (ಬಸ್ತಿ ಬೆಟ್ಟ) ತುಮಕೂರಿನಿಂದ ಬೆಂಗಳೂರು ಮಾರ್ಗದಲ್ಲಿ 6 ಮೈಲಿ ದೂರದಲ್ಲಿರುವ ಒಂದು ಪ್ರಸಿದ್ಧ ಕ್ಷೇತ್ರ, ಬಹುಪ್ರಾಚೀನವಾದುದು. ಇದು ಒಂದೇ ಕಲ್ಲಿನ ಗುಡ್ಡದ ಮೇಲೆ ವಿಶಾಲವಾದ ಪ್ರಾಕಾರದ ಒಳಗೆ ನಾಲ್ಕು ಜಿನಮಂದಿರಗಳೂ ಗಣಧರಪಾದವೂ ಇವೆ. ಶ್ರೀ ಚಂದ್ರಪ್ರಭರ, ಶ್ರೀ ಪಾರ್ಶ್ವನಾಥರ ಮಂದಿರಗಳು ಇವೆ. ಹತ್ತಲು ಮೆಟ್ಟಲು ಇವೆ, ಮೆಟ್ಟಲು ಪಕ್ಕದಲ್ಲಿ ಬ್ರಹ್ಮದೇವರ ಮಂದಿರವಿದೆ. ಬೆಟ್ಟದ ಹಿಂಬದಿಯಲ್ಲಿ ಮೈದಾಳದ ವಿಶಾಲವಾದ ಕೆರೆ ಇದೆ. ತುಮಕೂರಿನ ಶ್ರಾವಕರು ವರ್ಷಕೊಮ್ಮೆ ಪೂಜೋತ್ಸವವನ್ನು ಮಾಡುತ್ತಾರೆ. ಶ್ರೀ ಚಂದ್ರ ಪ್ರಭರ ಬೃಹದ್ ಬಿಂಬವಿದೆ.

**3. ಕುಚ್ಚಂಗಿ** :– ತುಮಕೂರಿನ ಉತ್ತರಕ್ಕೆ 6 ಮೈಲಿ ದೂರದಲ್ಲಿದೆ. ಇಲ್ಲಿ ಬಹು ಪ್ರಾಚೀನವಾದ ಪಾರ್ಶ್ವನಾಥ ಸ್ವಾಮಿಯ ಮಂದಿರವಿತ್ತು. ಶಿಥಿಲವಾಗಿತ್ತು. ಅದನ್ನು ಕೆಡವಿ ನೂತನ ಮಂದಿರ ನಿರ್ಮಾಣಮಾಡಿದ್ದಾರೆ. ಇಲ್ಲಿ ಹಿಂದೆ ಬಹು ವೈಭವದಿಂದ ಪೂಜಾ ಉತ್ಸವಗಳು ನಡೆಯುತ್ತಿದ್ದುವಂತೆ, ಇಲ್ಲಿ ಪುರೋಹಿತರ ಒಂದು ಮನೆ ಮಾತ್ರವಿದೆ.

**4. ಬೆಳ್ಳಾವಿ** :– ತುಮಕೂರಿಗೆ 6 ಮೈಲಿ ದೂರದಲ್ಲಿದೆ. ಈಗ 2-3 ಮಾತ್ರ



ಜೈನರ ಮನೆಗಳಿವೆ. ಜಿನ ಮಂದಿರವಿಲ್ಲ.

**5. ತೋವಿನ ಕೆರೆ** :– ತುಮಕೂರಿಗೆ 18 ಮೈಲಿ ದೂರದಲ್ಲಿದೆ. ಇಲ್ಲಿ ಶ್ರೀ ಚಂದ್ರನಾಥ ಸ್ವಾಮಿಯ ಮಂದಿರವಿದೆ. 15-20 ಶ್ರಾವಕರ ಮನೆಗಳಿವೆ. ಶ್ರೀ ಚಂದ್ರಸಾಗರ ವರ್ಣಿಯವರು ಇದೇ ಸ್ಥಳದವರು.

**6. ಗುಬ್ಬಿ** :– ಶ್ರೀ ಆದಿನಾಥಸ್ವಾಮಿಯ ಬಸದಿ, ಅಮೃತಶಿಲೆಯ ಶ್ರೀ ಬಾಹುಬಲಿಸ್ವಾಮಿ ಮತ್ತು ಬ್ರಹ್ಮದೇವರ ಮಂದಿರ ಮಾನಸ್ಥಂಭ ಇವೆ.

**7. ಸಂಪಿಗೆ** :– ಹಿಂದೆ ಜೈನ ಬಸದಿ ಮತ್ತು ಜೈನರಿದ್ದ ಸ್ಥಳ. ಆದರೆ ಈಗ ಅಲ್ಲಿ ಯಾರೂ ಇಲ್ಲ. ಹಾಳು ಬಿದ್ದ ಮಂದಿರದಲ್ಲಿದ್ದ ಆದಿನಾಥರ ಮೂರ್ತಿಯನ್ನು ತಂದು ಗುಬ್ಬಿಯ ಜಿನ ಮಂದಿರದಲ್ಲಿ ಸ್ಥಾಪಿಸಿದರು. ಈ ಸ್ವಾಮಿಯ ಹೆಸರಿನಲ್ಲಿ ಬಹು ಬೆಲೆಬಾಳುವ ಜಮೀನು ಮಾನ್ಯಗಳು ಈ ಊರಿನಲ್ಲಿದ್ದವು.

**8. ನಿಟ್ಟೂರು** :– ಗುಬ್ಬಿಗೆ 5 ಮೈಲಿ ದೂರದಲ್ಲಿದೆ. ಬಹುಪ್ರಾಚೀನವಾದ ಚೋಳರ ಕಾಲದ ಶ್ರೀ ಶಾಂತಿನಾಥರ ಮಂದಿರವಿದೆ. ಈ ಮಂದಿರದ ಶಿಲ್ಪ ಕಲೆ ಅದ್ಭುತವಾದುದು. ಮಂದಿರದ ಒಳಾಂಗಣದಲ್ಲಿ ಮೇಲ್ಛಾವಣಿಯಲ್ಲಿ ಶ್ರೀ ಜ್ವಾಲಾಮಾಲಿನಿ ಅಮ್ಮನವರ ಪ್ರತಿಷ್ಠಾಪನೆಯಾಗಿದೆ. ನಾನಾಕಡೆಯಿಂದ ಭಕ್ತರು ಬರುತ್ತಾರೆ. ಇದೊಂದು ಅತಿಶಯ ಕ್ಷೇತ್ರ.

**9. ಬಿದರೆ** :– ಗುಬ್ಬಿಗೆ ಉತ್ತರದಲ್ಲಿ 6 ಮೈಲಿ ದೂರದಲ್ಲಿದೆ. ಬಹುಪ್ರಾಚೀನವಾದ ಶ್ರೀ ಸುಪಾರ್ಶ್ವನಾಥ ಸ್ವಾಮಿಯ ಮಂದಿರವಿದೆ. ಹಿಂದೆ ಇದೊಂದು ಸಂಸ್ಥಾನವಾಗಿತ್ತು. ಪಂಡಿತರೂ ಕವಿಗಳೂ ಇದ್ದ ಸ್ಥಳ ಬಿದರೆ ಪಾಯಸಾಗರರು ಇದೇ ಸ್ಥಳದವರು. ಈ ಊರಿಗೆ 2-3 ಮೈಲಿದೂರದಲ್ಲಿ ಜೈನರ ಹಳ್ಳಿ ಎಂಬ ಗ್ರಾಮವಿದೆ. ಇಲ್ಲಿ ಬಹುಹಿಂದೆ ಜೈನರಿದ್ದ ಜಿನ ಮಂದಿರಗಳಿದ್ದ ಕುರುಹುಗಳಿವೆ ಆದರೆ ಈಗ ಅಲ್ಲಿ ಜೈನರಿಲ್ಲ.

**10. ಅದಲಗೆರೆ** :– ಇದು ನಿಟ್ಟೂರಿನ ಸಮೀಪದಲ್ಲಿದೆ. ಇಲ್ಲಿ 15-20 ಶ್ರಾವಕರ ಮನೆಗಳಿವೆ. ಜಿನಮಂದಿರವಿಲ್ಲ. ಶ್ರುತ ಭಂಡಾರ ಭಜನಾ ಮಂದಿರಗಳಿವೆ.

**11. ಹಟ್ಣ** :– ತಿಪಟೂರು ತಾಲ್ಲೋಕಿನ ಕಿಬ್ಬನ ಹಳ್ಳಿ ಅಡ್ಡ ರಸ್ತೆಗೆ ಸಮೀಪದಲ್ಲಿದೆ. ಹಿಂದೆ ಈ ಊರು ಶಿಥಿಲವಾಗಿತ್ತು. ಹೊಸ ಊರನ್ನು ಕಟ್ಟಲಾಗಿದೆ. ಶಿಥಿಲವಾದ ಮಂದಿರದಲ್ಲಿದ್ದ ಶ್ರೀ ಪಾರ್ಶ್ವನಾಥರ ಬಿಂಬವನ್ನು ನೂತನ

ಮಂದಿರದಲ್ಲಿ ಸ್ಥಾಪಿಸಿದ್ದಾರೆ. ಒಂದು ಶಾಸನವು ಇದೆ. ಮರಿಯಾನೆ ದಂಡನಾಯಕ ನಿರ್ಮಿಸಿದ್ದ ಜಿನಮಂದಿರವಿತ್ತು.

**12. ಕಂದಿ ಕೆರೆ :–** ಇದು ಚಿಕ್ಕನಾಯ್ಕನ ಹಳ್ಳಿ ತಾಲ್ಲೋಕಿನಲ್ಲಿದೆ. ಹಿಂದೆ ಇದೊಂದು ಸಂಸ್ಥಾನವಾಗಿತ್ತು. ಸ್ಥಳ ಬಹು ಶಿಥಿಲವಾದ ಹಾಗೂ ಪ್ರಾಚೀನವಾದ ಶ್ರೀ ಶಾಂತಿ ನಾಥಸ್ವಾಮಿಯ ಬಸದಿ ಇದೆ.

**13. ಮಾಯಸಂದ್ರ :–** ಇದು ತುರುವೇಕೆರೆ ತಾಲ್ಲೋಕಿನಲ್ಲಿದೆ. ಪೂಜ್ಯ ರಾಜೀಮತಿ ಆರ್ಯಿಕಾರವರ ನೇತೃತ್ವದಲ್ಲಿ ಶ್ರೀ ಪಾರ್ಶ್ವನಾಥಸ್ವಾಮಿಯ ನೂತನ ಮಂದಿರವು ಅಮೃತಶಿಲೆಯಲ್ಲಿ ನಿರ್ಮಾಣವಾಗಿದೆ.

**14. ತಂಡಗ :–** ತುರುವೇಕೆರೆ ತಾಲ್ಲೋಕಿನಲ್ಲಿದೆ ಇಲ್ಲಿ ಬಸದಿ ಇಲ್ಲ. 20-25 ಶ್ರಾವಕರ ಮನೆಗಳಿವೆ. ಜಿನಮಂದಿರ ಕಟ್ಟುವ ಪ್ರಯತ್ನದಲ್ಲಿದ್ದಾರೆ.

**15. ಕುಣಿಗಲು :–** ಶ್ರೀಪಾರ್ಶ್ವನಾಥ ಸ್ವಾಮಿಯ ಹೊಸ ಮಂದಿರವಿದೆ.

**16. ಮಧುಗಿರಿ :–** ತಾಲ್ಲೋಕ್ ಮುಖ್ಯಸ್ಥಳ, ಬೆಟ್ಟದ ಬುಡದಲ್ಲಿ ಬಹು ಪ್ರಾಚೀನವಾದ ಶ್ರೀ ಮಲ್ಲಿನಾಥ ಸ್ವಾಮಿಯ ಬಸದಿ ಇದೆ.

**17. ಮಿಡಿಗೇಶಿ:–** ಇದೂ ಮಧುಗಿರಿ ತಾಲ್ಲೋಕಿನಲ್ಲಿದೆ. ಇಲ್ಲಿ ಅತಿ ಪ್ರಾಚೀನವಾದ ಶ್ರೀ ಸುಪಾರ್ಶ್ವನಾಥ ಸ್ವಾಮಿಯ ಬಸದಿ ಇದೆ. ಶಿಲಾಶಾಸನ ಮತ್ತು ಬ್ರಹ್ಮ ದೇವರ ಮಂದಿರವೂ ಇದೆ.

**18. ಅಕ್ಕಿರಾಂಪುರ :–** ಇದು ಕೊರಟಗೆರೆ ತಾಲ್ಲೋಕಿನಲ್ಲಿದೆ. ಬಹುಪ್ರಾಚೀನವೂ ಶಿಥಿಲವೂ ಆದ ಶ್ರೀ ಅನಂತನಾಥ ಸ್ವಾಮಿಯ ಮಂದಿರವಿದೆ.

**19. ನಿಡಗಲ್ :–** ಇದು ಪಾವುಗಡ ತಾಲ್ಲೋಕಿನಲ್ಲಿದೆ. ಆಂಧ್ರದ ಗಡಿ. ಇಲ್ಲಿ ಒಂದು ದುರ್ಗದ ಮೇಲೆ ಶ್ರೀ ಪಾರ್ಶ್ವನಾಥ ಬಸದಿ ಇದೆ. ತುಂಬಾ ಶಿಥಿಲವಾಗಿದೆ. ಇನ್ನೂ ಹಲವು ಬಸದಿಗಳಿದ್ದುವೆಂಬುದಕ್ಕೆ ಕುರುಹುಗಳಿವೆ. ಹಿಂದೆ ಇದು ಒಂದು ಸಂಸ್ಥಾನವಾಗಿತ್ತು, ಶಾಸನಗಳಿವೆ.

**20. ಶೀತಕಲ್ಲು :–** ತುಮಕೂರು ತಾಲ್ಲೋಕಿನಲ್ಲಿದೆ. ಶಿಥಿಲವಾಗಿದ್ದ ಶ್ರೀ ಪಾರ್ಶ್ವನಾಥ ಜಿನಮಂದಿರವನ್ನು ಜೀರ್ಣೋದ್ಧಾರ ಮಾಡಿದ್ದಾರೆ. ಇಲ್ಲಿ ಶ್ರೀ ಪದ್ಮಾವತಿ ಅಮ್ಮನವರ ಪೂಜೆ ವಿಶೇಷ.

**21. ಬೆಳಗುಲಿ :–** ಇದು ಚಿಕ್ಕನಾಯ್ಕನಹಳ್ಳಿ ತಾಲ್ಲೋಕಿನಲ್ಲಿದೆ. ಇಲ್ಲಿ ಶ್ರೀ ಶಾಂತಿನಾಥಸ್ವಾಮಿಯ ಜಿನ ಮಂದಿರವಿದೆ. ಇಲ್ಲಿ 20 ಜೈನರ ಮನೆಗಳಿವೆ.



**22. ಮುಸಕೊಂಡ್ಲಿ :–** ಇದು ಗುಬ್ಬಿ ತಾಲ್ಲೋಕಿನಲ್ಲಿದೆ. ಇಲ್ಲಿ 7-8 ಜೈನರ ಮನೆಗಳಿವೆ. ಹೊಸ ಜಿನಮಂದಿರದ ಕಾರ್ಯ ನಡೆದಿದೆ.

ವಡ್ಡಗೆರೆ, ಬ್ಯಾಲ್ಯ, ಅರಸಾಪುರ ಶ್ರಾವಂಡನಹಳ್ಳಿ ಕಲಿದೇವ ಪುರಗಳಲ್ಲಿ ಜೈನರಿದ್ದಾರೆ ಜಿನಮಂದಿರಗಳಿಲ್ಲ.

## 34. ಯಾರ ಕೈ ಸುಂದರ

ವಿಜಯ ಪುರವೆಂಬ ನಗರದಲ್ಲಿ ಒಂದು ಜೈನರ ಬೀದಿ. ಅಲ್ಲಿ ಮಾಲಾ, ಲೀಲಾ, ಲೋಲ ಮತ್ತು ಶೀಲ ಎಂಬ ಶ್ರಾವಕಿಯರಿದ್ದರು. ಅವರು ಅಕ್ಕ ಪಕ್ಕ ಎದುರು ಬದರು ಮನೆಯವರಾಗಿದ್ದರು. ಅವರಲ್ಲಿ ಶೀಲ ಎಂಬುವಳು ಬಡವಳೂ ಅಲ್ಲ ಮಧ್ಯಮವರ್ಗಕ್ಕೆ ಸೇರಿದವಳು. ಅವರು ನಾಲ್ವರೂ ಒಮ್ಮೊಮ್ಮೆ ಒಟ್ಟಿಗೆಸೇರುತ್ತಿದ್ದರು. ಅವರಲ್ಲಿ ಒಬ್ಬೊಬ್ಬರಿಗೆ ಒಂದೊಂದು ವಿಷಯದಲ್ಲಿ ಹೆಚ್ಚು ಅಭಿರುಚಿ ಮತ್ತು ಹವ್ಯಾಸವಿತ್ತು. ಮಾಲಳಿಗೆ ನೀಟಾಗಿ ಉಡುಗೆ ತೊಡಿಗೆ ಮಾಡುವುದರಲ್ಲಿದ್ದರೆ ಲೀಲಳಿಗೆ ರುಚಿರುಚಿಯಾದ ತಿಂಡಿತಿನಿಸುಗಳನ್ನು ಮಾಡಿ ತಿನ್ನುವುದರಲ್ಲಿತ್ತು. ಲೋಲಳಿಗೆ ಅವರಿವರ ಮನೆಯ ವಿಷಯವನ್ನು ಎತ್ತಾಡಿ ಇತರರನ್ನು ಆಡಿಕೊಂಡು ಗೇಲಿಮಾಡಿ ನಗುವುದು ಹರಟೆ ಹೊಡೆಯುವ ಹವ್ಯಾಸವಿತ್ತು. ಶೀಲಳು ಹೆಸರಿಗೆತಕ್ಕಂತೆ ಧಾರ್ಮಿಕ ಕ್ರಿಯೆಗಳಲ್ಲಿ ಧರ್ಮ ಗ್ರಂಥಗಳನ್ನು ಓದುವುದರಲ್ಲಿ ಧಾರ್ಮಿಕವಿಷಯಗಳನ್ನು ಮಾತಾಡುವುದರಲ್ಲಿ ಆಸಕ್ತಿ ಇತ್ತು. ಆದರೆ ಈಕೆ ಆ ಮೂವರಿಗಿಂತ ಕಪ್ಪಾಗಿದ್ದಳು. ಅಷ್ಟು ರೂಪಸ್ಥಳಲ್ಲದಿದ್ದರೂ ಕುರೂಪಿಯಂತೂ ಅಲ್ಲ. ಈಕೆಯ ಕಪ್ಪುಬಣ್ಣವನ್ನು ಆ ಮೂವರೂ ಆಗಾಗ ಯಾವುದಾದರೂ ನೆಪ ಮಾಡಿಕೊಂಡು ಹೀಯಾಳಿಸುತ್ತಿದ್ದರು. ಆದರೂ ಶೀಲಳು ಮಾತ್ರ ಅವರ ಬಗ್ಗೆ ಬೇಜಾರಾಗದೇ ತನ್ನ ಪಾಡಿಗೆ ನೆಮ್ಮದಿಯಿಂದ ನೆರೆಹೊರೆಯವರಲ್ಲಿ ಮಿತ್ರತ್ವದಿಂದಲೇ ಇದ್ದಳು.

ಒಮ್ಮೆ ಆವರೆಲ್ಲಾ ಊರ ಹೊರಭಾಗದಲ್ಲಿದ್ದ ಹೊಳೆಯ ದಂಡೆಯ

ಉಪವನಕ್ಕೆ ವಿಹಾರಕ್ಕೆಂದು ಹೋದರು. ವಸಂತ ಚಿಗುರು ಮಾವಿನಮರಗಳ ಸೊಂಪು, ಕೋಗಿಲೆಗಳ ಕೂಗಿನ ಇಂಪು. ಮರಗಳತಂಪು, ಹೊಳೆಯದಡದ ಪೆಂಪುಗಳಿಂದ ಪ್ರಕೃತಿಯ ಸೊಬಗನ್ನು ನೋಡಿ ತಣಿದು ಸಂಜೆಯ ವೇಳೆಯಲ್ಲಿ ಒಂದೆಡೆ ತಾವು ತಂದಿದ್ದ ತಿಂಡಿಯನ್ನು ತಿನ್ನುತ್ತಾ ಕುಳಿತರು.

ಹರಟೆಯ ಮಲ್ಲಿ ಲೋಲಳು ಮಾತಿಗಾರಂಭಿಸಿದಳು "ಯಾರಕೈ ಸುಂದರವಾಗಿವೆ" ಎಂದಳು. "ನನ್ನ ಕೈ ಬೆಳ್ಳಗಿವೆ ಅಂದವಾಗಿದೆ" ಎಂದಳು ಮಾಲಾ. ನನ್ನ ಕೈ ನೋಡಿ ನೀಳವಾದ ಬೆರಳು ಉದ್ದನೆಯ ಉಗುರುಗಳಿಂದ ಹೆಚ್ಚು ಸುಂದರವಾಗಿ ಕೆಂಪಗಿವೆ ಎಂದಳು ಲೀಲಾ. "ಇಲ್ಲಾ ಇಲ್ಲಾ ಇಲ್ಲಿ ನೋಡಿ ನನ್ನ ಕೈ ಎಷ್ಟು ದುಂಡಗೆ ದಪ್ಪಗೆ ಅಗಲವಾಗಿವೆ. ನನ್ನ ಕೈಗಳೇ ಅತ್ಯಂತ ಸುಂದರವಾದವು" ಎಂದಳು ಲೋಲಾ. ಆದರೆ ಶೀಲಳು ಆ ಬಗ್ಗೆ ಏನನ್ನೂ ಹೇಳಲಿಲ್ಲ. ಮೌನವಾಗಿದ್ದ ಆಕೆಯನ್ನು ಹೀಯಾಳಿಸಿ ಕೀಟಲೆಮಾಡಲು ಅಲ್ಲಿ ನೋಡಿ ನಮ್ಮೆಲ್ಲರಿಗಿಂತ ಆ ಶೀಲಳ ಕೈಗಳೇ ತೊಳೆದ ಕೆಂಡದಂತೆ ಇವೆ. ಎಂದಳು ಲೋಲ. ಅವರೆಲ್ಲಾ "ಹೌದು ಹೌದು" ಎಂದು ಚಪ್ಪಾಳೆ ತಟ್ಟುತ್ತಾ ನಗಲಾರಂಭಿಸಿದರು.

"ನೀವು ನಿಜವನ್ನೇ ಹೇಳಿದಿರಿ" ಎಂದು ಶೀಲಳು ಸ್ವಲ್ಪವೂ ಸಿಟ್ಟಾಗದೆ ಹೇಳಿದಳು.

ಅಷ್ಟರಲ್ಲಿ ಒಬ್ಬ ಮುದುಕಿ ಕೋಲೂರುತ್ತಾ ತಡವರಿಸುತ್ತಾ ಅವರ ಎದುರಿಗೆ ಬಂದು "ಅಮ್ಮಾ ಹೊಟ್ಟೆ ಹಸಿದಿದೆ ಸ್ವಲ್ಪ ತಿಂಡಿ ಕೊಡಿ" ಎಂದಳು "ಹೂಂ ನಿನಗೇ ಕೊಡಲು ತಂದಿರುವುದು ಹೋಗು" ಎಂದು ಗದರಿಸಿ ಮಾಲಳು, "ನೋಡು ಅಲ್ಲಿ ಹೋಗು ಅವಳು ತುಂಬಾ ಧರ್ಮಿಷ್ಠೆ ಅವಳು ಕೊಡುತ್ತಾಳೆ ಒಣ ರೊಟ್ಟಿಯನ್ನು ತಿನ್ನು" ಎಂದು ಶೀಲಳ ಕಡೆ ಕೈ ತೋರಿಸಿದಳು. ಆ ಮುದುಕಿ ಆಕೆಯಲ್ಲಿಗೆ ಹೋಗುತ್ತಾ ಎಡವಿಬಿದ್ದಳು. ಅದನ್ನು ನೋಡಿದ ಆ ಮೂವರು ಚಪ್ಪಾಳೆ ತಟ್ಟುತ್ತಾ ನಗಲಾರಂಭಿಸಿದರು. ಇದನ್ನು ಕಂಡ ಶೀಲಳು ಓಡಿಬಂದು ಆ ಮುದಕಿಯನ್ನು ಎತ್ತಿಕೂರಿಸಿ ಸಮಾಧಾನ ಪಡಿಸುತ್ತಾ ತಾನು ತಂದಿದ ತಿಂಡಿಯನ್ನು ಕೊಟ್ಟು ಉಪಚರಿಸಿದಳು. ಈ ಕೆಲಸ ಇವಳಿಗೇ ಸರಿ. ನಮ್ಮ ಸುಂದರವಾದ ಕೈಗಳಿಂದ ಅವಳನ್ನು ಎತ್ತಿ ಕೊಳೆಮಾಡಿಕೊಳ್ಳಬೇಕೆ ನಡಿಯಿರೇ ಹೋಗೋಣ ಎಂದು ಮಾಲ ಲೀಲಾ ಲೋಲ ಎದ್ದು ಹೊರಟರು. ಅಷ್ಟರಲ್ಲಿ ಆ ಮುದುಕಿ ಅವರನ್ನು ತಡೆದು ನಿಲ್ಲಿಸಿ "ಅಮ್ಮಾ ಸುಂದರಿಯರಾ ನನಗೆ ಈಗ ಗೊತ್ತಾಯಿತು ಯಾರ ಕೈಗಳು ಸುಂದರವಾದವುಗಳು ಎಂದು. "ಹಾಗಾದರೆ ಹೇಳು ಹೇಳು ಯಾರ ಕೈಗಳು ಸುಂದರ?



ನನ್ನ ಕೈ ಅಲ್ಲವೆ? ನನ್ನ ಕೈ ಅಲ್ಲವೇ? ಎಂದು ಅವರು ತಮ್ಮ ತಮ್ಮ ಕೈಗಳನ್ನು ಮುಂದೆ ಚಾಚಿ ನಿಂತರು. ಆ ಮುದುಕಿ ಅವರನ್ನು ಹೀಯಾಳಿಸುತ್ತಾ "ಥೂ ಈ ನಿಮ್ಮ ಕೈಗಳು ಬರಡು ಕೈಗಳು ಕಠಿಣ ಹೃದಯದ ಕಠೋರ ಕೈಗಳು. ಧರ್ಮಕಾರ್ಯಮಾಡದ ನಿರರ್ಥಕ ಕೈಗಳು. ದಾನಮಾಡದ ಬರಿಗೈಗಳು. ಪರರಕಡೆ ಕೈ ತೋರಿಸಿ ಆಡಿಕೊಳ್ಳುವ ಕ್ರೂರ ಕೈಗಳು" ಎಂದಳು.

"ಹೌದು ಹೌದು! ನಿನ್ನನ್ನು ಎತ್ತಿ ಉಪಚರಿಸಿದ ಆ ಶೀಲಳ ಕರಿಕೈಗಳೇ ಸುಂದರ ಕೈಗಳು. ಅವಳಿಗೇ ನಿನ್ನ ಬಹುಮಾನ ಕೊಡು" ಎಂದು ಮತ್ತೊಮ್ಮೆ ಅವರೆಲ್ಲಾ ಚಪ್ಪಾಳೆ ತಟ್ಟುತ್ತಾ ನಗಾಡಿದರು. "ನಿಜ ನಿಜ! ಆ ಶೀಲಳ ಕೈಗಳೇ ಸುಂದರವಾದವುಗಳು. ಕೈ ಬೆಳ್ಳಗಿದ್ದು ಮನಸ್ಸು ಕಪ್ಪಗಿದ್ದರೆ ಏನು ಪ್ರಯೋಜನ? ಕೈ ಸುಂದರವಾಗಿದ್ದು ಹೃದಯ ಕಠೋರವಾಗಿದ್ದರೆ ಏನು ಬಂತು? ರೂಪು ಮುಖ್ಯವಲ್ಲ ಗುಣಮುಖ್ಯ. ಅಷ್ಟಕ್ಕೂ ಆಕೆ ಏನು ಕುರೂಪಿಯೇ? ನಿಜವಾಗಿಯೂ ಆಕೆ ತನ್ನ ಕೈಗಳನ್ನು ಸದುಪಯೋಗ ಮಾಡಿಕೊಂಡಿದ್ದಾಳೆ, ಆದುದರಿಂದ ಆಕೆಗೆ ಬಹುಮಾನ" ಎಂದಳು ಆ ಮುದುಕಿ.

"ಕೊಡು ಕೊಡು ಆ ನಿನ್ನ ಊರು ಗೋಲು ಜೋಳಿಗೆಯನ್ನೇ ಬಹುಮಾನಕೊಡು ನಿನ್ನ ವೃತ್ತಿಯನ್ನೇ ಅವಳೂ ಮಾಡಲಿ" ಎಂದಳು ಲೋಲ ಎಲ್ಲರೂ ನಕ್ಕರು. "ಹಾಗೇ ಆಗಲೀ" ಎಂದು ಆ ಮುದುಕಿ ನೆಟ್ಟಗೆ ನಿಂತು ತನ್ನ ಸೀರೆ ಸೆರಗು ಸರಿಪಡಿಸಿ ಕೆದರಿದ ಕೂದಲನ್ನು ನೀವಿಕೊಳ್ಳುತ್ತಾ ಮುಖ ಮತ್ತು ಕೈಗಳಿಗೆ ಬಳಿದುಕೊಂಡಿದ್ದ ಕಪ್ಪನ್ನು ಸೆರಗಿನಿಂದ ಒರಸಿಕೊಳ್ಳುತ್ತಾ "ಅಮ್ಮಾ ಶೀಲಾ ಇಲ್ಲಿ ಬಾ ನಿನ್ನನ್ನು ಇಂದಿನಿಂದ ನಮ್ಮ ಅರಮನೆಯ ಅಂತಃಪುರದಲ್ಲಿ ನನ್ನ ಸೊಸೆಯ ಆಪ್ತ ಸಖಿಯಾಗಿ ನೇಮಿಸಿಕೊಂಡಿದ್ದೇನೆ. ನಿನ್ನ ಸುಂದರ ಕೈಗಳಲ್ಲಿ ಮಾಡುವ ಕ್ರಿಯೆಗಳಿಗೆ ಯಾವ ಅಡಚಣೆಯೂ ಬರದಂತೆ ವ್ಯವಸ್ಥೆ ಮಾಡುತ್ತೇನೆ.

"ಯಾರು ಯಾರು? ಈ ಮುದುಕಿ ಯಾರು? ಓಹ್! ಈಕೆ "ರಾಜ ಮಾತೆ ನಮ್ಮೂರಿನ ರಾಜಮಾತೆ" ಎಂದು ಆ ಮೂವರೂ ತಲೆತಗ್ಗಿಸಿ ನಿಂತರು. ಹೌದು! ನಾನು ರಾಜಮಾತೆ. ಹೊಸದಾಗಿ ಮದುವೆಯಾಗಿ ಬಂದಿರುವ ನನ್ನ ಮುದ್ದುಸೊಸೆಗೆ ತಕ್ಕ ಸಖಿಯನ್ನು ನೇಮಿಸಿಕೊಳ್ಳಲು ಓರ್ವ ಸದ್ಗುಣ ಶ್ರಾವಕಿಯನ್ನು ಹುಡುಕುತ್ತಿದ್ದೆ. ಇಂದು ಇತ್ತ ಮಾರುವೇಷದಲ್ಲಿ ಬಂದು ಮರದಮರೆಯಲ್ಲಿ ನೀವಾಡುತ್ತಿರುವ ಮಾತುಗಳನ್ನೂ ಶೀಲಳ ಶಾಂತ ಸ್ವಭಾವ ಮತ್ತು ಉಪಕಾರ ಬುದ್ಧಿ ಗುಣಗಳನ್ನು ಕಂಡು ಮೆಚ್ಚಿ ಆಕೆಯನ್ನು ಅರಮನೆಗೆ ಕರೆಸಿಕೊಳ್ಳಲಿದ್ದೇನೆ. ಈಕೆ ಆ ತನ್ನ ಕೈಗಳಿಂದ

ನಿತ್ಯವೂ ಕೈಲಾದದಾನ ಧರ್ಮ ಕಾರ್ಯಾಸಕ್ತಳಿರಬೇಕು, ಗುರುಹಿರಿಯರಲ್ಲಿ ವಿಧೇಯಳಿರಬೇಕು, ಕಷ್ಟದಲ್ಲಿ ಸೇವೆಮಾಡುವ ಸ್ವಭಾವದವಳಿರಬೇಕೆಂದು ನಮಗೆ ಈಗಾಗಲೇ ತಿಳಿದಿದೆ. ಇಂತಹ ಸದ್ಗುಣವನ್ನು ಏನೋ ಅಲ್ಪ ಸ್ವಲ್ಪ ಸುಂದರಿಯರೂ ಅಲ್ಪ ಸ್ವಲ್ಪ ಹಣವಂತರೂ ಆದ ನೀವು ಗೇಲಿ ಮಾಡುತ್ತೀರಲ್ಲಾ. ಇವಳ ಸಹವಾಸ ದಿಂದ ನಿಮ್ಮ ನಡೆನುಡಿಗಳನ್ನು ಸಾತ್ವಿಕಗೊಳಿಸಿಕೊಂಡು ಉತ್ತಮ ಗೃಹಸ್ಥರಾಗಿ ಬಾಳಲು ಪ್ರಯತ್ನಿಸಬೇಕಾಗಿತ್ತು. ನಿಮ್ಮ ಬಾಳು ನಿರರ್ಥಕವಾಗಿದೆ. ಈಕೆಯ ಸಹವಾಸದಿಂದ ನನ್ನ ಸೊಸೆ ಸದ್ಗುಣ ಗಣಿಯಾಗಿ ಧರ್ಮನಿಷ್ಠಳಾಗುವಳೆಂದು ನಾನು ನಂಬಿದ್ದೇನೆ. ಅಮ್ಮಾ ಶೀಲಾ ಇಲ್ಲಿಬಾ. ನಿಜಕ್ಕೂ ನೀನು ಶೀಲಾದೇವಿಯೇ ಸರಿ ಎಂದಳು. ಅಷ್ಟರಲ್ಲಿ ರಾಜಮಾತೆಯ ಪರಿವಾರ ಅಲ್ಲಿಗೆ ಬಂದಿತು.

ನಾಚಿಕೆಯಿಂದ ಮಾಲಾ, ಲೀಲಾ, ಲೋಲರು ರಾಜಮಾತೆಯಲ್ಲಿ ಕ್ಷಮೆ ಕೇಳಿ ತಾವು ಇನ್ನು ಮುಂದೆ ಯಾರನ್ನೂ ಹೀಯಾಳಿಸದೆ ಧರ್ಮಮಾರ್ಗದಲ್ಲಿ ನಡೆಯುತ್ತೇವೆ ಎಂದು ಹೇಳಿ ಹೋದರು.

ಅಂದಿನಿಂದ ಶೀಲಳಿಗೆ ರಾಜಮಾತೆಯ, ಯುವರಾಜ ಪತ್ನಿಯ ಆಶ್ರಯ ದೊರೆಯಿತು. ತನ್ನ ನಡೆಗಳಿಂದ ಯುವರಾಜಪತ್ನಿಯನ್ನು ಮೆಚ್ಚಿಸಿ ಆಕೆಗೆ ಆಪ್ತಸಖಿಯಾಗಿ ಇನ್ನೂ ಮಿಗಿಲಾದ ಧರ್ಮ ಪ್ರಭಾವನಾಕಾರ್ಯಗಳಿಗೆ ಪ್ರೇರೇಪಿಸುತ್ತಾ ಸುಖವಾಗಿದ್ದಳು.

ಯಾರು ತಮ್ಮ ಕೈಗಳಿಂದ ದಾನ, ಸತ್ಕಾರ್ಯ, ಪೂಜೆ, ಸೇವೆ-ಪರೋಪಕಾರಗಳನ್ನು ಮಾಡುತ್ತಾರೋ ಅವರ ಕೈಗಳು ಸುಂದರವೂ ಪವಿತ್ರವೂ ಆಗಿರುತ್ತವೆ.

## 35. ಬ್ರಹ್ಮಚಾರಿ ದಂಪತಿಗಳು

(ಸಂಗ್ರಹ)

ಕಚ್ಛದೇಶದ ಭಾವನಗರ ಸಮೃದ್ಧವಾದ ಪಟ್ಟಣ. ಅರ್ಹದ್ದಾಸ ಶ್ರೇಷ್ಠಿ ಅಲ್ಲಿಯ ಸಂಪನ್ನ, ಧಾರ್ಮಿಕ ಧನಕುಬೇರ. ಅವನಿಗೆ ಅನುಗುಣಳಾದ ಧರ್ಮಪತ್ನಿ



ಅರ್ಹದ್ದಾಸಿ. ಅವಳೂ ಭಗವದ್ಭಕ್ತಳು, ಧರ್ಮಪರಾಯಣೆ. ಹೆಚ್ಚಾಗಿ ತಂದೆ-ತಾಯಿಯರ ಸಂಸ್ಕಾರ ಮಕ್ಕಳ ಮೇಲೆ ಬಿಂಬಿಸುತ್ತದೆ. ಅವರಿಬ್ಬರ ಉಜ್ವಲ ಸಂಸ್ಕಾರದ ಪ್ರತಿಬಿಂಬಂತೆ ವಿಜಯನೆಂಬ ಪುತ್ರನೊಬ್ಬ ಹುಟ್ಟಿದ. ಈತ ಸುಸಂಸ್ಕೃತ, ಸದಾಚಾರಿ; ಸುವಿಚಾರಿ.

ಜವ್ವನದ ಹೊಸಲನ್ನು ದಾಟುತ್ತಿರುವ ಯುವಕ ವಿಜಯ ಒಂದು ದಿನ ಸಾಧುಗಳ ಶ್ರೀ ಮುಖದಿಂದ ಬ್ರಹ್ಮಚರ್ಯದ ಹಿರಿಮೆ-ಗರಿಮೆಗಳ ಉಪದೇಶ ಕೇಳಿದ. ಜೀವನದ ವಿಕಾಸಕ್ಕೆ ಬ್ರಹ್ಮಚರ್ಯೆಯ ಸ್ಥಾನ ದೊಡ್ಡದೆಂದು ಅರಿತುಕೊಂಡ. ಸಂಪೂರ್ಣ ಬ್ರಹ್ಮಚರ್ಯೆಯನ್ನು ಪಾಲಿಸಲು ತಾನು ಸಮರ್ಥನಲ್ಲವೆಂದು ಸುವಿಚಾರಿಯಾದ ವಿಜಯ ವಿಚಾರಿಸಿದ. ಆದರೂ ಕಾಲಮಿತಿಯಿಂದ ಇದನ್ನು ಪಾಲಿಸಬೇಕೆಂದು ತಿಳಿದು 'ವಿವಾಹವಾದ ಮೇಲೂ ಪ್ರತಿತಿಂಗಳ ಶುಕ್ಲಪಕ್ಷದ 15 ದಿನ ಬ್ರಹ್ಮವ್ರತವನ್ನು ಪಾಲಿಸುವೆನು' ಎಂದು ಆ ಮುನಿಗಳಿಂದ ವ್ರತ ಕೈಗೊಂಡ.

ಸತ್ಸಂಕಲ್ಪವು ಕೆಲವೊಮ್ಮೆ ನಮ್ಮನ್ನು ಕಠೋರ ಪರೀಕ್ಷೆಗೆ ಗುರಿಪಡಿಸುತ್ತದೆ. ಸಂಯೋಗದಿಂದ ವಿಜಯನ ವಿವಾಹವು ಅದೇ ನಗರದ ಧನದತ್ತ ಶ್ರೇಷ್ಠಿಯ ಏಕಮಾತ್ರ ಪುತ್ರಿಯಾದ 'ವಿಜಯಾ'ಳೊಡನೆ ನೆರವೇರಿತು. ಅವಳೂ ರೂಪವತಿ, ಗುಣವತಿ, ಅವನಿಗೆ ತಕ್ಕಂತಹ ಶೀಲವತಿಯೂ ಆಗಿದ್ದಳು.

ಅಂದು ಶೋಭನಪ್ರಸ್ತದ ಶುಭರಾತ್ರಿ. ನವವಧುವು ತನ್ನಿನಿಯನನ್ನು ಕೂಡುವ ಮೊದಲ ರಾತ್ರಿ. ಹಾಲ್ನೀರು ಮಿಂದು, ಬೆಳ್ನೊರೆಯ ಬಿಳಿ ಸೀರೆಯುಟ್ಟು, ಸರ್ವಾಭರಣಾಲಂಕಾರೆಯಾಗಿ, ಪತಿಯ ಸಜ್ಜೆವನೆಯನ್ನು ಸೇರಿದಳು. ಲಜ್ಜೆಯಿಂದ ತಗ್ಗಿದ ವಿಜಯಳ ಮೊಗವನ್ನು ಕಂಡು ವಿಜಯನು ಅಕ್ಕರೆಯಿಂದ ಬರಮಾಡಿಕೊಂಡ. ಆದರೆ ಆಗ ಶುಕ್ಲಪಕ್ಷವಾದುದರಿಂದ ವಿಜಯನು ತನ್ನ ಬ್ರಹ್ಮಸಂಕಲ್ಪವನ್ನು ತನ್ನರಸಿಗೆ ವಿನಯದಿಂದ ತಿಳಿಸಿದ- "ಪ್ರಾಣಪ್ರಿಯೆ! ನಿನ್ನೀ ಅನುಪಮ ರೂಪ, ಜವ್ವನ, ಸೌಂದರ್ಯವನ್ನು ಪಡೆದ ನಾನೇ ಧನ್ಯ. ನಮ್ಮ ಜೀವನವು ಅಮೃತದ ಹೊನಲಿನಂತೆ ಹರಿದು ಬಾಳು ನಂದನವಾಗಲಿದೆ. ನಾವು ಹಿತ-ಮಿತವರಿತು ಜೀವನದಲ್ಲಿ ಸುಖಿಗಳಾಗೋಣ; ಆದರ್ಶರಾಗಿ ಬಾಳೋಣ. ನಾನು ನಿನ್ನ ಕೈ ಹಿಡಿಯುವ ಮೊದಲು ಒಂದು ನಿಯಮ ಕೈಗೊಂಡಿದ್ದೇನೆ. ಅದು ಪೂರ್ಣಗೊಳ್ಳಲು ಇನ್ನೂ 4-5 ದಿನಗಳು ಉಳಿದಿವೆ" ಎಂದನು.

ಸಹಜ ಲಜ್ಜೆಯಿಂದ ತಗ್ಗಿದ ಮುಖವನ್ನು ಸ್ವಲ್ಪ ಮೇಲಕ್ಕೆತ್ತಿ ವಿಜಯಳು ಪ್ರಶ್ನಾರ್ಥಕ ದೃಷ್ಟಿಯಿಂದ ಪತಿಯ ಕಣ್ಣಿಗೆ ಕಣ್ಣುಗೂಡಿಸಿದಳು. ಇಂಗಿತವರಿತ

ವಿಜಯ ವಿಷಯವನ್ನು ವಿಶದ ಪಡಿಸಿದ- "ಹೃದಯೇಶ್ವರಿ! ಪೂಜ್ಯ ಸವಣರೊಬ್ಬರಿಂದ ಪ್ರತಿ ಶುಕ್ಲಪಕ್ಷದ ಹದಿನೈದು ದಿನ ಪ್ರರ್ಯಂತ ಬ್ರಹ್ಮಚರ್ಯೆಯನ್ನು ಪಾಲಿಸುವುದಾಗಿ ನಿಯಮ ಕೈಗೊಂಡಿರುವೆನು. ಅದರಲ್ಲಿ ಇನ್ನು ಕೇವಲ 4-5 ದಿನ ಮಾತ್ರ ಉಳಿದಿವೆ. ದಯೆಗೈದು ಅದನ್ನು ನಡೆಸಿಕೊಡು, ದೇವಿ!"

ವಿಜಯಳ ಮುದ್ದು ಮೊಗವು ಒಮ್ಮಿಂದೊಮ್ಮೆಯೇ ಮಾಸಿ ಮಲಿನ 'ವಾಯಿತು. ಕಣ್ಣು ಕೊಳ ತುಂಬಿ ಕೋಡಿ ಹರಿಯತೊಡಗಿತು. ತಲೆ ಸುತ್ತತೊಡಗಿತು, ದನಿ ನಡುಗಿತು, ಬವಳಿ ಬಂದು ಭೂಮಿಗೆ ಬೀಳುವಂತಾಯಿತು. ಬೀಳುತ್ತಿರುವ ಬಾಳಲತೆಯನ್ನು ಬಿಗಿಯಾಗಿ ಹಿಡಿದು ಮೆಲ್ಲಗೆ ಮಲ್ಲಿಗೆಯ ಹಾಸಿಗೆ ಆನಿಸಿ ವಿಜಯ ವಿಚಾರಿಸಿದ- "ವಿಜಯಾ! ಬೇಸರವಾಯಿತೇ? ನಾನು ನಿನ್ನನ್ನು ತಿರಸ್ಕರಿಸುವೆನೆಂದು ತಿಳಿಯಬೇಡ. ನಾನು ಕೈಗೊಂಡ ಸತ್‌ಸಂಕಲ್ಪವನ್ನು ನನ್ನ ಬಾಳಸಂಗಾತಿಯೊಡನೆ ವಿನಂತಿಸಿ, ನಡೆಸಿಕೊಡೆಂದು ಭಿನ್ನವಿಸುವೆ ದೇವಿ!"

ದುಃಖದ ಒತ್ತಡ ಹೆಚ್ಚಿತು. ಮಾತು ಮೂಕವಾಯಿತು. ಉಕ್ಕು-ದುಃಖವನ್ನು ಹತ್ತಿಕ್ಕಿ ವಿಜಯಾ ಹೇಳಿದಳು- "ನನ್ನೊಡೆಯಾ! 4-5 ದಿನಗಳಲ್ಲ, ನನ್ನ-ತಮ್ಮ ದಾಂಪತ್ಯ ಜೀವನದ ಮಧ್ಯೆ ಅಭೇದ್ಯ ಗೋಡೆಯಾಗಿ ನಿಂತಿದೆ ಈ ಬ್ರಹ್ಮವ್ರತ. ನಾನು ತಮ್ಮಂತೆಯೇ ಬಾಲ್ಯದಲ್ಲಿ ಕೃಷ್ಣಪಕ್ಷದಲ್ಲಿ ಸಂಪೂರ್ಣ ಬ್ರಹ್ಮಚರ್ಯೆ ಪಾಲಿಸುವುದಾಗಿ ವ್ರತ ಕೈಗೊಂಡಿದ್ದೇನೆ. ನಾನೆಂತಹ ಪಾಪಿ. ಸುಖ ನಾನು ಪಡೆದುಕೊಂಡು ಬಂದಿಲ್ಲ. ತಮಗೂ ನನ್ನಿಂದ ಸುಖವಿಲ್ಲ. ಪ್ರಭುವೆ! ತಾವು ದುಃಖಪಡಬಾರದು. ಇನ್ನೊಬ್ಬ ಸುಕನ್ಯೆಯನ್ನು ಕೈ ಹಿಡಿದು ವಂಶೋದ್ಧಾರ ಮಾಡಿಕೊಳ್ಳಿ. ನಾನು ತಮ್ಮ ದಾಸಿಯಾಗಿ ಚಾಕರಿ ಮಾಡುತ್ತೇನೆ. ತಾವು ಗೃಹಸ್ಥರಾಗಿ, ಮಕ್ಕಳೊಂದಿಗರಾಗಿ ಮೆರೆಯುವುದನ್ನು ಕಂಡು ನನ್ನ ಪಾಪ ತೊಳೆದು ಕೊಳ್ಳುವೆ. ತಮ್ಮ ಚರಣಸೇವೆ ನನ್ನ ಪಾಲಿನ ಪಂಚಾಮೃತ. ನಾನು ಕಷ್ಟ ಸಹಿಸಬಲ್ಲೆ, ನನ್ನ ಪ್ರಭು! ಆದರೆ ನನ್ನಿಂದ ಬೇರೆಯವರಿಗಾಗುವ ಕಷ್ಟ ನಾನು ಕಾಣಲಾರೆ ಪ್ರಭು! ಕಾಣಲಾರೆ!" ಎಂದು ಬಿಕ್ಕಿ ಬಿಕ್ಕಿ ಅಳತೊಡಗಿದಳು.

ಮಾತು ಕೇಳುತ್ತಿದ್ದಂತೆ ವಿಜಯ ಅವಾಕ್ಕಾದ. ಜೀವನದ ಆಶೆ-ಆಕಾಂಕ್ಷೆಗಳೆಲ್ಲ ಕುರುಡಾದವು. ಈ ಯೋಗಾಯೋಗದ ಬಗೆಗೆ ಅವನಿಗೆನಿಸಿತು- 'ಹೀಗೂ ಆಗುವುದೇ?' ಸ್ವಲ್ಪ ಹೊತ್ತು ಇಬ್ಬರಲ್ಲೂ ಮೌನ. ಮಾತುಬಾರದ ಮನ ಮುನ್ನೂರು ಯೋಜನ ಮುನ್ನೆಗೆಯಿತು. ಕಣ್ಣು ಕಟ್ಟಿದ ಕಗ್ಗತ್ತಲೆಯಲ್ಲೂ ದಾರಿ



ಹುಡುಕ ತೊಡಗಿತು. ಮೌನ ಮುರಿದು ವಿಜಯ ವಿಜಯಳ ಮೈ ಸವರಿ ಹೇಳಿದ- "ಪ್ರಿಯತಮೆ! ಒಮ್ಮೊಮ್ಮೆ ಅಯಾಚಿತವಾಗಿ ಶುಭ ಸಂಯೋಗ ಮುಂಬರುತ್ತದೆ. ನಮ್ಮಿಬ್ಬರಿಗೂ ಆಜನ್ಮ ಬ್ರಹ್ಮಚರ್ಯ ಪಾಲಿಸುವ ಸುಯೋಗ ಬಂದಿದೆ. ಎಂದೂ ಯಾರೂ ಕೇಳದ, ಕಂಡರಿಯದ ಪವಾಡ ನಮ್ಮಿಂದ ನಡೆಯಲಿದೆ. ಇದನ್ನೇಕೆ ನಾವು ಕಳೆದುಕೊಳ್ಳೋಣ? ಜೀವನದ ಪರಿಶುದ್ಧತೆಯನ್ನು ಸಾಧಿಸುತ್ತಾ ಜೊತೆಯಾಗಿ ಬಾಳೋಣ. 'ಈಸೋಣ, ಇದ್ದು ಜಯಿಸೋಣ.' ನಾವು ಒಂದಾದೆವು. ಒಂದಾಗಿಯೇ ಇದ್ದು, ಬೇರೆ ಹಾದಿ ಹಿಡಿಯುವ ಬಗೆಗೆ ಯೋಚಿಸುವುದೇಕೆ? ಮರು ಮದುವೆಯ ಮಾತು ಸ್ವಪ್ನದಲ್ಲೂ ಯೋಚಿಸಲಾರೆ. ಜೀವನವೆಂದರೆ ಭೋಗ ಮಾತ್ರವೇ? ತ್ಯಾಗ ಜೀವನ ಜೀವನವಲ್ಲವೇ? ಭದ್ರೇ! ನೀನು ಜೀವನವಿಡೀ ಬ್ರಹ್ಮವ್ರತೆಯಾಗಿ ಕಳೆಯುವೆ ಎನ್ನುತ್ತೀ. ನಾನು ನಿನಗಿಂತ ಕಡೆಯೇ? ನರನು ನಾರಿಗಿಂತ ದುರ್ಬಲನೇ.? ನಾನೂ ಆ ಜೀವ ಬ್ರಹ್ಮಚಾರಿಯಾಗಿರುತ್ತೇನೆ.'

ವಿಜಯಳ ಕಣ್ಣೀರು ಬತ್ತಿ ಕೋಲ್ಮಿಂಚು ಮಿನುಗಿತು. ಚಕಿತಳಾದ ಅವಳು ಅಕೃತ್ರಿಮ ಪ್ರೇಮದಿಂದ ಪತಿಯನ್ನು ಮರುಮದುವೆಗಾಗಿ ಕಾಡಿದಳು, ಬೇಡಿದಳು, ಅತ್ತಳು. ವಿಜಯನ ಮನ ಮಂದರಾಚಲದಂತಿತ್ತು. ಭೋಗದಿಂದ ಹೊನಲಾಗಿ ಹರಿಯಬೇಕಾದ ಮನ, ತ್ಯಾಗದಿಂದ ಬೆಸೆದು ಭದ್ರವಾಯಿತು. ಇಬ್ಬರ ಸಂಕಲ್ಪ ಒಂದಾಯಿತು. ಭೋಗ ಕ್ಷಣಿಕ; ತ್ಯಾಗ ಅಕ್ಷುಣ್ಣ, ಅಕ್ಷೀಣ, ಅಕ್ಷಯವಾಯಿತು. ಆ ರಾತ್ರಿ ಅದೆಷ್ಟು ಪವಿತ್ರ! ಆ ಯೋಗ ಅದೆಂತಹ ಮಹಾಯೋಗ! ಒಂದೇ ಸಜ್ಜೆಯ ಹಾಸಿನಲ್ಲಿ ಪವಡಿಸಿದ ಆ ದಪಂತಿಗಳು ಬ್ರಹ್ಮವ್ರತವನ್ನು ಅಣುವ್ರತವಾಗಿ ಅಲ್ಲ; ಮಹಾ ವ್ರತವಾಗಿ ಪಾಲಿಸಿದರು. ಇದ್ದು ಜಯಿಸಿದರು. ಸ್ವರ್ಗದ ದೇವತೆಗಳು ಈ ಮಹಾ ದಂಪತಿಗಳಿಗೆ ಧನ್ಯತೆಯಿತ್ತರು.

ವಿಜಯನು ವಿಜಯಳ ಮೊಗವನ್ನು ಮೇಲಕ್ಕೆತ್ತಿ ತನ್ನ ಭೀಷ್ಮಪ್ರತಿಜ್ಞೆಯನ್ನು ಹೇಳಿದ- "ಪ್ರಾಣವಲ್ಲಭೆ! ನಮ್ಮ ಸಂಕಲ್ಪ ನಮ್ಮ ತಾಯ್ತಂದೆಯರಿಗೂ ತಿಳಿಯಬಾರದು. ವ್ಯರ್ಥ ಅವರನ್ನೇಕೆ ದುಃಖಚಕ್ರಕ್ಕೆ ಸಿಲುಕಿಸೋಣ? ಸರಾಗಿಗಳಂತಿದ್ದು ನಾವು ವಿರಾಗಿಗಳಾಗಿರಬೇಕು. ನಮ್ಮ ಸಂಕಲ್ಪ ನಮ್ಮಿಬ್ಬರ ಮೇರೆ ಮೀರಬಾರದು. ಈ ರಹಸ್ಯ ಬೇರೆಯವರಿಗೆ ಬಯಲಾದಂದು ನಾವಿಬ್ಬರೂ ಮುಂದೆ ದೀಕ್ಷೆಯನ್ನು ಸ್ವೀಕರಿಸೋಣ. ಇದೇ ನಮ್ಮ ಮೊದಲ ರಾತ್ರಿಯ ಕೊನೆಯ ಸಂಕಲ್ಪ" ಎಂದು ಇಬ್ಬರೂ ಆ ರಾತ್ರಿಯನ್ನು ಕಳೆದರು.

ನಿರಂತರ ಏರುತ್ತಿರುವ ಉಕ್ಕು-ಜವ್ವನ, ಅನುಕೂಲವಾದ ಸುಖ-ಸಾಮಾಗ್ರಿಗಳು, ತರುಣ ದಂಪತಿಗಳು, ಒಂದೇ ಸಜ್ಜೆ, ಒಂದೇ ಹಾಸಿನಲ್ಲಿ ಶಯನ.

ಆದರೂ ಅಖಂಡ ಬ್ರಹ್ಮಚರ್ಯ! ಎಂತಹ ವಿರೋಧ. ಆದರೆ ಅದೆಷ್ಟು ನಿಷ್ಠೆ. ತಿಂಗಳುಗಳುರುಳಿದವು. ವರ್ಷಗಳು ಕಳೆದವು. ದಶಕ-ದಶಕಗಳು ಸಾಗಿದವು. ಆದರೆ ಬ್ರಹ್ಮಚರ್ಯದ ದಿವ್ಯ ಜ್ಯೋತಿ ಬೆಳಗುತ್ತಲೆ ನಿಶ್ಚಲವಾಗಿ ಉರಿಯುತ್ತಿತ್ತು. ಬಿರುಗಾಳಿ ಬಂತು. ಸುಂಟರಗಾಳಿ ಬೀಸಿತು. ಆದರೂ ಅಖಂಡ ಜ್ಯೋತಿ ನಡುಗಲಿಲ್ಲ. ಕಂಪಿಸಲಿಲ್ಲ. ಕಂದಿ ನಂದಲಿಲ್ಲ.

ಇತ್ತ ಚಂಪಾನಗರಿಯಲ್ಲಿ ಜಿನದಾಸನೆಂಬ ಸೆಟ್ಟಿಯೊಬ್ಬ ಊರಿಗೆ ಬಂದಿರುವ ವಿಮಲಸೂರಿಗಳೆಂಬ ಅವಧಿ ಜ್ಞಾನಿಗಳನ್ನು ಪ್ರಶ್ನಿಸಿದ- "ಭಗವನ್! ಒಂದೇ ಬಾರಿಗೆ ನೂರೆಂಟು ಶ್ರಮಣರಿಗೆ ಆಹಾರಕೊಡುವ ಸಂಕಲ್ಪ ಮಾಡಿದ್ದೇನೆ. ಪ್ರಭುವೇ! ನನ್ನೀ ಬಯಕೆ ಈಡೇರುವ ಬಗೆಯನ್ನು ಅನುಗ್ರಹಿಸು.'' ವಿಮಲಸೂರಿಗಳು- "ಭವ್ಯನೇ! ಇಷ್ಟಸಿದ್ಧಿಯಾಗುವುದು ಕಠಿಣ'' ಎಂದರು. ''ಹಾಗಾದರೆ ನನ್ನ ಸಂಕಲ್ಪ ಹುಸಿಯಾಗಿಸುವಿರೇ'' ಎಂದು ಜಿನದಾಸ ಕಳಕಳಿಯಿಂದ ಕೇಳಿದ.

ಮುನಿಗಳು ಕಚ್ಛದೇಶದ ವಿಜಯ-ವಿಜಯೆಯರ ಗುಪ್ತ ಬ್ರಹ್ಮಚರ್ಯೆಯ ಕಥೆಯನ್ನು ಸಾಂಗವಾಗಿ ನಿರೂಪಿಸುತ್ತಾ- "ಅಯ್ಯಾ ಭವ್ಯನೇ! ಈ ದಂಪತಿಗಳ ಸೇವೆ-ಭಕ್ತಿಯನ್ನು ಮಾಡುವ ಮೂಲಕ ನಿನ್ನ ಸಂಕಲ್ಪವು ಸಿದ್ಧಿಸಲಿ, ಪೂರ್ಣವಾಗಲಿ'' ಎಂದು ಹರಸಿದರು.

ಜಿನದಾಸ ಸೆಟ್ಟಿಯು ಚಂಪಾನಗರಿಯಿಂದ ದೂರದ ಕಚ್ಛದೇಶದ ಭಾವನಗರಕ್ಕೆ ಪರಿವಾರ ಸಮೇತನಾಗಿ ಹೊರಟ. ಊರನ್ನು ತಲುಪಿ ಅರ್ಹದ್ದಾಸನ ಮನೆಯ ಅತಿಥಿಯಾಗಿ ಅವರಲ್ಲೇ ಉಳಿದುಕೊಂಡು, ಸಮಯ ಸಿಕ್ಕಾಗಲೆಲ್ಲ ಆದರ್ಶ ದಂಪತಿಗಳಾದ ವಿಜಯ ವಿಜಯೆಯರನ್ನು ತನ್ನಲ್ಲಿಗೆ ಬರಮಾಡಿಕೊಂಡು ಭಕ್ತಿಯಿಂದ ಭೋಜನೋಪಚಾರಗಳಿಂದ ಸತ್ಕರಿಸಿದ, ಗೌರವಿಸಿದ. ಜಿನದಾಸನಿಗೆ ಅವರ ಅಮರ ಪ್ರೇಮದ ದಿವ್ಯ ಸಂದರ್ಶನವಾಯಿತು. ಬ್ರಹ್ಮತೇಜಸ್ಸಿನ ಜ್ಯೋತಿಯಿಂದ ತನ್ನ ಸಂಕಲ್ಪ ಪರಿಪೂರ್ಣವಾದಂತೆ ಭಾಸವಾಯಿತು.

ಅರ್ಹದ್ದಾಸನೊಂದು ದಿನ ಇಷ್ಟು ದೂರ ಪ್ರಯಾಣ ಬಂದ ಕಾರಣವನ್ನು ಜಿನದಾಸನಲ್ಲಿ ಪ್ರಶ್ನಿಸಿದ. ಜಿನದಾಸನು ವಿಮಲಸೂರಿ ಮುನಿಗಳ ಶ್ರೀಮುಖದಿಂದ ಬಂದ ಪವಾಡದ ಕತೆಯನ್ನು ಭಕ್ತಿಯ ಭರದಲ್ಲಿ ವಿನಯ ಪೂರ್ವಕ ನಿವೇದಿಸಿ ತಲೆಬಾಗಿದ. ಕೇಳಿದ ಅರ್ಹದ್ದಾಸ-ಅರ್ಹದ್ದಾಸಿಯರಿಗೆ ನಂಬಲಾಗದ ಆಶ್ಚರ್ಯವಾಯಿತು. ವಾರ್ತೆ ಕ್ಷಣಾರ್ಧದಲ್ಲಿ ಊರು-ಕೇರಿ-ನಗರಕ್ಕೆಲ್ಲ ವ್ಯಾಪಿಸಿತು. ಊರಿನ ಜನವೆಲ್ಲ ಈ ದಂಪತಿಗಳನ್ನು ದೇವರಂತೆ ಪೂಜಿಸಿತು, ವಂದಿಸಿತು.



ಹೀಗೆ ತಮ್ಮ ಅಖಂಡ ಬ್ರಹ್ಮವ್ರತದ ರಹಸ್ಯ ಬಯಲಾದುದನ್ನು ಕಂಡು ಪೂರ್ವ ಸಂಕಲ್ಪದಂತೆ ಆ ಬ್ರಹ್ಮಚಾರಿ ದಂಪತಿಗಳು ಮುನಿ ಆರ್ಯಿಕಾ ವ್ರತ ಕೈಗೊಂಡು ತಪೋವನಕ್ಕೆ ತೆರಳಿ ಉಗ್ರ ತಪಗೈದು ಸದ್ಗತಿಯನ್ನು ಪಡೆದರು.

ವಿಜಯ-ವಿಜಯೆಯರ ಬ್ರಹ್ಮವ್ರತದ ಈ ಕತೆ ಪ್ರಪಂಚದ ಇತಿಹಾಸದಲ್ಲಿ 'ನ ಭೂತೋ, ನ ಭವಿಷ್ಯತಿ' ಎಂಬಂತೇ ಒಂದೇ ಒಂದಾಗಿ ಹೆಸರು ಪಡೆಯಿತು. (ಈ ಕಥೆಯನ್ನು ಪೂಜ್ಯ ಅರ್ಕಕೀರ್ತಿ ಮಹಾರಾಜರು ತಾವು ಕೈಲಿ ಬರೆದುಕೊಂಡಿದ್ದ ಪುಸ್ತಕದಿಂದ ಓದಿ ಹೇಳಿದರು. ಅದನ್ನೇ ಕಾಪಿ ಮಾಡಿ ಇಲ್ಲಿ ಸಂಗ್ರಹಿಸಿದ್ದೇನೆ.)

# 36. ಮಂದಾಲಸೆಯ ಜೋಗುಳ ಹಾಡು

(ಶ್ರೀ ಶುಭಚಂದ್ರ ಆಚಾರ್ಯ ವಿರಚಿತ)

ದಕ್ಷಿಣ ಭಾರತದಲ್ಲಿ ಮಂದಾಲಸೆ ಎಂಬ ಒಬ್ಬ ರಾಣಿ ಇದ್ದಳು. ಅವಳು ವಿವೇಕಿಯಾಗಿದ್ದು ಸದಾ ಆತ್ಮರಸದಲ್ಲಿ ಮುಳುಗಿರುತ್ತಿದ್ದಳು. ಸುಖ ಅನುಭವಿಸುತ್ತಿದ್ದರೂ ಅದು ಕ್ಷಣಿಕ, ಭೋಗ-ಭಾಗ್ಯಗಳು ನಶ್ವರ, ಎಂಬ ಅರಿವು ಅವಳಲ್ಲಿತ್ತು. ಅವಳ ಕುರಿತು ಒಂದು ಕತೆ ಇದೆ:-

ಅವಳು ಗರ್ಭವತಿಯಾದಾಗ ಸದಾ ಯೋಚಿಸುತ್ತಿದ್ದಳಂತೆ: 'ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗು ಗಂಡಾದರೆ ಅವನು ಸಂಸಾರದ ಭೋಗದಲ್ಲಿ ಮುಳುಗದಿರಲಿ, ತ್ಯಾಗಿಯಾಗಿ ಆತ್ಮ ಕಲ್ಯಾಣ ಮಾರ್ಗವನ್ನು ಅನುಸರಿಸಲಿ' ಇದೇ ಅವಳ ಯೋಚನೆ.

ಮಗು ಹುಟ್ಟಿದ ಮೇಲೆ ಅವಳು ಹಾಡಿ ಹಾಡಿ ಅವನಿಗೆ ಜೋಗುಳ ಹೇಳುವಳು. ಎಲ್ಲರಂತಲ್ಲ ಅವಳ ಜೋಗುಳ, 'ಚಂದಾ ಮಾಮಾ ಜೋ ಜೋ' ಎಂದು ಅವಳು ಎಂದೂ ಹಾಡಲಿಲ್ಲ. ಆತ್ಮ ಚಿಂತನೆಯ, ಆತ್ಮಗುಣಗಳ ಸೊಲ್ಲುಗಳೇ

ಆ ಜೋಗುಳದ ಪದಪುಂಜಗಳು. ಆ ಜೋಗುಳ ಕೇಳಿ ಸಂಸ್ಕಾರದಿಂದ ಹದಗೊಂಡ ಮಕ್ಕಳು ದೊಡ್ಡವರಾದರು. ರಾಜ ವೈಭವದ ಮಮತೆ ತೊರೆದು ಅವರು ಮುನಿಗಳಾದರು, ತಪಗೈದು ಸ್ವರ್ಗವಾಸಿಗಳಾದರು. ಹೀಗೆ ಅವಳ ಆರೂ ಮಕ್ಕಳು ಸಂಸಾರ ತೊರೆದು ಮುನಿದೀಕ್ಷೆ ಪಡೆದು ಆತ್ಮಕಲ್ಯಾಣದ ಹಾದಿಯಲ್ಲಿ ಮುಂದಡಿ ಇಟ್ಟರು.

ಮಂದಾಲಸೆಯ ಅತ್ತೆಗೆ ಬಲು ದೊಡ್ಡ ಚಿಂತೆಯಾಯಿತು. ಎಲ್ಲ ಮೊಮ್ಮಕ್ಕಳೂ ಮುನಿಗಳಾದರೆ ವಂಶದ ಗತಿಯೇನು? ರಾಜ್ಯವಾಳುವವರು ಯಾರು? ಒಂದು ದಿನ ಅವಳು ತನ್ನ ಸೊಸೆಯನ್ನು ಸೆರಗೊಡ್ಡಿ ಬೇಡಿದಳು- 'ಮಗೂ ಮಂದಾ! ನನಗೊಂದು ಭಿಕ್ಷೆ ಕೊಡು ತಾಯಿ! ನಿನ್ನ ಆರೂ ಮಕ್ಕಳು ಮುನಿಗಳಾದರು. ನನ್ನ ವಂಶ ಚಿಗುರುವಂತೆ ನಿನ್ನ ಒಬ್ಬ ಮಗನನ್ನಾದರೂ ನನಗೆ ಕೊಡು. ನೀನು ನಿನ್ನ ಮಕ್ಕಳಿಗೆ ಕೊಟ್ಟ ಸಂಸ್ಕಾರ ಅವರನ್ನು ಸಂಸಾರ ತ್ಯಜಿಸುವಂತೆ ಮಾಡಿತು. ಒಬ್ಬ ಮಗನಾದರೂ ರಾಜಾಧಿರಾಜನಾಗಿ ರಾಜ್ಯವಾಳಲಿ. ಅವನಿಗೆ ಧೀರ, ಉದಾರ ಸಂಸ್ಕಾರ ಹಾಕು ತಾಯಿ' ಎಂದಳು.

ಮಂದಾಲಸೆ ಅತ್ತೆಯ ಮಾತಿಗೆ ಮಣಿದಳು. ಮುಂದೆ ಗರ್ಭಿಣಿಯಾದಾಗಲೇ ಅವಳು ಶೂರರ ವೀರಕತೆಯನ್ನು ಓದಿದಳು. ಅವಳು ಏಳನೇ ಗರ್ಭದಿಂದ ಪುತ್ರನನ್ನು ಪಡೆದಳು. ಇಂದು ಅವಳ ಜೋಗುಳ ವೀರರಸದಿಂದ ತುಂಬಿದೆ. ಚಕ್ರಾಧಿಪತಿಗಳ ರಾಜವೈಭವವೇ ಅದರ ಪಲ್ಲವಿ. ಆ ಬಾಲಕ ಯುವಕನಾಗಿ, ರಾಜನಾಗಿ, ದಿಗ್ವಿಜಯಗೈದ; ಚಕ್ರವರ್ತಿಯಾದ. ಹೀಗೆ ಜೀವನ-ನಿರ್ಮಾಣದಲ್ಲಿ ಸಂಸ್ಕಾರಗಳಿಗೆ ಮಹತ್ತ್ವಪೂರ್ಣ ಸ್ಥಾನವಿದೆ ಎಂಬುದನ್ನು ಈ ಜೋಗುಳ ಸಾರಿ ಹೇಳುತ್ತದೆ.

ಇಲ್ಲಿ ಮಂದಾಲಸೆಯು ಹಾಡುತ್ತಿದ್ದ ಅಧ್ಯಾತ್ಮರೂಪಕ ಜೋಗುಳಗಳನ್ನು ಕೆಳಗೆ ಕೊಟ್ಟಿದೆ. ಅದನ್ನೋದಿದಾಗ ಆತ್ಮಸ್ವರೂಪದ ಅರಿವಾಗುತ್ತದೆ.

ಸಿದ್ಧೋಽಸಿ ಬುದ್ಧೋಽಸಿ ನಿರಂಜನೋಽಸಿ ।
ಸಂಸಾರ ಮಾಯಾ ಪರಿವರ್ಜಿತೋಽಸಿ ॥
ಶರೀರಭಿನ್ನಸ್ತ್ಯಜ ಸರ್ವಚೇಷ್ಟಾಂ ।
ಮಂದಾಲಸಾ ವಾಕ್ಯಮುಪಾಸಿ ಪುತ್ರ ! ॥೧॥

ಮಗು! ನೀನು ಸಿದ್ಧನು, ಬುದ್ಧನು, ಪಾಪರಹಿತನು. ಸಂಸಾರದ



ಮೋಹಮಾಯೆ ಇಲ್ಲದವನು. ಶರೀರ ಬೇರೆ, ಆತ್ಮ ಬೇರೆ. ಆದ್ದರಿಂದ ಹೊರಗಿನ ಆಡಂಬರವನ್ನು ಬಿಡು. ಮಗು! ನಾನು (ಮಂದಾಲಸೆ) ಹೇಳಿದಂತೆ ನಡೆ, ನಿನಗೆ ಹಿತವಾಗಲಿ.

ಜ್ಞಾತಾಸಿ ದೃಷ್ಟಾಸಿ ಪರಾತ್ಮರೂಪೋ ।
ಖಂಡಸ್ವರೂಪೋಽಸಿ ಗುಣಾಲಯೋಽಸಿ ॥
ಜಿತೇಂದ್ರಿಯಯಸ್ತ್ವಂ ತ್ಯಜ ಮಾನಮುದ್ರಾಂ ।
ಮಂದಾಲಸಾ ವಾಕ್ಯಮುಪಾಸಿ ಪುತ್ರ ! ॥೨॥

ನೀನು ಜ್ಞಾನಿ. ನೀನು ಸರ್ವದರ್ಶಿ. ಪರಮಾತ್ಮ ಸ್ವರೂಪನು ನೀನು. ನೀನು ಅಖಂಡನು. ಗುಣಗಳ ರಾಶಿ ನಿನ್ನಲ್ಲಿವೆ. ಇಂದ್ರಿಯಗಳನ್ನು ನೀನು ಜಯಿಸಿರುವೆ. ಮೌನವನ್ನು ಬಿಡು. ಮಗು! ನನ್ನ (ಮಂದಾಲಸೆ) ಮಾತನ್ನು ಕಿವಿಗೊಟ್ಟು ಕೇಳು.

ಶಾಂತೋಽಸಿ ದಾಂತೋಽಸಿ ವಿನಾಶಹೀನಃ ।
ಸಿದ್ಧಸ್ವರೂಪೋಽಸಿ ಕಲಂಕಮುಕ್ತಃ ॥
ಜ್ಯೋತಿಸ್ವರೂಪೋಽಸಿ ವಿಮುಂಚ ಮಾಯಾಂ ।
ಮಂದಾಲಸಾ ವಾಕ್ಯಮುಪಾಸಿ ಪುತ್ರ ! ॥೩॥

ನೀನು ಶಾಂತಸ್ವಭಾವಿ. ಇಂದ್ರಿಯವಿಜೇತ ನೀನು. ಅವಿನಾಶಿ, ಸಿದ್ಧ ಸ್ವರೂಪನು ನೀನಾಗಿದ್ದೀ. ಕರ್ಮಕಲಂಕ ನಿನ್ನಲ್ಲಿಲ್ಲ. ಪರಂಜ್ಯೋತಿ ಸ್ವರೂಪನಾದ ನೀನು ಮೋಹ ಮಾಯೆಯನ್ನು ತೊರೆ. ನಿನ್ನ ತಾಯಿ (ಮಂದಾಲಸೆ)ಯ ಮಾತಿನಂತೆ ನಡೆ.

ಏಕೋಽಸಿ ಮುಕ್ತೋಽಸಿ ಚಿದಾತ್ಮಕೋಽಸಿ ।
ಚಿದ್ರೂಪಭಾವೋಽಸಿ ಚಿರಂತನೋಽಸಿ ॥
ಅಲಕ್ಷಭಾವೋ ಜಹಿ ದೇಹಮೋಹಂ ।
ಮಂದಾಲಸಾ ವಾಕ್ಯಮುಪಾಸಿ ಪುತ್ರ ! ॥೪॥

ಮಗನೇ! ನೀನು ನೀನೊಬ್ಬನೇ. ನೀನು ಮುಕ್ತನೂ ಚಿನ್ಮಯನೂ ಚೈತನ್ಯ ರೂಪನೂ ಚಿರಂತನ ಸ್ವರೂಪನೂ ಆಗಿದ್ದೀ. ನೀನು ಅರೂಪಿ, ಆಕಾರ ನಿನಗಿಲ್ಲ. ಆದುದರಿಂದ ದೇಹದ ಮೇಲಿನ ಮೋಹ ತ್ಯಜಿಸಿ ತಾಯಿಯಾದ ನಾನು (ಮಂದಾಲಸೆ) ಹೇಳಿದ ಮಾತನ್ನು ಮನ್ನಿಸು.

ನಿಷ್ಕಾಮದಾಮಾಸಿ ವಿಕರ್ಮರೂಪೋ ।

ರತ್ನತ್ರಯಾತ್ಮಾಸಿ ಪರಂ ಪವಿತ್ರಃ ॥
ವೇತ್ತಾಸಿ ಚೇತಾಸಿ ವಿಮುಂಚ ಕಾಮಂ ।
ಮಂದಾಲಸಾ ವಾಕ್ಯಮುಪಾಸಿ ಪುತ್ರ ! ॥೫॥

ಮಗೂ! ನೀನು ವೀತರಾಗಿ, ಕರ್ಮರಹಿತನು, ರತ್ನತ್ರಯಗಳಿಂದ ಪವಿತ್ರನಾದ ಆತ್ಮ ನಿನ್ನದು. ನೀನು ಜ್ಞಾನಿ. ಚೈತನ್ಯಮಯ. ಕಾಮ-ಮೋಹಗಳನ್ನು ತೊರೆ. ನಾನು (ಮಂದಾಲಸೆ) ಹೇಳಿದಂತೆ ನಡೆ ಮಗು!

ಪ್ರಮಾದಮುಕ್ತೋಽಸಿ ಸುನಿರ್ಮಲೋಽಸಿ ।
ಅನಂತ ಬೋಧಾದಿ-ಚತುಷ್ಟಯೋಽಸಿ ॥
ಬ್ರಹ್ಮಾಸಿ ರಕ್ಷ ಸ್ವಚಿದಾತ್ಮರೂಪಂ ।
ಮಂದಾಲಸಾ ವಾಕ್ಯಮುಪಾಸಿ ಪುತ್ರ ! ॥೬॥

ನಿನ್ನಲ್ಲಿ ಪ್ರಮಾದವಿಲ್ಲ. ಅತಿ ನಿರ್ಮಲನು ನೀನು. ಅನಂತಜ್ಞಾನ, ದರ್ಶನ, ಬಲ, ಸುಖಗಳು ನಿನ್ನಲ್ಲಿವೆ. ನೀನು ಪರಬ್ರಹ್ಮಸ್ವರೂಪನು. ನಿನ್ನ ಚಿದಾತ್ಮನನ್ನು ಕಾಪಾಡಿಕೊಂಡು ನಾನು (ಮಂದಾಲಸೆ) ಹೇಳಿದ ಮಾತಿನಂತೆ ನಡೆ, ಮಗು!

ಕೈವಲ್ಯಭಾವೋಽಸಿ ನಿವೃತ್ತಯೋಗಃ ।
ನಿರಾಮಯೋ ಜ್ಞಾತಸಮಸ್ತತತ್ತ್ವಃ ॥
ಪರಾತ್ಮವೃತ್ತಿಂ ಸ್ಮರ ಚಿತ್ಸ್ವರೂಪಂ ।
ಮಂದಾಲಸಾ ವಾಕ್ಯಮುಪಾಸಿ ಪುತ್ರ ! ॥೭॥

ನೀನು ಕೇವಲಿಯು. ಮನ-ವಚನ-ಕಾಯಗಳಿಂದಾಗಿ ಕರ್ಮಲೇಪ ನಿನಗಿಲ್ಲ. ರೋಗ-ರುಜೆಗಳು ನಿನಗಿಲ್ಲ. ಜಗತ್ತಿನ ಎಲ್ಲ ತತ್ತ್ವಗಳನ್ನು ನೀನು ತಿಳಿದವ. ಚೈತನ್ಯ ರೂಪನಾದ, ಪರಮಾತ್ಮನಾದ ನಿನ್ನನ್ನೇ ನೀನು ನೆನೆ. ಈ ನಿನ್ನ ತಾಯಿ (ಮಂದಾಲಸೆ)ಯ ವಾಕ್ಯಗಳಂತೆ ನಡೆ, ಮಗು!

ಚೈತನ್ಯರೂಪೋಽಸಿ ವಿಮುಕ್ತಮಾರೋ ।
ಭಾವಾದಿಕರ್ಮಾಸಿ ಸಮಗ್ರವೇದೀ ॥
ಧ್ಯಾಯ ಪ್ರಕಾಮಂ ಪರಮಾತ್ಮರೂಪಂ ।
ಮಂದಾಲಸಾ ವಾಕ್ಯಮುಪಾಸಿ ಪುತ್ರ ! ॥೮॥

ಮಗನೇ! ನೀನು ಚೈತನ್ಯಮಯನಾಗಿ ಕಾಮನನ್ನು ಗೆದ್ದವನು. ಪಾರಿಣಾಮಿಕ ಭಾವಗಳುಳ್ಳ ನೀನು ಎಲ್ಲ ಬಲ್ಲವನು. ಪರಮಾತ್ಮರೂಪವನ್ನೇ ನಿತ್ಯ ಸ್ಮರಿಸುತ್ತಾ



ಇದ್ದು ನಿನ್ನ ತಾಯಿ (ಮಂದಾಲಸೆ)ಯ ಮಾತುಗಳನ್ನು ಮನ್ನಿಸಿ ನಡೆ.

ಇತ್ಯಷ್ಟಕೈರ್ಯಾ ಪುರತಸ್ತನೂಜಾನ್ ।
ವಿಬೋಧ್ಯ ನಾಥಂ ನರನಾಥ ಪೂಜ್ಯಂ ॥
ಪ್ರವ್ರಾಜ ಭೀತಾ ಭವ-ಭೋಗ-ಭಾವಾತ್ ।
ಸ್ವಕೈಃ ಸದಾ ಸಾ ಸುಗತಿಂ ಪ್ರಪೇದೇ ॥೯॥

ಹೀಗೆ ಮಂದಾಲಸೆಯು ಈ 'ಅಷ್ಟಪದಿ'ಯಿಂದ ತನ್ನ ಮಕ್ಕಳನ್ನು ಹಾಡಿ ಹಾಡಿ, ಬೋಧಿಸಿ ಬೆಳೆಸಿದಳು. ಈ ಸಂಸ್ಕಾರದಿಂದ ಹದಗೊಂಡ ಮಕ್ಕಳು ಸಂಸಾರ ಭೋಗ-ಭಾಗ್ಯಗಳಿಗಂಜಿ ವೈರಾಗ್ಯ ತಾಳಿ ತ್ರಿಲೋಕ ಪೂಜ್ಯರಾದ ಭಗವಂತನ ಬಳಿ ದೀಕ್ಷೆ ಕೈಗೊಂಡರು. ಸದ್ಗತಿಯನ್ನು ಪಡೆದರು.

ಇತ್ಯಷ್ಟಕಂ ಪಾಪಪರಾಙ್ಮುಖೋ ಯೋ ।
ಮಂದಾಲಸಾಯಾಃ ಭಣತಿ ಪ್ರಮೋದಾತ್ ॥
ಸ ಸದ್ಗತಿಂ ಶ್ರೀಶುಭಚಂದ್ರ ಭಾಸಿ ।
ಸಮಾಪ್ಯ ನಿರ್ವಾಣಪದಂ ಪ್ರಗಚ್ಛೇತ್ ॥೧೦॥

ಮಂದಾಲಸಾ ಮಹಾತಾಯಿ ಹೇಳಿದ ಈ ಅಷ್ಟಪದಿ ಜೋಗುಳವನ್ನು ಪಾಪ ಭೀರುಗಳಾದ ನೀವು ಸಂತೋಷದಿಂದ ನಿತ್ಯ ಪಠಿಸಿದರೆ ಉತ್ತಮ ಗತಿಯನ್ನು ಪಡೆದು ಕೊನೆಗೆ ಮುಕ್ತಿ ಪದವಿಯನ್ನು ಹೊಂದುವಿರಿ ಎಂದು ಶ್ರೀ ಶುಭಚಂದ್ರಾಚಾರ್ಯರು ಹೇಳಿದ್ದಾರೆ.

# 37. ಸುಖಜೀವನಕ್ಕೆ ನವಸೂತ್ರಗಳು

ಪ್ರಪಂಚದ ಎಲ್ಲೆಡೆಗಳಲ್ಲಿರುವ ಮಾನವರಲ್ಲಿ ತಾವೇ ದೊಡ್ಡವರೆಂಬ ಅಹಂಭಾವದವರೂ ಇಲ್ಲವೇ ತಾವು ಎಲ್ಲರಿಗಿಂತಲೂ ಕೀಳು ಎಂಬ ದೈನ್ಯಭಾವದವರೂ ಇರುತ್ತಾರೆ. ಈ ಎರಡು ಭಾವನೆಗಳ ಬಾಧೆಗೊಳಗಾಗದ ಜನರೇ ಇಲ್ಲ. ಹೆಚ್ಚಿನವರು ದೀನಭಾವಕ್ಕೊಳಗಾಗಿ ಸಂಕಟಪಡುತ್ತಿರುವರು. ಕೆಲವೇ ಮಂದಿ ಮಾತ್ರ ತಾವು ಧನವಂತರೆಂಬ ಅಹಂಭಾವಕ್ಕೊಳಗಾಗಿರುವರು. ಅದಕ್ಕೆ

ಕಾರಣವೆಂದರೆ, ಹೆಚ್ಚಿನವರಲ್ಲಿ ದೇಹದಲ್ಲಿಯಾಗಲೀ ಮನಸ್ಸಿನಲ್ಲಿ ಯಾಗಲೀ ಒಂದಲ್ಲವೊಂದು ರೀತಿಯ ಕೊರತೆಯಿದೆ. ಈ ಕೊರತೆಯು ಅವರನ್ನು ದೀನರಾಗಿ ಮಾಡುತ್ತದೆ. ಈ ಕೊರತೆಯು ಸಾಮಾಜಿಕವಾಗಿ, ಲೌಕಿಕವಾಗಿ, ಲೌಕಿಕ ಮಾನಸನ್ಮಾನದ್ದಾಗಿ, ಕೂಡ ಇರುತ್ತದೆ. ಕೆಲವರು ಬುದ್ಧಿವಂತರೆಂದು, ಅಹಂಭಾವಕ್ಕೊಳಗಾದರೆ ಇನ್ನು ಕೆಲವರು ತಾವು ಬುದ್ಧಿಯಿಲ್ಲದ ದೀನರಾಗುವರು. ಕೆಲವರಿಗೆ ದೇಹದಲ್ಲಿ ಬಲವಿದ್ದರೆ ಕೆಲವರಿಗೆ ದೈಹಿಕಬಲವೇ ಇಲ್ಲದೆ ಭೀತರಾಗಿರುವರು. ಕೆಲವರಿಗೆ ಅಂಗಸೌಂದರ್ಯ ವಿರುತ್ತದೆ. ಕೆಲವರಿಗೆ ಅಧಿಕಾರದ ಮದವಿರುತ್ತದೆ. ಕೆಲವರಿಗೆ ಆರ್ಥಿಕಪರಿಸ್ಥಿತಿಯಿಂದಲೂ ಅಹಂಭಾವವುಳ್ಳವ ರಾಗುತ್ತಾರೆ. ಅಂತು ತಾನು ಘನವಂತನೆಂಬ ಅಹಂಭಾವನೆ ಇಲ್ಲದವರು ಕಡಿಮೆ ಯೆಂದೇ ಹೇಳಬೇಕು.

ರಾಜರು, ಚಕ್ರವರ್ತಿಗಳು, ಮಿಲಿಯಾಧಿಪತಿಗಳಾದ ಧನಿಕರು, ವಿಶ್ವವಿಖ್ಯಾತ ರಾದ ಕ್ರೀಡಾಪಟುಗಳಲ್ಲಿ ಕೆಲವರು ತಾವು ಬೇರೆಯವರಿಗಿಂತ ಮೇಲುಮಟ್ಟದವರೆಂಬ ಭಾವನೆಯಿಂದ ಕೂಡಿರುವರು. ಯಾಕೆಂದರೆ ಇತರರಲ್ಲಿ ಈ ಗುಣಗಳು ಇಲ್ಲ. ಜಗತ್ತನ್ನು ಜಯಿಸಿದವರು ಪಂಡಿತರಾದ ವಿದ್ವಾಂಸರೂ ಇಂತಹ ಗುಣಗಳಿಲ್ಲ ದವರಿಗಿಂತ ಉತ್ತಮರೆಂದು ಹೇಳಿಕೊಳ್ಳಬಹುದು. ಆದರೆ ಇವರಲ್ಲಿ ಅಹಂಭಾವವಿದ್ದವರು ಮಾತ್ರ ತಾವು ಅನ್ಯರಿಗಿಂತ ಘನವಂತರೆಂದು ಹೆಮ್ಮೆ ಪಡುತ್ತಾರಲ್ಲದೆ ಗರ್ವಿಗಳೂ ಆಗಿರುವ ಸಂಭವವೂ ಇದೆ.

ತಾನು ದೀನನೆಂಬ ಭಾವನೆಯು ಸರ್ವಸಾಮಾನ್ಯವಾಗಿ ಎಲ್ಲರಲ್ಲೂ ಇದೆ. ಯಾಕೆಂದರೆ ಈ ಮಾನವ ಜಗತ್ತಿನಲ್ಲಿ ಸಂಪತ್ತು ಮತ್ತು ದಾರಿದ್ರ್ಯ, ಬಲಿಷ್ಠ ಮತ್ತು ದುರ್ಬಲ, ನಿರೋಗಿ ಮತ್ತು ರೋಗಿ, ಕಲಿತವ ಮತ್ತು ಕಲಿಯದವ, ಸ್ಪುರದ್ರೂಪಿ ಮತ್ತು ಕುರೂಪಿ, ಶಕ್ತಿಯುಳ್ಳವ ಮತ್ತು ಶಕ್ತಿಯಿಲ್ಲದವ, - ಎಂಬ ತಾರತಮ್ಯಗಳಿವೆ. ಧನಿಕನಾದ ಮಾಲಿಕನು ತಾನು ಧನಿಯೆಂಬ ಅಹಂಭಾವವುಳ್ಳವನಾದರೆ, ಕಾರ್ಮಿಕನು ತಾನು ಕೆಲಸಮಾಡುವ ದೀನನೆಂಬ ಕೀಳುಭಾವದಿಂದಿರುವನು. ಮಾಲಿಕನಿಗೆ ತನ್ನ ಸಂಪತ್ತಿನ ಮತ್ತು ಅದರ ಶಕ್ತಿಯ ತಿಳಿವಳಿಕೆಯುಳ್ಳವನಾಗಿ ಘನತೆಯನ್ನು ತೋರಿಸಿದರೆ, ಕೂಲಿಯು ತಾನು ಬಡವನು, ಅಸಹಾಯಕನು ಎಂದು ತಿಳಿದು ದೀನನಾಗುವನು. ಈ ಪರಿಸ್ಥಿತಿಯು ಇಂದೂ ಇದೆ, ಮುಂದೆಯೂ ಇರುವುದು. ಆದ್ದರಿಂದಲೇ ಈ ಎರಡು ವರ್ಗಗಳಲ್ಲಿ ಎಳೆದಾಟವಾಗುತ್ತಿದೆ.

ಈ ಆಧುನಿಕ ಯುಗದಲ್ಲಿ ಕೆಲವು ದೇಶಗಳಲ್ಲಿ ಅಸ್ವಭಾವಿಕವಾಗಿ ವಿಜ್ಞಾನದ ಮತ್ತು ಕೈಗಾರಿಕೆಯ ಪ್ರಗತಿಯಾದುದರಿಂದ ಈ ಇತ್ತಂಡಗಳ ಮಧ್ಯದಲ್ಲಿರುವ



ಅಂತರವು ದೊಡ್ಡದಾಗುತ್ತಿದೆ. ಕೆಲವು ದೇಶಗಳಲ್ಲಿ ಅನಕ್ಷರತೆಯೇ ಮುಂತಾದ ವಿಚಾರಗಳೂ ಆ ದೇಶಗಳು ಹಿಂದುಳಿದ ರಾಷ್ಟ್ರಗಳೆಂದು ಕರೆಯಿಸಿಕೊಂಡಿವೆ. ಹೀಗಾಗಿ ಇಂದು ರಾಷ್ಟ್ರ ರಾಷ್ಟ್ರಗಳಲ್ಲಿ ಒಂದು ಭಿನ್ನತೆಯು ಬೆಳೆದು ಅವರೊಳಗೆ ಮೇಲು ಕೀಳು ಭಾವನೆಗಳಿಗೆಡೆಕೊಟ್ಟಿವೆ. ಇದೊಂದೇ ಇಂದಿನ ಅಂತರರಾಷ್ಟ್ರೀಯ ಅಶಾಂತಿಗೂ, ಕ್ಷೋಭೆಗೂ ಕೊನೆಯಲ್ಲಿ ಯುದ್ಧಕ್ಕೂ ಕಾರಣವಾಗಿದೆ.

ನಿಜವಾಗಿ ವಿವೇಚಿಸಿದರೆ ಈ ಮೇಲು ಕೀಲುಭಾವನೆಗಳು ಮಾನವನಲ್ಲಿ ಮೂಲ ಭೂತವಾಗಿರುವ ಗುಣಗಳಲ್ಲವೆಂದೂ ಕೆಲವೊಂದು ಪರಿಸ್ಥಿತಿಯಿಂದಾಗಿ ಈ ಅಹಂಭಾವ ಮತ್ತು ದೈನ್ಯತೆಗಳು ಬೆಳೆದಿವೆಯೆಂದೂ ತಿಳಿಯುವುದು. ಈ ಎರಡು ಭಾವನೆಗಳಲ್ಲಿ ಯಾವುದೇ ಒಂದು ಭಾವನೆಯು ಒಬ್ಬನಲ್ಲಿ ಬೇರೂರಿತೆಂದರೆ ಮತ್ತೆ ಅದನ್ನು ಕಿತ್ತೊಗೆಯುವುದು ಕಷ್ಟ ಸಾಧ್ಯವಾಗಿದೆ. ಯಾಕೆಂದರೆ ಅವರ ಲೌಕಿಕ ಮತ್ತು ಆರ್ಥಿಕ ಪರಿಸ್ಥಿತಿಗಳು ಆ ರೀತಿಯಲ್ಲಿವೆ. ದರಿದ್ರನೊಬ್ಬನು ಲಕ್ಷಾಧಿಪತಿಯ ವಿಚಾರದಲ್ಲಿ ಅಸೂಯೆಯಿಂದಿರುವುದನ್ನು ತಪ್ಪಿಸಲು ಸಾಧ್ಯವೆ? ಶಕ್ತಿಯುತನಾದ, ಕ್ರೂರಿಯಾದ ಧಣಿಗೆ ಅವನ ಸೇವಕನು ಹೆದರದಿರುವಂತೆ ಮಾಡಲು ಸಾಧ್ಯವೆ?

ನಮ್ಮ ಇಂದಿನ ಜೀವನಕ್ರಮದಲ್ಲಿ ಬಡರೈತನೊಬ್ಬನು ತನ್ನ ಧಣಿಯೆದುರು ಎಷ್ಟು ದೀನವಾಗಿ ನಡೆದುಕೊಳ್ಳುತ್ತಾನೆಂದು ನಮಗೆ ತಿಳಿದಿದೆ. ಅದೇ ರೀತಿಯಲ್ಲಿ ನೌಕರನು ತನ್ನ ಅಧಿಕಾರಿಯ ವಿಷಯದಲ್ಲೂ ದೀನನಾಗಿರುತ್ತಾನೆ. ಒಬ್ಬ ಘನವಿದ್ವಾಂಸನನ್ನು ಕಂಡಾಗ ನಿರಕ್ಷರಕುಕ್ಷಿಯು ತನ್ನಿಂದ ತಾನೇ ದೀನನಾಗಿ ಹೋಗುತ್ತಾನೆ. ದಷ್ಟಪುಷ್ಟನಾದವನನ್ನು ಹೆಳವನೊಬ್ಬನು ನೋಡಿದರೆ, ಎಷ್ಟು ಬೇಸರಪಟ್ಟುಕೊಂಡು ಮುದುಡಿಹೋಗುತ್ತಾನೆ! ಈ ಮೇಲು ಕೀಳುಭಾವಗಳು ಒಂದಲ್ಲವೊಂದು ರೀತಿಯ ಬಾಹ್ಯಕಾರಣಗಳಿಗಾಗಿ ಉಂಟಾಗಿರುವ ಚಟವಾಗಿದೆ. ಇತರ ದುರ್ಗುಣಗಳಂತೆ ಇದೂ ಒಂದು ದುರ್ಗುಣವಾಗಿದೆ. ಇದೊಂದು ರೀತಿಯ ಮಾನಸಿಕ ವ್ಯಾಧಿಯಾಗಿದೆ. ಧೈರ್ಯವಿಲ್ಲದಿರುವುದರಿಂದಲೇ ಈ ದೀನತೆಯು ಹಲವರಲ್ಲಿ ಬೆಳೆದಿದೆ. ಅದರಲ್ಲೂ ಕೆಲವೊಂದು ರೀತಿಯ ಆರ್ಥಿಕ ಸನ್ನಿವೇಶಗಳು, ಲೌಕಿಕ ಸಂಗತಿಗಳು ಇದಕ್ಕೆ ಮುಖ್ಯ ಕಾರಣಗಳಾಗಿವೆ.

ಇವುಗಳಲ್ಲಿ ಕೆಲವು ಪರಿಸ್ಥಿತಿಗಳನ್ನು ನಾವು ಹೋಗಲಾಡಿಸಿದರೆ, ಈ ಭಾವನೆಗಳನ್ನೂ ಹೋಗಲಾಡಿಸಬಹುದು. ಆದರೆ ಮಾನವತೆಯ ವಿವಿಧ ಅನೇಕ ಜಾತಿಗಳಲ್ಲಿರುವ ಭೇದಗಳನ್ನೂ ಕಳಚಿಬಿಡಲು ಸಾಧ್ಯವೇ? ಅವರನ್ನು ಒಂದುಗೂಡಿಸುವುದಾದರೂ ಹೇಗೆ? ಎಲ್ಲ ಜನರನ್ನೂ ಒಂದೇ ರೀತಿಯ ಸುಂದರರೂಪಸಂಪನ್ನರಾಗಿ ಮಾಡುವುದು ಸಾಧ್ಯವೇ? ಎಲ್ಲರನ್ನು ಸಂಪತ್ತಿನಲ್ಲೂ,

ದೇಹಶಕ್ತಿಯಲ್ಲೂ, ಸಮಾನರಾಗಿಮಾಡುವುದು ಸಾಧ್ಯವೇ? ಎಲ್ಲರನ್ನೂ ವಿದ್ಯಾಸಂಪತ್ತಿನಲ್ಲಿ ಸರ್ವಸಮಾನರಾಗಿಮಾಡುವುದು ಸಾಧ್ಯವೇ? ಒಂದು ದಿನ ಸಿರಿವಂತನೂ ಬಡವನೂ ಸರಿಸಮಾನನಾಗಿ ಒಂದೇ ಹಂತದಲ್ಲಿರಬಹುದೆಂದು ಯೋಚಿಸುವುದು ಅಸಾಧ್ಯವಾದ ಮಾತು. ಕೆಲವು ರಾಜಕೀಯ ದರ್ಶನಕಾರರು ಹೇಳುವಂತೆ, ಮನುಷ್ಯರೆಲ್ಲರೂ ತಮ್ಮ ಭೇದಭಾವವನ್ನು ತೊರೆದು ಸರಿಸಮಾನರಾಗಿ ತೊರೆದು ಸರಿಸಮಾನವಾಗಿ ಶಾಶ್ವತವಾದ ಜಾಗತಿಕ ಶಾಂತಿಗೆ ತಳಹದಿ ಯಾಗುವುದೆಂದು ಭಾವಿಸುವುದಾದರೂ ಮೂರ್ಖತನವೇ ಆಗಿದೆ. ಅದು ಹುಚ್ಚುಕನಸು ಮಾತ್ರ!

ಆದರೆ ದೈನ್ಯತೆಯನ್ನು ಮಾನವನ ಮನಸ್ಸಿನಿಂದ ಕಿತ್ತೊಗೆಯಲು ಕೆಲವು ಸೂಚನೆಗಳನ್ನು ಮಾತ್ರ ಹೇಳಬಹುದು: ಈ ಸೂಚನೆಗಳಂತೆ ಮಾನವನು ವೈಯಕ್ತಿಕವಾಗಿ ಅನುಷ್ಠಾನಕ್ಕೆ ತಂದು ಸಾಧಿಸಿದರೆ ತಕ್ಕಮಟ್ಟಿಗೆ ವೈಯಕ್ತಿಕ ಪರಿಣಾಮವಾಗಬಹುದು.

1. ಯಾವಾಗಲೂ ನಮಗಿಂತ ಮೇಲಿನವರನ್ನು ನೋಡಬಾರದು. ತನಗಿಂತ ಕೆಳಗಿರುವವರನ್ನೇ ನೋಡಬೇಕು. ನಾವು ಮೇಲೆ ನೋಡಿದೆವೆಂದರೆ ನಮಗಿಂತಲೂ ಆರ್ಥಿಕವಾಗಿಯಾಗಲೀ ಇನ್ನಿತರ ವಿಚಾರದಲ್ಲಾಗಲೀ ಮೇಲಿನವರನ್ನು ಕಂಡಾಗ ನಮಗೊಂದು ರೀತಿಯ ಬೇಸರವುಂಟಾಗುವುದು. ನಾವೆಲ್ಲರೂ ಸರಿಸಮಾನರೆಂದೇ ಯಾವಾಗಲೂ ಭಾವಿಸುತ್ತಿರಬೇಕು. ಯಾವ ಯಾವ ಕೆಲಸದಲ್ಲಿದ್ದರೂ ಮಾನವರೆಲ್ಲರೂ ಒಂದೇ ಎಂದು ತಿಳಿಯಬೇಕು.

2.ಯಾವಾಗಲೂ ನಾವು ನಮ್ಮನ್ನು ಅನ್ಯರೊಂದಿಗೆ ಹೋಲಿಸಿ ನೋಡ ಬಾರದು. ಯಾಕೆಂದರೆ ಆ ರೀತಿ ಹೋಲಿಸಿದಾಗ ಸ್ಪರ್ಧೆಯ ಮನೋಭಾವ ಬೆಳೆದು, ಆದರಿಂದ ನಿರಾಸೆಯೂ ಅಸೂಯೆಯೂ ಉತ್ಪನ್ನವಾಗಿ ಸಂಕಟವುಂಟಾಗುವುದು. ನಮ್ಮ ಪಾಡಿಗೆ ನಾವು ಪ್ರಾಮಾಣಿಕರಾಗಿ ಬಾಳಬೇಕು.

3.ಯಾರನ್ನೂ ನಿಂದಿಸದೆ ಎಲ್ಲರಲ್ಲೂ ಮೈತ್ರೀಭಾವನೆ, ಗುಣಿಗಳಲ್ಲಿ ಪೂಜ್ಯಭಾವನೆ, ಪರೋಪಕಾರ ಮಾಡುವುದೂ, ವಿಪರೀತ ವೃತ್ತಿಯವರಲ್ಲಿ ಮಾಧ್ಯಸ್ಥಭಾವನೆ, ಸರಳ ಸತ್ಯ ವ್ಯವಹಾರ, ಕರ್ತವ್ಯಪಾಲನೆ ಮುಂತಾದವನ್ನು ಬೆಳೆಸಿಕೊಳ್ಳಬೇಕು. ಮಾನವೀಯ ಗುಣ ಹೊಂದಿರಬೇಕು.

4.ಕೃಶರಾಗಿದ್ದರೂ ನಾವು ಯಾವಾಗಲೂ ಬಲಶಾಲಿಯೆಂದೇ ಭಾವಿಸಬೇಕು. ರೋಗಿಯಾಗಿದ್ದರೂ ಆರೋಗ್ಯಶಾಲಿಯೆಂದು ಭಾವಿಸಬೇಕು; ಬಡವನಾಗಿದ್ದರೂ



ಸಿರಿವಂತನೆಂದೇ ಭಾವಿಸಬೇಕು. ನಿರಕ್ಷಕುಕ್ಷಿಯಾಗಿದ್ದರೂ ಬುದ್ಧಿವಂತನೆಂದೇ ಭಾವಿಸಬೇಕು. ಈ ರೀತಿಯಲ್ಲಿ ನಂಬುತ್ತಿರುವುದರಿಂದ, ನಮ್ಮಲ್ಲಿರುವ ಕೊರತೆ ಗಳನ್ನು ಮರೆಯಲು ಸಾಧ್ಯವಾಗುತ್ತದೆ. ಆ ಮೂಲಕ ದಿನಭಾವನೆಯನ್ನು ಗೆಲ್ಲುವುದಕ್ಕೂ ಸಾಧ್ಯವಾಗುತ್ತದೆ.

5. ಧೈರ್ಯ ಮತ್ತು ಸಂತೃಪ್ತಿ ಮನೋಭಾವನೆಯನ್ನು ಅಭ್ಯಾಸ ಮಾಡಬೇಕು. ನಮ್ಮಲ್ಲಿ ಧೈರ್ಯವಿದ್ದರೆ, ನಾವು ಜಗತ್ತಿಗೂ ಚಕ್ರವರ್ತಿಗೂ ಹೆದರುವ ಅಗತ್ಯವಿಲ್ಲ. ನಮ್ಮಲ್ಲಿ ತೃಪ್ತಿಯಿದ್ದರೆ ನಾವು ಜಗತ್ತಿನ ಲಕ್ಷಾಧಿಪತಿಯ ವಿಚಾರದಲ್ಲೂ ಅಸೂಯೆಪಡುವಂತಿಲ್ಲ. ಯಾಕೆಂದರೆ, ನಮ್ಮ ದೃಷ್ಟಿಯಲ್ಲಿ, ಹಣಕ್ಕೇನೂ ಬೆಲೆ ಇರುವುದಿಲ್ಲ ಆದರೂ ಸೋಮಾರಿಯಾಗದೆ ದುಡಿದು ಜೀವಿಸಬೇಕು.

6. ಪ್ರಕೃತಿಯ ದೃಷ್ಟಿಯಲ್ಲಿ ಎಲ್ಲರೂ ಒಂದೇ ಎಂಬುದರಲ್ಲಿ ವಿಶ್ವಾಸ ವಿಡಬೇಕು. ಈ ನಂಬಿಕೆಯು ಮನುಷ್ಯ-ಮನುಷ್ಯರಲ್ಲಿ ಇರುವ ಭೇದವನ್ನು ಮರೆ ಯುವಂತೆ ಮಾಡುತ್ತದೆ. ಆದರಿಂದಾಗ ನಮ್ಮಲ್ಲಿರುವ ಅಹಂಭಾವವನ್ನಾಗಲೀ ದೈನ್ಯತೆಯನ್ನಾಗಲೀ ಗೆಲ್ಲುವುದಕ್ಕೆ ಸಹಾಯವಾಗುವುದು. ದೇವರಲ್ಲಿ- ಧರ್ಮದಲ್ಲಿ ನಮಗಿರುವ ನಂಬಿಕೆಯು ನಮ್ಮನ್ನು ಧೈರ್ಯಶಾಲಿಯನ್ನಾಗಿ ಮಾಡುವುದು. ಕ್ರೋಧಾದಿಕಷಾಯಗಳಿಂದ ದೂರವಿರಬೇಕು.

7. ದೈನ್ಯತೆಯು ಒಂದು ಮಾನಸಿಕವಾದ ಪರಿಣಾಮವಾಗಿರುವುದರಿಂದಲೂ. ಆದಕ್ಕೊಂದು ಲೌಕಿಕ ಅಥವ ಆರ್ಥಿಕ ಸಂಗತಿಯು ಮೂಲ ಕಾರಣವಾಗಿರುವುದ ರಿಂದಲೂ, ಅದನ್ನು ಗೆಲ್ಲಬೇಕಾದರೆ ಕೆಲವು ಮಾನಸಿಕ ಅಭ್ಯಾಸಗಳನ್ನು ಮಾಡಬೇಕು. ಅದಕ್ಕಾಗಿ ಮನಸ್ಸಿನಿಂದ ಎಲ್ಲ ರೀತಿಯ ಬಂಧನಗಳನ್ನು ದೂರೀಕರಿಸಬೇಕು. ನಿರ್ಲಿಪ್ತವಾಗಿರುವುದಕ್ಕೆ ಪ್ರಯತ್ನಿಸಬೇಕು. ಆದಷ್ಟು ಮಟ್ಟಿಗೆ ಲೌಕಿಕ ವಿಷಯಗಳನ್ನು ಮನಸ್ಸಿಗೆ ಹಚ್ಚಿಕೊಳ್ಳಬಾರದು. ನಮ್ಮ ಹಿಂದಿನ ಮುನಿಗಳು ಈ ರೀತಿಯ ಯೋಗಾಭ್ಯಾಸಗಳಿಂದ ಮನಸ್ಸನ್ನು ಸ್ತಿಮಿತದಲ್ಲಿರಿಸಿಕೊಳ್ಳುತ್ತಿದ್ದರು. ಅವರಲ್ಲಿ ಈ ಅಹಂಭಾವವಾಗಲೀ ದೈನ್ಯತೆಯಾಗಲಿ ಇರುತ್ತಿರಲಿಲ್ಲ. ಆದರಿಂದ ಸ್ಥಿರ ಮನಸ್ಕರಾಗಬೇಕು.

8. ಯಾರು ಭೌತಿಕ ಸಂಪತ್ತುಗಳ ಪ್ರದರ್ಶನಮಾಡುತ್ತಾರೋ, ಯಾರು ಸುಖೋಪಭೋಗಗಳಲ್ಲಿ ಮುಳುಗಿರುತ್ತಾರೋ ಯಾರು ಲೌಕಿಕ ವಿಚಾರದಲ್ಲೇ ತಲ್ಲೀನರಾಗಿರುತ್ತಾರೋ ಅಂಥವರು ತಮ್ಮಲ್ಲಿರುವ ಮೇಲು, ಕೀಳುಭಾವನೆಗಳನ್ನು ಗೆಲ್ಲಲಾರರು. ಈ ಭಾವನೆಗಳು ಮಾನಸಿಕವಾಗಿರುವಂತೆ, ದೈಹಿಕವಾಗಿಯೂ

ಇರುತ್ತವೆ. ನಾವು ಹಣ, ಕೀರ್ತಿ, ಶಕ್ತಿಗಳನ್ನು ಪಡೆಯಬೇಕೆಂದಿದ್ದರೆ ಅವುಗಳು ಇರುವವರಲ್ಲಿ ಅಸೂಯೆಗೊಂಡು ಸ್ಪರ್ಧೆಗೆ ನಿಲ್ಲಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಅವರು ನಮ್ಮನ್ನು ಇನ್ನಷ್ಟು ಕೀಳುಸ್ಥಿತಿಗೆ ದೂಡಬಹುದು. ಸಾತ್ವಿಕರಾಗಿ ಬಾಳಬೇಕು.

9. ಆತ್ಮಯೋಗ, ಧ್ಯಾನದಲ್ಲಿ ನಿರತರಾದವರು ದೈನ್ಯತೆಯನ್ನು ಒತ್ತಿ ಹಿಡಿಯಬಹುದೆಂದು ಕೆಲವು ಮಾನಸಿಕ ತಜ್ಞರು ಅಭಿಪ್ರಾಯಪಡುತ್ತಾರೆ. ಆಧುನಿಕ ಮಾನವನು ಗಳಿಗೆಯಿಂದ ಗಳಿಗೆಗೆ ಬದಲಾಗುತ್ತಿರುವನು. ಆದ್ದರಿಂದ ಆತ್ಮಾನುಸಂಧಾನಮಾಡುವವರೂ ಎಡೆಬಿಡದೆ ತಮ್ಮ ಅಭ್ಯಾಸವನ್ನು ಮಾಡಿದರೆ ತಮ್ಮಲ್ಲಿರುವ ದೀನತ್ವವನ್ನು ಕಳೆದುಕೊಳ್ಳಲು ಸಾಧ್ಯವಿದೆ. ಆದರೆ ಆಧುನಿಕ ಜಗತ್ತಿನಲ್ಲಿ ವಿರೋಧಭಾವಗಳೂ ಮನಸೆಳೆವ ಸಂಗತಿಗಳೂ ವಿಶೇಷವಾಗಿರುವುದರಿಂದ ಆತ್ಮಾನುಸಂಧಾನಮಾಡುವ ಕಾರ್ಯವಾದರೂ ಕಠಿಣವಾಗಿಯೇ ಇದೆ. ಆದರೂ ಸಾಧಕನು ನಂಬುಗೆಯಿಂದ ಮುನ್ನಡೆದರೆ ಕೊನೆಯಲ್ಲಿ ಸಫಲಹೊಂದಬಹುದು, ಸುಖಜೀವನವನ್ನು ನಡೆಸಬಹುದು.

## 38. ಸ್ವಾಧ್ಯಾಯ

ಇಂದಿನ ಜಗತ್ತಿನ ಬಹುಮಂದಿ ಮಾನವರು ಸಾಂಸಾರಿಕ ಜ್ಞಾನ ಪ್ರಾಪ್ತಿಗಾಗಿ, ಭೌತಿಕ ತಿಳಿವಳಿಕೆಗಾಗಿ ತಮ್ಮ ಇಡೀ ಜೀವನವನ್ನೇ ವ್ಯಯಮಾಡುತ್ತಿದ್ದಾರೆ. ಕೆಲವರಂತೂ ವಿಜ್ಞಾನ. ಇತಿಹಾಸ, ಅರ್ಥಶಾಸ್ತ್ರ, ಭೂಗೋಳ, ವೈದ್ಯಕೀಯ, ಯಾಂತ್ರಿಕ, ತಾಂತ್ರಿಕ ಮುಂತಾದ ಒಂದೊಂದೇ ವಿಷಯದಲ್ಲಿ ಪ್ರಕಾಂಡ ಪಂಡಿತರೆನಿಸಿದ್ದಾರೆ. ಲೌಕೀಕ ವಿಷಯದಲ್ಲಿ ವಿಸ್ತಾರ ಜ್ಞಾನಾರ್ಜನೆಗಾಗಿ ತಮ್ಮ ತನು ಮನ ಧನವನ್ನು ಅರ್ಪಿಸುತ್ತಿದ್ದಾರೆ. ಕೊನೆಗೆ ಚಂದ್ರಲೋಕಾದಿ ಬಾಹ್ಯಾಕಾಶದಲ್ಲಿ ತಮ್ಮ ನೆಲೆಗಳನ್ನು ಸ್ಥಾಪಿಸುವತ್ತ ದಾಪುಗಾಲು ಹಾಕಿ ಮುನ್ನುಗುತ್ತಿದ್ದಾರೆ. ಇನ್ನೂ ಏನೇನೋ ಹೊಸ ಹೊಸ ಅನ್ವೇಷಣೆಯಲ್ಲಿ ಹಗಲೂ ರಾತ್ರಿ ಶ್ರಮಿಸುತ್ತಿದ್ದಾರೆ. ಹೀಗಾದರೂ, ಎಲ್ಲಿ ಹೋದರೂ, ಎಷ್ಟು ಕಂಡುಹಿಡಿದರೂ ಇಷ್ಟೆಲ್ಲಾ ಜ್ಞಾನಾರ್ಜನೆ ಮಾಡಿದ್ದರೂ ಅವರಿಗೆಲ್ಲಾ ಶಾಂತಿ, ನೆಮ್ಮದಿ, ತೃಪ್ತಿ



ಇದೆಯೇ? ಇಲ್ಲ, ಸುಖವಂತೂ ಇಲ್ಲವೇ ಇಲ್ಲ. ಇಂತಹ ಜ್ಞಾನದಿಂದ ಸರ್ವನಾಶಕರವಾದ ಅಣುಬಾಂಬುಗಳ ತಯಾರಿಕೆ, ಮದ್ದು ಗುಂಡುಗಳ ಸಂಗ್ರಹ, ಅವುಗಳ ಪ್ರಯೋಗ ಮುಂತಾದವುಗಳಲ್ಲಿ ತೊಡಗಿ ಜನರನ್ನೂ ದೇಶವನ್ನೂ ಭಯಭೀತರನ್ನಾಗಿಸಿ ಪೇಚಾಡುತ್ತಿದ್ದಾರೆ. ಈ ವಿಷಯದಲ್ಲಿ ದೇಶದೇಶಗಳಲ್ಲಿ ಪೈಪೋಟಿ ಹೆಚ್ಚಾಗಿ ಅಂತರ ರಾಷ್ಟ್ರೀಯ ಪರಿಸ್ಥಿತಿಯು ಯಾವಾಗ ಏನೋ ಎಂಬ ಭೀಕರ ಪರಿಸ್ಥಿತಿಯಾಗಿದೆ. ಜ್ಞಾನಿ ಗಳೆನಿಸಿದ್ದೂ ಈ ಭಯ, ಅಶಾಂತಿ ಏಕೆ? ಇಂತಹ ಬಾಹ್ಯ ಸಂಶೋಧನೆ, ಭೌತಿಕ ಜ್ಞಾನ, ಹೊಟ್ಟೆಪಾಡಿನ ಓದು ಹೆಚ್ಚಾದಷ್ಟೂ ಆಸೆ ಆಕಾಂಕ್ಷೆಗಳು ಕಾಡುತ್ತಲೇ ಇವೆ. ಬಿಸಿಲುಗುದುರೆಯ ಝಳವನ್ನು ಕಂಡು ಅದು ನೀರೆಂದು ಭ್ರಮಿಸಿ ತನ್ನ ಬಾಯಾರಿಕೆಯನ್ನು ಹಿಂಗಿಸಿಕೊಳ್ಳಲು ಓಡುತ್ತಿರುವ ಮೃಗದಂತಾಗಿದೆ ಇಂದಿನ ಜನರ ಜ್ಞಾನಾಭ್ಯಾಸದ ಪರಿಶ್ರಮ.

ಹೀಗಾಗಲು ಕಾರಣವೇನು? ಬಾಹ್ಯಪದಾರ್ಥಗಳಿಂದ, ಬಾಹ್ಯದ ಲೌಕೀಕದ ವಿಷಯ ಜ್ಞಾನದಿಂದ ಕ್ಷಣಿಕ ಸುಖ ಶಾಂತಿ ಎನಿಸಿದರೂ ಅದರಿಂದ ನಿರಂತರ ದುಃಖವೇ ಹೆಚ್ಚು. ದಾಹವೇ ಹೆಚ್ಚು. ಅತೃಪ್ತಿಯೇ ಹೆಚ್ಚು. ಕ್ಷಣಿಕ ಸುಖಕ್ಕೆ ಮರುಳಾಗಿ ತನ್ನ ಬುದ್ಧಿ ಶಕ್ತಿ ವಿವೇಕ ಚೇತನವನ್ನು ಹಾಳುಮಾಡಿಕೊಂಡುದಾದರೆ ನೀರಿನಲ್ಲಿ ಬೆರಳಿಟ್ಟು ಚಪ್ಪರಿಸಿದಂತಾಗುತ್ತದೆ. ಏಕೆಂದರೆ ಅಂತರಂಗದ ಅರಿವು ಚೇತನ ಶಕ್ತಿಯ ತಿಳಿವಳಿಕೆ ಅಂತಃ ಸತ್ವದ ಮಹತ್ವ. ಅಲೌಕಿಕದ ಆನಂದದ ಪರಿಚಯವಿಲ್ಲದ್ದೇ ಕಾರಣ. ಇದಕ್ಕೆ ಯಥಾರ್ಥವಾದ ಸುಜ್ಞಾನವಿಲ್ಲದೆ, ಆಧ್ಯಾತ್ಮಿಕದ ಪರಿಚಯವಾಗದೆ. ಸುಖ, ಶಾಂತಿ, ತೃಪ್ತಿ. ನೆಮ್ಮದಿ ದೊರೆಯುವುದು ದುರ್ಲಭ. ಮೇಲ್ಕಂಡ ಲೌಕೀಕ, ತಾಂತ್ರಿಕ, ಯಾಂತ್ರಿಕ, ಐತಿಹಾಸಿಕ, ಭೌತಿಕ, ಆರ್ಥಿಕ, ಸಾಮಾಜಿಕ ಜ್ಞಾನಗಳು ಬೇಡವೆಂದಲ್ಲ. ಅವುಗಳೊಂದಿಗೆ ಆಧ್ಯಾತ್ಮಿಕ ಜ್ಞಾನವೂ ಬೇಕು. ಧರ್ಮಪ್ರಜ್ಞೆಯೂ ಬೇಕು. ಹಾಗೂ ನೈತಿಕ ಪ್ರಜ್ಞೆಯೂ ಬೇಕು.

ಬಾಹುಬಲಿ ಕ್ಷೇತ್ರದಲ್ಲಿ ಬಾಹುಬಲಿ ಸ್ವಾಮಿಯ ಮಂದಿರದ ಎದುರಿನಲ್ಲಿ ನಿಲ್ಲಿಸಿರುವ ಮಾನಸ್ಥಂಭದ ಪಾವಟಿಗೆಯಲ್ಲಿ ಒಂದು ದ್ವಾದಶಾನುಪ್ರೇಕ್ಷೆಯ ಬೋಧಿ ದುರ್ಲಭದ ಹಿಂದಿ ಪದ್ಯವನ್ನು ಬರೆದಿದ್ದಾರೆ. 'ಧನಕನಕಕಾಂಚನ ರಾಜಸುಖ, ಸಬಹಿ ಸುಲಭಕರ ಜಾನ್। ದುರ್ಲಭ ಹೈ ಸಂಸಾರ ಮೇ, ಏಕಯಥಾರತ ಜ್ಞಾನ್॥

ಅಂದರೆ ಧನ ಕನಕ ವಸ್ತು, ವಾಹನ, ರಾಜ್ಯಸುಖ ಮುಂತಾದ ಏನೆಲ್ಲಾ ಸುಲಭವಾಗಿ ಪಡೆಯಬಹುದು. ಇವನ್ನು ಪಡೆಯಲು ಸ್ವಲ್ಪ ಪ್ರಯತ್ನಿಸಿದರೆ ಸಾಕು ಕೈಗೂಡುತ್ತವೆ. ಆದರೆ ಈ ಜಗತ್ತಿನಲ್ಲಿ ಒಂದು ಯಥಾರ್ಥವಾದ ಆಧ್ಯಾತ್ಮಿಕ

ಸುಖಶಾಂತಿಯನ್ನು ದೊರಕಿಸುವ ಜ್ಞಾನವನ್ನು ಪಡೆಯುವುದು ದುರ್ಲಭ.

ಈ ಮಾನವ ಜನ್ಮ ಅತಿದುರ್ಲಭವಾದುದು. ಅವರಲ್ಲೂ ಸಜ್ಜಾತಿ, ಸದ್ಗೃಹಸ್ಥನಾಗಿ ಬಾಳುವುದು ಇನ್ನೂದುರ್ಲಭ ಅಂತಹ ಸೌಭಾಗ್ಯ ಒದಗಿ ಬಂದಿದ್ದರೂ ಯತಾರ್ಥವಾದ ಸುಜ್ಞಾನ ಎಂದರೆ ಸಮ್ಯಜ್ಞಾನ ಅಥವಾ ಆತ್ಮವಿಕಾಸದ ಆಧ್ಯಾತ್ಮಜ್ಞಾನವನ್ನು ಪಡೆಯದಿದ್ದರೆ ಫಲವೇನು? ದೊರೆತಿರುವ ಚಿಂತಾಮಣಿ ರತ್ನವನ್ನು ಕಾಗೆ ಹೊಡೆಯಲು ಎಸೆದಂತಾಗುತ್ತದೆ.

'ಅವಿಚಾರೇಣ ಕೃತೊ ಕೃತೋ ಬಂಧೋ
ವಿಚಾರೇಣ ಮೋಕ್ಷ ಉಚ್ಚತೇ'

-ಎಂಬಂತೆ ವಿಚಾರಪರನಾಗಿ ವಿಶುದ್ಧ ತಿಳಿವಳಿಕೆಯಿಂದ ಮಾನವನು ತಾನು ಮಾಡತಕ್ಕಕಾರ್ಯ, ಅಕಾರ್ಯಗಳ ಬಗ್ಗೆ ವಿವೇಚನೆ ಹೊಂದಿದ್ದು ದುಃಖ, ಅಶಾಂತಿ, ದುಮ್ಮಾನ ಕಷ್ಟಕಾರ್ಪಣ್ಯಗಳಿಂದ ಬಿಡುಗಡೆ ಹೊಂದುತ್ತಾ ಬಾಳಬೇಕು. ವಿವೇಕ, ವಿವೇಚನೆಗಳನ್ನು ಹೊಂದಿರುವುದೇ ಈ ಮಾನವ ಜನ್ಮದ ವಿಶೇಷತೆ. ಹೀಗಾಗಿ ತನ್ನಲ್ಲಿಯೇ ಹುದುಗಿರುವ ಜ್ಞಾನ-ಚೇತನ-ಆನಂತಗಳನ್ನು ಉಪಯೋಗಿಸಿಕೊಂಡು ಬಾಳಬೇಕು. ಅದಕ್ಕಾಗಿ ಈ ಅರಿವನ್ನು ಉಂಟುಮಾಡಲು ಇರುವ ಮುಖ್ಯ ಸಾಧನೋಪಾಯವೆಂದರೆ ಧರ್ಮ ಗ್ರಂಥಗಳ ಅಧ್ಯಯನ, ಅಭ್ಯಾಸ, ಶ್ರವಣ, ಮನನ, ಚಿಂತನ. ಪೂರ್ವಾಚಾರ್ಯರು, ಕೇವಲಿಗಳು, ತೀರ್ಥಾಧೀಶರು ತಮ್ಮ ಆಧ್ಯಾತ್ಮಿಕ ಬಲದಿಂದ ತಮ್ಮನ್ನು ತಾವು ಅರಿತ, ಲೌಕೀಕವನ್ನು ಮರೆತು, ಧ್ಯಾನತಪಾರಾಧನೆ ಯಲ್ಲಿ ತೊಡಗಿ ಅನಂತ ಸುಖ ಶಾಂತಿ ಗುಣ ಪುಂಜನಾದ ಆತ್ಮನ ಪರಿಚಯ ಮಾಡಿಕೊಂಡು ಆತ್ಮಹಿತಕಾರಿಯಾದ ಮಾರ್ಗೋಪಾಯವನ್ನು ಬೋಧಿಸಿದರು. ಅವರು ಕಂಡು ಅನುಭವಿಸಿದ ವಿಷಯಗಳನ್ನು, ತಾವು ಸಾಗಿ ಹೋಗಿ ಮುಕ್ತಿ ಸುಖವನ್ನು ಅನುಭವಿಸುವುದಕ್ಕೆ ಬೇಕಾದ ವಿಷಯಗಳನ್ನು ಬೋಧಿಸಿದರು.

ಅವೆಲ್ಲಾ ಜಿನವಾಣಿ ಎನಿಸಿ ಧರ್ಮಗ್ರಂಥದಲ್ಲಿ ಇಂದಿಗೂ ಅಡಕವಾಗಿ ಉಪಲಬ್ಧವಾಗಿವೆ. ಇಂದಿನ ಜಗತ್ತಿನ ಜನಕ್ಕೆ ಈ ಗ್ರಂಥಗಳ ಪರಿಚಯ ಒಳ ಮರ್ಮದ ಪರಿಚಯವಿಲ್ಲದೆ ಎಲ್ಲಿ ನೋಡಿದರೂ ಅಶಾಂತಿ ಅತೃಪ್ತಿ ಒಳಜಗಳ ಪೈಪೋಟಿಗಳ ಹೊಗೆಯಾಡುತ್ತಿದೆ.

ಮಾನವಜನ್ಮದ ಸಾಫಲ್ಯತೆಗೆ ಇರುವ ಒಂದೇ ಉಪಾಯವೆಂದರೆ ಉತ್ತಮವಾದ ಧರ್ಮಗ್ರಂಥಗಳ ಅಧ್ಯಯನ, ಅಭ್ಯಾಸ. ಇದನ್ನೇ ಸ್ವಾಧ್ಯಾಯವೆನ್ನುವರು. ಎಲ್ಲಾ ಸಮಸ್ಯೆಗಳ ನಿವಾರಣೆಗೆ ಸ್ವಾಧ್ಯಾಯವೊಂದೇ



ಉತ್ತಮ ಸಾಧನವಾಗಿದೆ.

ಆತ್ಮನು ಮಹಾತ್ಮನಾಗಿ ಪರಮಾತ್ಮನಾಗಲು ಬೇಕಾದ ಸಾಧನ ಸಂಪತ್ತು ಸ್ವಾಧ್ಯಾಯದಿಂದ ದೊರೆಯುತ್ತದೆ. ಅನಾದಿಯಿಂದ ಈ ಚೇತನಶಕ್ತಿಯನ್ನು ಅನಂತ ಜ್ಞಾನಾನಂದವನ್ನು ಹಿಡಿದುಕೊಂಡಿರುವ ಕರ್ಮವೆಂಬ ಶತ್ರುವನ್ನು ಜಯಿಸಿ ಜಿನನಾಗಲು ಈ ಸ್ವಾಧ್ಯಾಯದ ಆಶ್ರಯ ಬೇಕೇಬೇಕು. ಮುಕ್ತಿಮಾರ್ಗವಾದ ಸಮ್ಯಗ್ದರ್ಶನ, ಸಮ್ಯಜ್ಞಾನ, ಸಮ್ಯಕ್ಚಾರಿತ್ರಗಳೆಂಬ ರತ್ನತ್ರಯಗಳ ಪರಿಚಯ ಮಾಡಿಕೊಳ್ಳಲು ಜಿನವಾಣಿ ಮಾತೆಯ ಕೃಪಾಪೋಷಣೆಗೆ ಒಳಗಾಗಬೇಕು ಅಂದರೆ ಶಾಸ್ತ್ರಗಳ, ಧರ್ಮಗ್ರಂಥಗಳ ಸ್ವಾಧ್ಯಾಯ ಮಾಡಬೇಕು. ಉಪಾಸಕಾಧ್ಯಯನದಲ್ಲಿ ಹೇಳಿರುವಂತೆ.

ಸಮ್ಯಜ್ಞಾನೇನ ಸುಧ್ಯಾನಂ, ಧ್ಯಾನೇನ ಕರ್ಮ ನಿರ್ಜರಾ।
ನಿರ್ಜರಾ ಫಲ ನಿರ್ವಾಣಂ, ಕುರ್ಯಾತ್ ಸತತ ಸ್ವಾಧ್ಯಾಯಂ॥

ಸಮ್ಯಜ್ಞಾನದಿಂದ ಆತ್ಮಧ್ಯಾನವು, ಆತ್ಮಧ್ಯಾನದಿಂದ ಕರ್ಮನಿರ್ಜರೆಯೂ, ನಿರ್ಜರೆಯ ಫಲವೇ ನಿರ್ವಾಣವೂ ಆಗಿದೆ. ಇಂತಹ ಸಮ್ಯಜ್ಞಾನ, ತನ್ಮೂಲಕ ಆತ್ಮಧ್ಯಾನ, ಅದರಿಂದ ಕರ್ಮನಿರ್ಜರೆ ಮತ್ತದರ ಫಲವಾದ ನಿರ್ವಾಣ ಅಂದರೆ ಜೀವನ್ಮುಕ್ತಿಯೂ ಲಭಿಸಬೇಕಾದರೆ ಸತತವಾದ ಸ್ವಾಧ್ಯಾಯ ಮಾಡಬೇಕು,

ಇತರಿಂದಲೇ ಸೂತ್ರಕಾರರು 'ಸ್ವಾಧ್ಯಾಯಂ ಪರಮಃ ತಪಃ' ಎಂದಿದ್ದಾರೆ. ಅಂದರೆ ಹನ್ನೆರಡು ಪ್ರಕಾರದ ತಪಗಳಲ್ಲಿ ಸ್ವಾಧ್ಯಾಯವು ಶ್ರೇಷ್ಠವಾದ ತಪವಾಗಿದೆ. 'ತಪಸಾ ನಿರ್ಜರಾಚ' ಇಂತಹ ಶ್ರೇಷ್ಠವಾದ ತಪಸ್ಸಿನಿಂದಲೇ ಕರ್ಮನಿರ್ಜರೆ, ದುಃಖದಿಂದ ಬಿಡುಗಡೆ ಸಾಧ್ಯ.

ಸ್ವಾಧ್ಯಾಯವು ಎರಡು ರೀತಿಯಲ್ಲಿದೆ. ಒಂದು ಬಾಹ್ಯ ಮತ್ತೊಂದು ಅಂತರಂಗ ಧರ್ಮಗ್ರಂಥಗಳ ಅಧ್ಯಯನ ಮಾಡುವುದು ಬಾಹ್ಯಸಾಧನೆ. ತನ್ನಾತ್ಮ ಪರಿಚಯದ ಅಧ್ಯಯನ ಮಾಡುವುದು ಅಂತರಂಗ ಸಾಧನೆ. ಒಂದು ಬಾಹ್ಯತಪ ಮತ್ತೊಂದು ಅಂತರಂಗತಪ. ಇದರಲ್ಲಿ ಜಿನವಾಣಿಯನ್ನು ಓದುವುದು, ಕೇಳುವುದು ಮತ್ತು ಅದರ ಮಾರ್ಗ ದರ್ಶನದಂತೆ ಧ್ಯಾನದಲ್ಲಿ ತೊಡಗಿ ಆತ್ಮಾವಲೋಕನದಲ್ಲಿ ತೊಡಗುವುದು ಒಂದು ವ್ಯವಹಾರ ಮತ್ತೊಂದು ನಿಶ್ಚಯ. ಸ್ವಾಧ್ಯಾಯವು ನಿಶ್ಚಯವಾದ ಧ್ಯಾನಕ್ಕೆ ಭದ್ರವಾದ ತಳಪಾಯ. ಸ್ವಾಧ್ಯಾಯವಿಲ್ಲದೆ ಧ್ಯಾನ ಸಿದ್ಧಿಯಾಗುವುದಿಲ್ಲ.

ವ್ಯವಹಾರ ನಿಶ್ಚಯವರಿತು ಶಮ್ಮಾತ್ಮತತ್ತ್ವ ನೆಮ್ಮಿ ನಿಜವ ಸಾಧಿಸುವವರು ಮುನಿಗಳು, ಮಹಾತ್ಮರು, ಮುಕ್ತಿ ಮಾರ್ಗದ ಪಥಿಕರು ಸಾಧಕರು ಆಗಿರುತ್ತಾರೆ - ವ್ಯವಹಾರವನ್ನು ಬಿಟ್ಟು ನಿಶ್ಚಯವಿಲ್ಲ.

ಚಂಚಲವಾದ ಮನಸ್ಸು ಧ್ಯಾನದಲ್ಲಿ ಹೆಚ್ಚುಕಾಲ ನಿಲ್ಲಲಾರದು. ಸಂಕಲ್ಪ ವಿಕಲ್ಪಗಳಿಂದ ಕಲುಷಿತವಾದ ಈ ಮನಸ್ಸನ್ನು ತನ್ನ ವಶದಲ್ಲಿಟ್ಟುಕೊಳ್ಳಲು ಸ್ವಾಧ್ಯಾಯವು ಒಂದು ಅತ್ಯುತ್ತಮವಾದ ಸಾಧನೆ.

ಮನವೆಂಬ ಭೂತವನ್ನು ವಶಮಾಡಿಕೊಳ್ಳಲು ಸ್ವಾಧ್ಯಾಯವೆಂಬ ಕೆಲಸ ಹಚ್ಚಬೇಕು. ಆಗ ಅದು ತನಾಗಿಯೇ ವಶವಾಗುವುದು. ಮನೋ ಸಂಯಮಕ್ಕೆ ಇಂದ್ರಿಯ ನಿಗ್ರಹಕ್ಕೆ ತನ್ನ ಕಾರ್ಯ ಸಾಧನೆಗೆ ಸ್ವಾಧ್ಯಾಯವೊಂದೇ ಉತ್ತಮ ಸಾಧನ. ಜ್ಞಾನ ಧ್ಯಾನ ತಪಾರಾಧನೆಗೆ. ಪೂಜೆಯಲ್ಲಿ ಏಕಾಗ್ರತೆಗೆ, ಸುಖ ಶಾಂತಿನೆಮ್ಮದಿಗೆ ಉತ್ತಮವಾದ ಆಲಂಬನೆ ಎಂದರೆ ಸ್ವಾಧ್ಯಾಯವೇ ಆಗಿದೆ. ಗೃಹಸ್ಥರಿಗಂತೂ ವಿಧಿಸಿರುವ ದೇವಪೂಜಾದಿ ಷಟ್ ಕ್ರಿಯೆಗಳಲ್ಲಿ ಸ್ವಾಧ್ಯಾಯವೂ ಒಂದು ಮುಖ್ಯಕ್ರಿಯೆಯಾಗಿದೆ. ಮುನಿಗಳು ಮಾಡುವ ಷಡಾವಶ್ಯಕ ಕ್ರಿಯೆಗಳಲ್ಲಿ ಸ್ವಾಧ್ಯಾಯವೂ ಒಂದಾಗಿದೆ. ತೀರ್ಥಂಕರತ್ವ ಪದವಿಪ್ರಾಪ್ತಿಗೆ ಮಾಡಬೇಕಾದ ಶೋಡಶಕಾರಣ ಭಾವನಾರಾಧನೆಯಲ್ಲಿ ಅಭಿಕ್ಷಣ ಜ್ಞಾನೋಪಯೋಗ, ಬಹುಶ್ರುತಭಕ್ತಿ, ಪ್ರವಚನಭಕ್ತಿ, ಪ್ರವಚನ ವಾತ್ಸಲ್ಯ ಎಂಬವೂ ಸ್ವಾಧ್ಯಾಯದ ವಿಧಾನಗಳೇಆಗಿವೆ. ನಮ್ಮೆಲ್ಲಾ ಆಚಾರ ವಿಚಾರಗಳೂ, ವ್ರತ ನೋಂಪಿಗಳೂ, ಪೂಜಾರಾಧನೆಗಳೂ, ಜೀವನೋ ಪಾಯದ ರೀತಿ ನೀತಿಗಳೂ, ವ್ಯಾವಹಾರಿಕ, ಚಾರಿತ್ರಿಕ, ಆಧ್ಯಾತ್ಮಿಕ, ನೈತಿಕ, ಲೌಕೀಕ ವಿಧಿವಿಧಾನಗಳನ್ನೆಲ್ಲಾ ಸ್ವಾಧ್ಯಾಯದಿಂದ ತಿಳಿಯಲು ಸಾಧ್ಯ. ಅದರಲ್ಲೂ ಧರ್ಮಗ್ರಂಥಗಳ, ಆಗಮಗಳ, ಪುರಾಣ ಪುಣ್ಯ ಕಥೆಗಳ ಸ್ವಾಧ್ಯಾಯದಿಂದ ಸುಜ್ಞಾನ ವೃದ್ಧಿಯಾಗಿ ತನ್ನ ಬಾಳು ಹಸನಾಗಿ ಇಹಪರದಲ್ಲಿ ಒಳ್ಳೆಯದಾಗುತ್ತದೆ.

ಯತಿಗಳಿಗಂತೂ ಧ್ಯಾನ - ಅಧ್ಯಯನಗಳೇ ಮುಖ್ಯವಾದ ಕ್ರಿಯೆಗಳಾಗಿವೆ. ಆದರಲ್ಲೂಧ್ಯಾನದ ವಿಧಿ-ವಿಧಾನಗಳನ್ನು ತಿಳಿಯಲು ಅಧ್ಯಯನ ಅಂದರೆ ಸ್ವಾಧ್ಯಾಯವೇ ಬೇಕು. ಜ್ಞಾನಪೂರ್ವಕವಾಗಿ ಧರ್ಮದ ನಂಬಿಕೆ, ಜ್ಞಾನಪೂರ್ವಕವಾದ ಆಚರಣೆಯಿಂದಲೇ ಧ್ಯಾನ ಸಿದ್ಧಿಸುತ್ತದೆ.

ಅದಕ್ಕೆ ರತ್ನಾಕರ ಕವಿ ತನ್ನ ಅಪರಾಜಿತ ಶತಕದಲ್ಲಿ ಹೇಳಿದ್ದಾನೆ. ಓದಿದ ತತ್ತ್ವವಿಲ್ಲ, ಪರಿದಿಟ್ಟ ಪರಿಗ್ರಹವಿಲ್ಲ, ತಗ್ಗಿತಂಪಾದ ಕಷಾಯವಿಲ್ಲ, ಸದ್ಗುಣಾಮೋದತೆಯಿಲ್ಲ, ಮಾಡಿದ ಧರ್ಮ ವಿಕಾಸತೆಯಿಲ್ಲ, ನಿಮ್ಮೊಳತ್ಯಾದರ ಭಕ್ತಿಯಿಲ್ಲ ಸುಖಿಯಾಗುವೆನೆಂತು?



ಎಂದರೆ ಸುಖಿಯಾಗಲು ಪರಿಗ್ರಹಗಳ ತ್ಯಾಗ, ಕಷಾಯಗಳನ್ನು ತಗ್ಗಿಸಿಕೊಳ್ಳುವುದು, ಸದ್ಗುಣಿಯಾಗುವುದು, ದಾನಧರ್ಮಗಳನ್ನು ಮಾಡಿ ಧಾರ್ಮಿಕನೆನಿಸಿಕೊಳ್ಳುವುದು, ಭಗವಂತನಲ್ಲಿ ಭಕ್ತಿಯನ್ನಿಡುವುದು, ಮುಂತಾದ ಸದ್ಗುಣಗಳು ಮೈಗೂಡಬೇಕಾದರೆ ತತ್ತ್ವಗ್ರಂಥಗಳನ್ನು ಓದುವುದು ಅಂದರೆ ಸ್ವಾಧ್ಯಾಯ ಮಾಡುವುದರಿಂದಲೇ ಸಾಧ್ಯ ಎಂದು ಹೇಳಿದ್ದಾನೆ. ಆದ್ದರಿಂದ ಸ್ವಾಧ್ಯಾಯಕ್ಕೆ ಧರ್ಮಾಚರಣೆಯಲ್ಲಿ ಅಗ್ರಸ್ಥಾನವಿದೆ. ಜ್ಞಾನವಿಲ್ಲದೆ, ಅರಿವಿಲ್ಲದೆ, ತಿಳಿವಳಿಕೆ ಇಲ್ಲದೆ, ವಿವೇಕವಿಲ್ಲದೆ ಇಹ ಪರಗಳ, ಒಳಿತು ಕೆಡುಕುಗಳ ಹೇಯೋಪಾದೇಯಗಳ, ಆತ್ಮೋನ್ನತಿಯ ಪರಿಚಯವಾಗದು. ಆದ್ದರಿಂದಲೇ 'ಅರಿವೇ ಗುರು' ಎಂದೂ 'ಅರಿವಿಂದೀಕ್ಷಿಸಲಕ್ಕುಂ ಆತ್ಮ ನಿರವಂ' ಎಂದಿದ್ದಾರೆ. ಜ್ಞಾನದ ಬೆಳಕಿನಲ್ಲೇ ತನ್ನೊಳಗಿಹ ಪರಮಾತ್ಮನನ್ನು ಕಾಣಲು ಸಾಧ್ಯ. ಆ ಬೆಳಕನ್ನು ನೀಡುವ ದೀಪವೇ ಸ್ವಾಧ್ಯಾಯ.

ಯಾರಿಗೆ ಶಾಂತಿ ಸೈರಣೆ, ನಿಗರ್ವ ಮೃದು ಮಧುರ ಭಾಷಣ, ಆತ್ಮಾವಲೋಕನ ಬೇಕೋ, ಯಾರಿಗೆ ಮರ್ಕಟನಂತಹ ಮನಸ್ಸನ್ನು ತನ್ನ ಹಿಡತಕ್ಕೆ ತಂದುಕೊಳ್ಳಬೇಕೋ ಅವರು ಉತ್ತಮವಾದ ಜ್ಞಾನದಾಯಕವಾದ ಧರ್ಮಶಾಸ್ತ್ರಗಳ ಸ್ವಾಧ್ಯಾಯ ಮಾಡಬೇಕು, ಧರ್ಮಗ್ರಂಥಗಳೇ ಧರ್ಮದ ಜೀವಾಳ. ಆಚಾರದ ಆಧಾರ. ಪಂಚಪರಮೇಷ್ಠಿಗಳಲ್ಲಿ ಉಪಾಧ್ಯಾಯ ಪರಮೇಷ್ಠಿಗಳು ಶ್ರುತಸಾಗರರೇ ಆಗಿರುತ್ತಾರೆ. ಅವರು ಸ್ವಯಂ ಆಗಮಶಾಸ್ತ್ರಗಳನ್ನು ಸ್ವಾಧ್ಯಾಯ ಮಾಡುತ್ತಾ ಶಿಷ್ಯರಿಗೂ ಧರ್ಮದಪಾಠ ಮಾಡುತ್ತಾ ತಿಳಿವಳಿಕೆ ನೀಡುತ್ತಾರೆ. ಶ್ರಾವಕರಿಗಂತೂ ಅತಿ ಸುಲಭವಾದ ತಪವೆಂದರೆ ಸ್ವಾಧ್ಯಾಯವೇ ಆಗಿದೆ. ಒಂದು ಸಾರಿ ತತ್ತ್ವಾರ್ಥ ಸೂತ್ರವನ್ನು ಪೂರ್ತಿ ಸ್ವಾಧ್ಯಾಯ ಮಾಡಿದರೆ ಒಂದು ಉಪವಾಸದ ಫಲ ದೊರೆಯುತ್ತದೆ. ಎಂದಿದ್ದಾರೆ ಸೂತ್ರಕಾರರು.

ಶ್ರೀಮದರ್ಹತ್ಪರಮೇಶ್ವರರಿಂದ ಹೇಳಲ್ಪಟ್ಟುದೂ, ವಾದಿ ಪ್ರತಿವಾದಿಗಳಿಂದ ಖಂಡನೆ ಮಾಡಲು, ಜಯಿಸಲು ಅಶಕ್ಯವೂ, ಪ್ರತ್ಯಕ್ಷ ಪ್ರಮಾಣಗಳಿಂದ ವಿರೋಧ ವಿಲ್ಲದುದೂ, ವಸ್ತು ಸ್ವರೂಪವನ್ನು ಪ್ರತಿಪಾದಿಸುವುದೂ. ಜ್ಞಾನಾನಂದಮಯ ಚೈತನ್ಯನಾದ ಆತ್ಮ ಸ್ವರೂಪವನ್ನು ತಿಳಿಸಿ ಮುಕ್ತಿ ಮಾರ್ಗವನ್ನು ನಿರೂಪಿಸುವ ಜಿನವಾಣಿಯನ್ನೂ ಜೈನಾಗಮವನ್ನೂ ಭಕ್ತಿ, ಶ್ರದ್ಧೆ, ವಿನಯ ಆಸಕ್ತಿಯಿಂದ

ಓದುವುದು, ಕೇಳುವುದು ಅದರ ವಿಷಯವನ್ನು ಚಿಂತನ, ಮನನ ಮಾಡುವುದೂ, ಆದ ಈ ಸತ್ಕ್ರಿಯೆಗೆ ಸ್ವಾಧ್ಯಾಯವೆನ್ನುತ್ತಾರೆ. ಇದರ ಮುಖ್ಯಗುರಿ ಸತ್ಕಾಲಕ್ಷೇಪ, ಆತ್ಮನ ಅರಿವು. ಅಪೂರ್ವ ಜ್ಞಾನಾನಂದವೇ ಆಗಿದೆ.

ಎಲ್ಲಿಯವರೆಗೆ ಆಸಕ್ತಿಯಿಂದ ಶಾಸ್ತ್ರಸ್ವಾಧ್ಯಾಯವಾಗುವುದಿಲ್ಲವೋ ಅಲ್ಲಿಯವರೆಗೆ ಆ ಜೀವನು ಬೇಕಾದಷ್ಟು ಕಠಿಣ ತಪಸ್ಸು, ಕಾರ್ಯಗಳನ್ನು ಮಾಡಿದರೂ ಸಫಲವಾಗುವುದಿಲ್ಲ. ಸ್ವಾಧ್ಯಾಯದಿಂದಾಗುವ ಲಾಭವೇನೆಂದು ಓರ್ವ ಪೂರ್ವಾಚಾರ್ಯರು ಹೀಗೆ ಹೇಳಿದ್ದಾರೆ.

ಅಣ್ಣಾಣ ಏಣಾಸೋ। ಣಾಣದಿವಾರಯಸ್ಸ ಉಪ್ಪತ್ತಿ।
ಪಡಿಸಮಯಂ ಅಸಂಖೇಜ್ಜ। ಗುಣಸೇಡ್ಡಿ ಕಮ್ಮಣಿಜ್ಜರಾ॥

ಅಂದರೆ ಧರ್ಮಗ್ರಂಥಗಳ ಸ್ವಾಧ್ಯಾಯದಿಂದ ಅಜ್ಞಾನನಾಶವಾಗುತ್ತದೆ. ಅಂತರಂಗದಲ್ಲಿ ಜ್ಞಾನ ಸೂರ್ಯನ ಉದಯವಾಗುತ್ತದೆ. ಪ್ರತಿಸಮಯದಲ್ಲೂ ಅಸಂಖ್ಯಾತವಾಗಿ ಆತ್ಮ ಗುಣ ವೃದ್ಧಿಯೂ, ಕರ್ಮಗಳ ನಿರ್ಜರೆಯೂ ಆಗುತ್ತದೆ. ಇಷ್ಟೆಲ್ಲಾ ಲಾಭಗಳು ಏಕಕಾಲದಲ್ಲಿ ಸ್ವಾಧ್ಯಾಯದಿಂದ ಆಗುತ್ತದೆ ಎಂದ ಮೇಲೆ ಇದರ ಮಹತ್ವ ಎಂತಹುದು ಎಂದು ಗೊತ್ತಾಗುತ್ತದೆ. ಸ್ವಾಧ್ಯಾಯವು ಐದು ಪ್ರಕಾರಾಗಿವೆ:-

1.ವಾಚನಾ, 2.ಪೃಚ್ಛನಾ, 3.ಅನುಪ್ರೇಕ್ಷಾ, 4.ಆಮ್ನಾಯ, 5.ಧರ್ಮೋಪದೇಶ.

ವಾಚನಾ:- ಧರ್ಮಗ್ರಂಥಗಳನ್ನು ಶ್ರದ್ಧಾಭಕ್ತಿಯಿಂದ ಓದುವುದು ಮತ್ತು ಹೇಳುವುದು.

ಪೃಚ್ಛನಾ :– ಓದುವ ಮತ್ತು ಕೇಳುವಾಗ ತನಗೆ ಸಂಶಯಬಂದ ವಿಷಯದ ಬಗ್ಗೆ ಸ್ಪಷ್ಟೀಕರಣವನ್ನು, ಅರ್ಥವನ್ನು, ಆಧಾರವನ್ನು ತಿಳಿದವರಿಂದ ಕೇಳಿ ಸಂಶಯ ವನ್ನು ನಿವಾರಿಸಿಕೊಳ್ಳುವುದು, ಓದುವುದನ್ನು ಸಾವಧಾನದಿಂದ ಕೇಳುವುದು.

ಅನುಪ್ರೇಕ್ಷಾ :– ಕೇಳಿದ, ಓದಿ ತಿಳಿದ ವಿಷಯವನ್ನು ಬಾರಿಬಾರಿಗೂ ವಿಚಾರಮಾಡುವುದು. ಚಿಂತನ, ಮನನ ಮಾಡುವುದು ಅಂದರೆ ಮೆಲುಕು ಹಾಕುವುದು.

ಆಮ್ನಾಯ :– ಗ್ರಂಥಗಳನ್ನು ಆಸಕ್ತಿಯಿಂದ ಕ್ರಮವಾಗಿ ಆಲಸ್ಯವಿಲ್ಲದೆ



ಓದಬೇಕು. ತಾನು ಓದುವ ಗ್ರಂಥ ಅಥವಾ ಶಾಸ್ತ್ರವು ಪೂರ್ವಾಚಾರ್ಯರ ಪದ್ಧತಿಗನುಸಾರವಾಗಿ ರಚಿತವಾಗಿರಬೇಕು. ಓದುವಾಗ ಹೇಳುವಾಗ ಅದರಲ್ಲಿರುವ ವಿಷಯವನ್ನು ಬಿಟ್ಟು ಅದಕ್ಕೆ ತನ್ನದೇ ಆದ ವಿಷಯವನ್ನು ಹೇಳಬಾರದು ಕೇಳುವವರೂ ಆ ಗ್ರಂಥದ ಬಗ್ಗೆ ವಿಷಯದ ಬಗ್ಗೆ ವಿರುದ್ಧವಾಗಿ ತಿಳಿಯಬಾರದು.

ಧರ್ಮೋಪದೇಶ :– ಗ್ರಂಥಗಳ ವಿಷಯವನ್ನು ಉಪನ್ಯಾಸ ಮಾಡುವುದು, ವ್ಯಾಖ್ಯಾನ ಮಾಡುವುದು ಧರ್ಮ ಪ್ರಭಾವನೆ ಮಾಡುವುದು. ಗ್ರಂಥದ ಮೂಲ ವಿಷಯಕ್ಕೆ ಲೋಪದೋಷ ಬರದಂತೆ ಸರಳವಾಗಿ ಉಪದೇಶ ಮಾಡುವುದು.

ಹೀಗೆ ಐದೂ ರೀತಿಯಿಂದಲೂ ಮಾಡುವ ಸ್ವಾಧ್ಯಾಯವು ಆತ್ಮಕಲ್ಯಾಣಕ್ಕೆ ಸಾಧನವಾಗುವುದು. ಒಂದು ವೇಳೆ ತನಗೆ ಓದಲು ಆಗದಿದ್ದರೆ, ಬರದಿದ್ದರೆ, ತಿಳಿಯದಿದ್ದರೆ ತಿಳಿದಂತಹ ಪಂಡಿತರು, ಶಾಸ್ತ್ರಿಗಳು, ವಿದ್ವಾಂಸರುಗಳಿಂದಲೋ ಮಹಾಶ್ರುತರಾದ ಗುರುಗಳಿಂದಲೋ ಕೇಳಿ ತಿಳಿಯಬೇಕು.

ಸ್ವಾಧ್ಯಾಯದಿಂದ ಸದ್ಬುದ್ಧಿ ಉಂಟಾಗುತ್ತದೆ. ಸತ್ಪರಿಣಾಮವಾಗುತ್ತದೆ. ಸ್ವಾತ್ಮೋಪಲಬ್ಧಿಯೂ, ಶಿವಸೌಖ್ಯ ಸಿದ್ಧಿಯೂ ಉಂಟಾಗುತ್ತದೆ. ಆದಕ್ಕಾಗಿಯೇ ಜಿನವಾಣಿ ಮಾತೆಯ ಸ್ತುತಿಯನ್ನು ಆಚಾರ್ಯರು ಹೀಗೆ ಮಾಡಿದ್ದಾರೆ.

ಬೋಧಿಃ ಸಮಾಧಿಃ ಪರಿಣಾಮ ಶುದ್ಧಿಃ
ಸ್ವಾತ್ಮೋಪಲಬ್ಧಿಃ ಶಿವಸೌಖ್ಯ ಸಿದ್ಧಿಃ
ಚಿಂತಾಮಣಿಂ ಚಿಂತಿತ ವಸ್ತುದಾನೇ
ತ್ವಾಂ ವಂದ್ಯಮಾನಸ್ಯ ಮಮಾಸ್ತುದೇವಿ॥

ಜಿನವಾಣಿಯ ಸ್ವಾಧ್ಯಾಯದಿಂದ ಆಗುವ ಲಾಭವನ್ನು ಇದರಲ್ಲಿ ನಿರೂಪಿಸಿದ್ದಾರೆ. ಬೋಧಿಲಾಭವಾಗುವುದು. ಸಮಾಧಿ ಮರಣದ ಪ್ರಾಪ್ತಿಯಗುವುದು. ಸತ್ಪರಿಣಾಮವಾಗುವುದು. ಆತ್ಮದರ್ಶನವಾಗುವುದು ಮೋಕ್ಷ ಸುಖ ಸಿದ್ಧಿಸುವುದು. ಇಷ್ಟೇ ಅಲ್ಲ ಇಷ್ಟಾರ್ಥವನ್ನು ಈಡೇರಿಸುವ ಚಿಂತಾಮಣಿಯಂತಿರುವ ಹೇ ಜಿನವಾಣಿ ಮಾತಾ ನಿನಗೆ ನಮಸ್ಕರಿಸುತ್ತೇನೆ.

ಜಿನಧರ್ಮದಲ್ಲಿ ಶ್ರದ್ಧೆಯನ್ನಿಟ್ಟು ಸರ್ವಜ್ಞ ಜಿನೇಂದ್ರನವಾಣಿಯು ಸತ್ಯವೆಂದು ನಂಬಿ ಭಕ್ತಿ ಭಾವದಿಂದ ಸ್ವಾಧ್ಯಾಯ ಮಾಡಬೇಕು. ಶಾಸ್ತ್ರದ ವಿಷಯಗಳು ನಮಗೆ ತಿಳಿಯದಿದ್ದರೆ ಅದರಲ್ಲಿರುವ ವಿಷಯಗಳು ಅಸತ್ಯವೆಂದು ಹೇಳಬಾರದು. ಶಾಸ್ತ್ರೀಯ ವಿಷಯವು ಬಹಳಷ್ಟು ಪಾರಮಾರ್ಥಿಕವೂ,

ಆಧ್ಯಾತ್ಮಿಕವೂ ಬಹು ಅರ್ಥ ಗರ್ಭಿತವೂ ಸೂಕ್ಷ್ಮವೂ ಆಗಿರುತ್ತವೆ. ಇವೆಲ್ಲಾ ಒಮ್ಮೆಲೇ ಅರ್ಥವಾಗುವುದಿಲ್ಲ ನಮಗೆ. ಪೂರ್ಣಜ್ಞಾನದ ಅಭಾವಕ್ಕೆ ನಮ್ಮಲ್ಲಿ ಆವರಿಸಿರುವ ಜ್ಞಾನಾವರಣೀಯ ಕರ್ಮವೇ ಕಾರಣ. ಶಾಸ್ತ್ರದಲ್ಲಿ ಬಂದ ಕೆಲವು ವಿಷಯಗಳ ವಿವರವಾದ ಅರ್ಥ ತಿಳಿಯಲು ಪೂಜ್ಯ ಕುಂದಕುಂದಾಚಾರ್ಯರೂ, ಪೂಜ್ಯಪಾದಾಚಾರ್ಯರೂ, ಉಮಾ ಸ್ವಾಮಿಗಳೂ ವಿದೇಹಕ್ಷೇತ್ರಕ್ಕೆ ತಮ್ಮ ತಪೋಬಲದಿಂದ ಹೋಗಿ ಸರ್ವಜ್ಞರಾದ ಶ್ರೀಮಂಧರ ಸ್ವಾಮಿಗಳಲ್ಲಿ ಕೇಳಿ ತಿಳಿದು ಬಂದರೇ ವಿನಃ ತಮಗೆ ತಿಳಿಯದ ಶಾಸ್ತ್ರಗಳ ಬಗ್ಗೆ ಪೂರ್ವಾಚಾರ್ಯರ ಬಗ್ಗೆ ಅಗೌರವ ತೋರಲಿಲ್ಲ. 'ಈ ಶಾಸ್ತ್ರ ಸುಳ್ಳು, ಈ ವಿಷಯ ಇಲ್ಲಿರಬಾರದಾಗಿತ್ತು. ಇದನ್ನು ತೆಗೆದು ಹಾಕಬೇಕು. ಇದು ಈ ಕಾಲಕ್ಕೆ ಸರಿಹೋಗುವುದಿಲ್ಲ' ಎನ್ನಲಿಲ್ಲ. ಇಂತಹ ಮಹಾತೀರ್ಥಾಧೀಶರು ಬೋಧಿಸಿದ, ಗಣಧರರಿಂದ ರಚಿತವೂ ಪೂರ್ವಾಚಾರ್ಯರುಗಳಿಂದ ಸಂಗ್ರಹವೂ ಆದ ಜಿನವಾಣಿಯ ಸ್ವಾಧ್ಯಾಯದಿಂದ ಉತ್ತಮ ಜ್ಞಾನ ಸುಖ ಶಾಂತಿ ನೆಮ್ಮದಿಗಳು ಮನೋನಿಗ್ರಹ, ಏಕಾಗ್ರತೆಗಳು ಉಂಟಾಗುವುದರಲ್ಲಿ ಸಂಶಯವಿಲ್ಲ.

ಸ್ವಾಧ್ಯಾಯವನ್ನು ನಿಯಮಿತವಾಗಿ ಕಾಲಕ್ಕನುಸಾರವಾಗಿ ತನಗೆ ಶಕ್ತಿ ಇದ್ದಷ್ಟೂ ಮಾಡಬೇಕು. ಈಗ ಸಾಕ್ಷಾತ್ ತೀರ್ಥಂಕರರು ಈ ಕ್ಷೇತ್ರದಲ್ಲಿಲ್ಲ. ವಿದೇಹಾದಿ ಕ್ಷೇತ್ರಕ್ಕೆ ನಾವು ಹೋಗಲು ಅಸಮರ್ಥರು. ಆದರೂ ತೀರ್ಥಾಧೀಶರು, ಕೇವಲಿಗಳು, ಶ್ರುತ ಕೇವಲಿಗಳು, ಶ್ರುತಧರಾಚಾರ್ಯರುಗಳು ಹೇಳಿದ, ಬರೆದ ಜಿನವಾಣಿ ಅಪಾರವಾಗಿವೆ. ಅದರಲ್ಲಿ ನಾವು ಕ್ರಮಬದ್ಧವಾಗಿ ದಿನಕ್ಕೆ ಒಂದು ಪುಟ, ಅಥವ ಒಂದು ಅಧ್ಯಾಯ, ಇಲ್ಲಾ ಒಂದು ಶ್ಲೋಕ ಮತ್ತದರ ಅರ್ಥ ಓದಿದರೂ ನಮ್ಮ ಜೀವಿತಕಾಲದಲ್ಲಿ ಎಷ್ಟೋ ಗ್ರಂಥಗಳನ್ನು ಸ್ವಾಧ್ಯಾಯ ಮಾಡಿ ಮುಗಿಸಬಹುದು.

ಭಗವಾನ್ ಜಿನೇಂದ್ರರು ತಮ್ಮ ಕೇವಲಜ್ಞಾನದಿಂದ ತಿಳಿದ ವಿಷಯವನ್ನೆಲ್ಲಾ ತಮ್ಮ ವಿಹಾರಕಾಲದಲ್ಲಿ ಬೋಧಿಸಲಾಗಿಲ್ಲ, ಹೇಳಿದ ಎಲ್ಲಾ ವಿಷಯವೂ ಗ್ರಂಥರೂಪದಲ್ಲಿ ಸಂಗ್ರಹಿಸಲಾಗಿಲ್ಲ, ಗ್ರಂಥದಲ್ಲಿ ಸಂಗ್ರಹಿಸಿದವುಗಳೆಲ್ಲಾ ಈಗ ಉಳಿದಿಲ್ಲ, ಉಳಿದಿರುವ ಓಲೆಗರಿ ಗ್ರಂಥಗಳೆಲ್ಲಾ ಮುದ್ರಣವಾಗಿ ಪ್ರಕಟವಾಗಿಲ್ಲ, ಪ್ರಕಟವಾಗಿರುವ ಗ್ರಂಥಗಳನ್ನೆಲ್ಲಾ ನಾವು ನೋಡಿಲ್ಲ ಕೇಳಿಲ್ಲ, ನಾವು ನೋಡಿ ಕೇಳಿದ ಗ್ರಂಥವನ್ನೆಲ್ಲಾ ಒಮ್ಮೆ ಓದಲಾಗುವುದಿಲ್ಲ. ಅಂದಮೇಲೆ ಜಿನವಾಣಿಯು ಈ ಶಾಸ್ತ್ರರೂಪದಲ್ಲಿ ಸಾಗರದಷ್ಟು ವಿಸ್ತಾರವಾಗಿದೆ. ಇದು ಅನೇಕರ ಧಾಳಿಗೆ ಸಿಕ್ಕಿ, ಹುಳುಗಳಪಾಲಾಗಿ, ಭೂಗತವಾಗಿ ಅಳಿದುಳಿದ ಈಗಿನ ಶಾಸ್ತ್ರಭಂಡಾರವನ್ನು



ಓದಿಮುಗಿಸಲು ನಮ್ಮ ಆಯುಷ್ಯ ಸಾಲದು. ಆದರೂ ನಮ್ಮ ಯಥಾಶಕ್ತಿ ಸ್ವಾಧ್ಯಾಯ ಮಾಡುವುದುನಮ್ಮ ಕರ್ತವ್ಯವಾಗಿದೆ. ಅದಕ್ಕಾಗಿ ಇದು ಅವಶ್ಯಕ ಕ್ರಿಯೆಗಳಲ್ಲಿ ಒಂದಾಗಿ ಸೇರಿಸಲಾಗಿದೆ. ಮಾನವನು ಮಿಥ್ಯೆಯಿಂದ ಸತ್ಯದ ಕಡೆಗೆ, ಕತ್ತಲೆಯಿಂದ ಬೆಳಕಿನ ಕಡೆಗೆ, ಮೃತ್ಯುವಿನಿಂದ ಅಮೃತತ್ವದ ಕಡೆಗೆ, ದುಃಖದಿಂದ ಸುಖದ ಕಡೆಗೆ ಸಾಗಲು ಸ್ವಾಧ್ಯಾಯ ಸಹಕಾರಿಯಾಗಿ ಮಾರ್ಗದರ್ಶನ ನೀಡುವುದು.

ಈ ಭೂಲೋಕದಲ್ಲಿ ಅತ್ಯಂತ ಸಾರಭೂತವಾದ ವಸ್ತುವಿದೆ ಎಂದರೆ ಅದೇ ಶಾಸ್ತ್ರ. ಈ ಜಿನವಾಣಿಯ ಸಾರವು ನಾಲ್ಕು ಅನುಯೋಗಗಳಲ್ಲಿ ಅಡಕವಾಗಿದೆ. ಇವೇ ದ್ವಾದಶಾಂಗ ಶಾಸ್ತ್ರ ಮತ್ತು ಚತುರ್ದಶ ಪೂರ್ವಗಳು ಇವೆಲ್ಲಾ ಈ ಅನುಯೋಗಗಳಲ್ಲಿ ಅಡಕವಾಗಿವೆ. ಈ ಅನುಯೋಗಗಳೂ ಎಂಬುದೂ ಒಂದು ಸ್ವತಂತ್ರ ಗ್ರಂಥವಾಗಿಲ್ಲ. ಶಾಸ್ತ್ರಗಳ ವಿಂಗಡಣೆಯು ನಾಲ್ಕು ವಿಭಾಗವಾಗಿದೆ. 1. ಪ್ರಥಮಾನುಯೋಗ, 2. ಕರಣಾನುಯೋಗ, 3. ಚರಣಾನುಯೋಗ, 4. ದ್ರವ್ಯಾನುಯೋಗ.

೧. **ಪ್ರಥಮಾನುಯೋಗ :–** ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳ ವರ್ಣನೆಯೂ, ತೀರ್ಥಂಕರರ ಚಕ್ರವರ್ತಿಗಳ, ಬಲಭದ್ರರ, ನಾರಾಯಣರ, ಪ್ರತಿನಾರಾಯಣರೆಂಬ ಶಲಾಕಾಪುರುಷರ ಭವಾವಳಿಗಳೂ, ಹಲವು ಮಹಾಪುರುಷರ ಕಥೋಪಕಥನಗಳೂ, ದೇವಗುರು ಶಾಸ್ತ್ರಗಳ ಪರಿಚಯವೂ, ಪಂಚಕಲ್ಯಾಣದ ವಿವರವೂ, ಇದರಲ್ಲಿ ಸೇರಿರುತ್ತವೆ. ಮಹಾಪುರಾಣ, ಹರಿವಂಶ, ಆದಿಪುರಾಣ ಮುಂತಾದವು ಪ್ರಥಮಾನುಯೋಗ ಗ್ರಂಥಗಳೇ ಆಗಿವೆ. ಇದರ ಸ್ವಾಧ್ಯಾಯದಿಂದ ಪುಣ್ಯಬಂಧವೂ, ರತ್ನತ್ರಯ ಪ್ರಾಪ್ತಿಯೂ, ಆತ್ಮ ಶಾಂತಿಯೂ ಆಗುವುದು.

೨. **ಕರಣಾನುಯೋಗ :–** ಲೋಕಾಲೋಕಗಳ ವಿಸ್ತಾರ. ಸ್ವರೂಪ. ಕಾಲಭೇದಗಳಾದ ಉತ್ಸರ್ಪಿಣೀ, ಅವಸರ್ಪಿಣೀಗಳ ಪರಿವರ್ತನೆಯನ್ನೂ, ಊರ್ಧ್ವ, ಮಧ್ಯ, ಅಧೋಲೋಕಗಳ ವರ್ಣನೆಯನ್ನೂ, ಚತುರ್ಗತಿಗಳ ಸ್ವರೂಪವನ್ನೂ ತಿಳಿಸುವ ಶಾಸ್ತ್ರಗಳಿಗೆ ಕರಣಾನುಯೋಗವೆನ್ನುವರು. ತ್ರಿಲೋಕಪ್ರಜ್ಞಪ್ತಿ, ತ್ರಿಲೋಯಪಣ್ಣತ್ತಿಮುಂತಾದವು ಕರಣಾನುಯೋಗಕ್ಕೆ ಸಂಬಂಧಿಸಿದವುಗಳು. ಇದರ ಸ್ವಾಧ್ಯಾಯದಿಂದ ಈ ಲೋಕದಲ್ಲಿ ನಾನು ಎಲ್ಲಿದ್ದೇನೆ. ಯಾವಗತಿಯಲ್ಲಿ ಏನೇನು ಅನುಭವ. ಈ ಭವ ಮಾಲೆಯ ಕೊನೆ ಎಂದು, ಹೇಗೆ ಎಂಬುದು ಅರಿವಾಗುತ್ತದೆ.

೩. **ಚರಣಾನುಯೋಗ :–** ಯತಿಗಳ ಮತ್ತು ಶ್ರಾವಕರ ಆಚಾರ ವಿಚಾರಗಳನ್ನು ಚಾರಿತ್ರ್ಯದ ವಿಧಿವಿಧಾನಗಳನ್ನು ವ್ರತ, ನೇಮ, ನಿಯಮಗಳ

ಪಾಲನೆಯ ಕ್ರಮವನ್ನೂ-ಪೂಜೆ-ಆರಾಧನೆ, ನೋಂಪಿ ಮುಂತಾದವುಗಳನ್ನು ಶಿಕ್ಷೆ-ದೀಕ್ಷೆ, ಪ್ರಾಯಶ್ಚಿತ್ತ, ಪ್ರತಿ ಕ್ರಮಣ, ಪ್ರತ್ಯಾಖ್ಯಾನಾದಿಗಳನ್ನು ತಿಳಿಸುವ ಶಾಸ್ತ್ರಗಳೇ ಚರಣಾನುಯೋಗ. ಮೂಲಾಚಾರ, ಅನಾಚಾರ ಧರ್ಮಾಮೃತ, ಮೂಲರಾಧನ, ರಯಣಸಾರ, ಪ್ರವಚನಸಾರ ಮುಂತಾದವು ರತ್ನಕರಂಡ ಶ್ರಾವಕಾಚಾರ, ಸಾಗಾರಧರ್ಮಾಮೃತ, ಉಪಾಸಕಾಧ್ಯಯನ ಮುಂತಾದ ಆಚಾರ ಗ್ರಂಥಗಳು ಹಲವು ಇವೆ. ಇವುಗಳ ಸ್ವಾಧ್ಯಾಯದಿಂದ ನಮ್ಮ ಆಚಾರ ವಿಚಾರಗಳ ಬಗ್ಗೆ ಅರಿವು ಮೂಡುತ್ತದೆ. ಸತ್ಯ-ಮಿಥ್ಯಗಳ ಪರಿಚಯವಾಗುತ್ತದೆ. ವ್ರತ, ತಪ, ಧ್ಯಾನಗಳ ವಿವರ ಗೊತ್ತಾಗಿ ಆತ್ಮಕಲ್ಯಾಣ ಮಾರ್ಗೋಪಾಯ ತಿಳಿಯುತ್ತದೆ.

೪.ದ್ರವ್ಯಾನುಯೋಗ :- ಜೀವಾಜೀವಾದಿಷಡ್ ದ್ರವ್ಯಗಳು, ಸಪ್ತ ತತ್ತ್ವಗಳೂ, ನವಪದಾರ್ಥ, ಪಂಚಾಸ್ತಿಕಾಯ, ಕರ್ಮದ ಬಂಧ, ಬಿಡುಗಡೆ ಮೋಕ್ಷಮುಂತಾದ ವಿಷಯಗಳ ವರ್ಣನೆ ಇರುವ ಗ್ರಂಥಗಳು ದ್ರವ್ಯಾನುಯೋಗದಲ್ಲಿ ಸೇರಿರುತ್ತವೆ. ತತ್ವಾರ್ಥಸೂತ್ರ, ಸಮಯಸಾರ, ಸರ್ವಾರ್ಥಸಿದ್ಧಿ, ನಿಯಮಸಾರ, ದ್ರವ್ಯಸಂಗ್ರಹ, ಪಂಚಾಸ್ತಿಕಾಯ, ಧವಳ,ಜಯಧವಳ, ಮಹಾಧವಳಾದಿ ಗ್ರಂಥಗಳು ದ್ರವ್ಯಾನುಯೋಗದಲ್ಲಿ ಸೇರಿವೆ. ಇದರ ಸ್ವಾಧ್ಯಾಯದಿಂದ ಜೀವಜಂತುಗಳ ಪರಿಚಯ, ಕರ್ಮಗಳ ಬಂಧ ಮೋಕ್ಷಗಳ ಅರಿವು, ಬಹಿರಾತ್ಮ, ಅಂತರಾತ್ಮ, ಪರಮಾತ್ಮನ ಸ್ವರೂಪ ಗೊತ್ತಾಗುತ್ತದೆ.

ಹೀಗೆ ಈ ನಾಲ್ಕು ಅನುಯೋಗಗಳು ಅಡಕವಾಗಿರುವ, ಮುಖ್ಯವಾಗಿ ಸ್ವಾಧ್ಯಾಯ ಮಾಡಬೇಕಾದ ಗ್ರಂಥಗಳೆಂದರೆ ಮಹಾಪುರಾಣ, ಶಾಸ್ತ್ರಸಾರ ಸಮುಚ್ಚಯ, ತತ್ತ್ವಾರ್ಥಸೂತ್ರ ಮುಂತಾದವು.

ಸವಿಸ್ತಾರವಾದ ಅಭ್ಯಾಸಕ್ಕಾಗಿ ಅಪಾರ ಗ್ರಂಥರಾಶಿ ಇದೆ. ತನ್ನ ಸಮಯ ಸಂದರ್ಭಗಳನ್ನು ಅನುಸರಿಸಿ ಸ್ವಾಧ್ಯಾಯಮಾಡಿ ತಮ್ಮ ಜ್ಞಾನ ಚೇತನ ಶಕ್ತಿಯನ್ನು ಸದುಪಯೋಗಪಡಿಸಿ ಕೊಳ್ಳಬಹುದು.

ಶಾಸ್ತ್ರಸ್ವಾಧ್ಯಾಯಕ್ಕೆ ಮುಂಚೆ ಮಂಗಲಾಚರಣೆಯನ್ನು, ಶ್ರುತ ಪೂಜೆ, ಗ್ರಂಥದ ಪ್ರಶಸ್ತಿಗಳನ್ನು ಭಕ್ತಿಯಿಂದ ಮಾಡಬೇಕು. ಶಕ್ತಿ ಇದ್ದವರು ಗ್ರಂಥಗಳನ್ನು ಪ್ರಕಾಶಪಡಿಸಿ ಶಾಸ್ತ್ರದಾನ ಮಾಡಬಹುದು. ಗ್ರಂಥ ಪ್ರಕಟನೆಗೆ, ಸ್ವಾಧ್ಯಾಯಮಂದಿರಗಳಿಗೆ, ಗ್ರಂಥ ಭಂಡಾರಕ್ಕೆ ಸಹಾಯ ನೀಡಬೇಕು. ಪಂಡಿತರು ಶಾಸ್ತ್ರಿಗಳು. ವಿದ್ವಾಂಸರನ್ನು ಕರೆಸಿ ಪ್ರವಚನವನ್ನು ಏರ್ಪಡಿಸಬೇಕು.

ಸ್ವಾಧ್ಯಾಯದಿಂದ ಜ್ಞಾನಾವರಣೀಯ ಕರ್ಮನಾಶವಾಗಿ ಮುಕ್ತಿ ಮಂದಿರದ



ದರ್ಶನವಾಗುವುದು. ಶಾಸ್ತ್ರಗಳ ಬಗ್ಗೆ ಅವಿನಯ ತೋರದೆ, ಭಕ್ತಿಯಿಂದ ಉನ್ನತ ಸ್ಥಾನದಲ್ಲಿಟ್ಟು ಪೂಜಿಸಿ ವಂದಿಸಬೇಕು. ಸ್ವಾಧ್ಯಾಯವು ಸಮ್ಯಜ್ಞಾನ - ದರ್ಶನ - ಚಾರಿತ್ರಗಳಿಗೆ ಕಾರಣ. ಅದರಿಂದ 'ನಹಿಜ್ಞಾನೇನ ಸದೃಶಂ' ಜ್ಞಾನಾರಾಧನೆಗಿಂತ ಮಿಗಿಲಾದುದು ಮತ್ತೊಂದಿಲ್ಲ. 'ಶ್ರದ್ಧಾವಾನ್ ಲಭ್ಯತೇ ಜ್ಞಾನಂ' ಸ್ವಾಧ್ಯಾಯದಲ್ಲಿ ಶ್ರದ್ಧೆಯುಳ್ಳವನು ಸುಜ್ಞಾನವನ್ನು ಸಂಪಾದಿಸುತ್ತಾನೆ. ಆದ್ದರಿಂದ ಧರ್ಮಗ್ರಂಥ ಗಳನ್ನು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು.

ಇಂತಹ ಸರ್ವಾರ್ಥಸಿದ್ಧಿದಾಯಕವಾದ, ಸರ್ವೋದಯ ತೀರ್ಥವಾದ, ಸುಖ ಶಾಂತಿಕರವಾದ, ಶುಭವೂ ಮಂಗಲಕರವೂ ಆದ ಆತ್ಮೋನ್ನತಿ ಸಾಧನವಾದ ಸ್ವಾಧ್ಯಾಯವು ಒಂದು ಸರ್ವೋತ್ಕೃಷ್ಟವಾದ ಕ್ರಿಯೆ.

## 39. ನಿಜಸುಖದಾಯೀ ದಶಧರ್ಮ

ಈ ಪ್ರಪಂಚದಲ್ಲಿನ ಪ್ರಾಣಿಗಳೆಲ್ಲ ಸುಖಾಭಿಲಾಷಿಗಳಾಗಿವೆ. ಮಾನವನಾಗಲೀ, ಪಶು-ಪಕ್ಷಿಗಳಾಗಲೀ, ಸಣ್ಣ ಸಣ್ಣ ಕ್ರಿಮಿ, ಕೀಟಗಳಾಗಲೀ ಎಲ್ಲ ಜೀವಗಳಿಗೂ ಸುಖದ ಅಪೇಕ್ಷೆ ಇದೆ. ಪ್ರತಿಯೊಂದು ಪ್ರಾಣಿಯೂ ತನ್ನ ಇಷ್ಟಾನುಸಾರ ಸುಖವನ್ನು ಪಡೆಯುವ ಪ್ರಯತ್ನವನ್ನು ಮಾಡುತ್ತಲೇ ಇರುತ್ತದೆ. ತಾನು ಯಾವುದೇ ಒಂದು ಕೆಲಸ ಮಾಡುತ್ತಿದ್ದರೂ ತನಗೆ ಅದರಿಂದ ಸುಖಪ್ರಾಪ್ತಿಯಾಗಬೇಕೆಂಬುದೇ ಅದರ ಅಂತಿಮ ಗುರಿಯಾಗಿರುತ್ತದೆ. ಮಾನವನಿಗಂತೂ ಇದು ಇದ್ದೇ ಇದೆ.

ಆದರೆ ಪ್ರಶ್ನೆ ಇಷ್ಟೇ - ಯಾರಿಗೆ ತಮ್ಮ ತಮ್ಮ ಇಷ್ಟಾನುಸಾರ ಭೋಗವು ದೊರೆಯುತ್ತಿರುವ, ಯಾವುದನ್ನು ಸುಖವೆಂದು ತಿಳಿದಿದ್ದಾರೋ ಅದು ನಿಜವಾದ ಸುಖವೇ? ಇಲ್ಲ. ಏಕೆಂದರೆ -

ನಾವು ದಿನ ಬೆಳಗಾದರೆ ಜನರ ಹಲವು ರೀತಿಯ ಕಾರ್ಯಕಲಾಪಗಳನ್ನು ಕಾಣುತ್ತೇವೆ. ಆ ಕಾರ್ಯಗಳಿಂದ ತಮಗೆ ಸುಖ ದೊರೆಯಬೇಕೆಂಬುದೇ ಅವರ ಅಭಿಪ್ರಾಯವಿರುತ್ತದೆ. ಈ ಗುರಿಗೆ ಏನಾದರೂ ಅಡಚಣೆಯುಂಟಾದರೆ ಅವರು ದುಃಖಿಸುತ್ತಾರೆ.

ಒಬ್ಬ ವ್ಯಕ್ತಿ ಮದ್ಯಪಾನ ಮಾಡಿ ಮತ್ತನಾಗುವುದೇ ಸುಖವೆಂದು ತಿಳಿದಿದ್ದಾರೆ, ಮದ್ಯವನ್ನು ಪಡೆಯುವುದಕ್ಕೆ ಯಾವ ರೀತಿಯ ಕಾರ್ಯ ಮಾಡುವುದಕ್ಕೂ, ಹಿಂಜರಿಯವುದಿಲ್ಲ. ಹೀಗೇ ಒಬ್ಬ ಜೂಜುಗಾರ ಜೂಜಾಡುವುದೇ ಸುಖವೆಂದು ಭಾವಿಸಿ, ಅದಕ್ಕಾಗಿ ಬೇಕಾದ ಹಣವನ್ನು ಪಡೆಯಲು ಎಂತಹ ದುಷ್ಕೃತ್ಯವನ್ನಾದರೂ ಮಾಡಲು ಹೇಸುವುದಿಲ್ಲ.

ಅಂದ ಮಾತ್ರಕ್ಕೆ ವಿವೇಕಶಾಲಿ ವ್ಯಕ್ತಿಗಳು ಮದ್ಯಪಾನ ಮಾಡುವುದನ್ನೂ, ಜೂಜಾಡುವುದನ್ನೂ ಒಪ್ಪಿ ಅದರಲ್ಲಿ ಸುಖವಿದೆ ಎಂದು ಹೇಳಲು ತಯಾರಾಗಿದ್ದಾರೇನು? ಇಲ್ಲ. ಏಕೆಂದರೆ, ಈ ಕ್ರಿಯೆಗಳಿಂದ ಯಾವಾಗಲೂ ದುಷ್ಪರಿಣಾಮವಾಗುತ್ತಲೇ ಇರುತ್ತದೆ, ಮತ್ತು ದುಃಖವಿದೆ.

ಹೀಗೆ ಎಲ್ಲ ಜೀವಿಗಳೂ ತಮ್ಮ ತಮ್ಮ ಇಷ್ಟಾನುಸಾರ ಸುಖವನ್ನು ಪಡೆಯಲು ಪ್ರಯತ್ನಪಡುತ್ತವೆ. ಇರಲಿ, ಈ ಎಲ್ಲ ಜೀವಿಗಳಿಗೂ ತಮ್ಮ ತಮ್ಮ ಇಷ್ಟಾನುಸಾರ ಸುಖಪ್ರಾಪ್ತಿಯಾಗುತ್ತಲೇ ಇರುತ್ತದೇನು? ಪ್ರಾಪ್ತಿಯಾಗುವ ಸುಖವಾದರೂ ನಿರಂತರವಾಗಿ ಶಾಶ್ವತವಾಗಿರುತ್ತದೇನು? ಜೀವಿಗಳು ತಾವು ಅನುಭವಿಸುತ್ತಿರುವುದು ನೈಜವಾದ ಸುಖವೇನು? ಅಲ್ಲ, ಅಲ್ಲ. ಅದು ಸುಖದ ಆಭಾಸ ಅಷ್ಟೇ. ನೈಜ ಸುಖದ ಅರಿವಿಲ್ಲದೆ ತಮ್ಮ ಇಷ್ಟಾನುಸಾರ ದೊರೆಯುತ್ತಿರುವುದೇ ಸುಖವೆಂದು ತಿಳಿದಿರುವುದು ಕೇವಲ ಭ್ರಮೆಯಾಗಿದೆ.

ಈ ಸುಖದ ಅನುಭವದ ಬಗ್ಗೆ ನಮ್ಮ ಸುತ್ತಮುತ್ತಲ ಜನರನ್ನು ವಿಚಾರಿಸಿದಾಗ ಅವರಿಂದ ಭಿನ್ನಭಿನ್ನ ರೀತಿಯ ಉತ್ತರಗಳು ಬಂದಿವೆ.

ಒಬ್ಬ ಹಸಿದ ಭಿಕ್ಷುಕನನ್ನು ಸಂಧಿಸಿ, 'ನಿನಗೆ ಸುಖ ಹೇಗೆ ಸಿಗಬಲ್ಲುದು' ಎಂದು ಕೇಳಿದಾಗ ಆತ ಹೇಳುತ್ತಾನೆ:- 'ನನಗೆ ಒಂದು ಹಿಡಿ ಅನ್ನ ದೊರೆತರೆ ಸಾಕು. ಅದರಿಂದ ಸುಖ ಉಂಟಾಗುತ್ತದೆ.' ಅಂದ ಮಾತ್ರಕ್ಕೆ ಅನ್ನಕ್ಕೆ ಕೊರತೆ ಇಲ್ಲದ ವ್ಯಕ್ತಿ ಸುಖಿಯಾಗಿದ್ದಾನೇನು? ಅಂತಹವನು ರೋಗದಿಂದ ನರಳುತ್ತ ಅನ್ನಕಂಡರೆ ದೂರ ಸರಿಯುತ್ತಾನೆ, ಬೆದರುತ್ತಾನೆ. ಅಂದ ಮೇಲೆ ಸುಖಕ್ಕಾಗಿ ಕೊರತೆ ಇದೆ. ಕೊರತೆ ಇದ್ದಲ್ಲಿ ಸುಖವೆಲ್ಲಿದೆ? ಒಂದು ದೊರೆತರೆ ಇನ್ನೊಂದರ ಕೊರತೆ ಇದ್ದೇ ಇದೆ. ಆದ್ದರಿಂದ ವೈಜ್ಞಾನಿಕ ರೀತಿಯಲ್ಲಿ ವಿಚಾರ ಮಾಡಿದರೆ ವ್ಯಕ್ತಿಯ ಮಾನಸಿಕ ದೋಷಗಳನ್ನು ನಿವಾರಿಸಿ ಆತನಿಗೆ ಪರಿಣಾಮಕಾರಿಯಾದ ಸುಖವನ್ನುಂಟುಮಾಡುವ ಸಾಧನ ಒಂದುಂಟು. ಅದನ್ನೆ 'ಧರ್ಮ' ಎನ್ನಬಹುದು. ಈ ಕಾರಣದಿಂದ ಧರ್ಮವೂ ಜೀವನದ ವೈಜ್ಞಾನಿಕ ಪದ್ಧತಿಯಾಗಿದೆ. ಈ ಮೂಲಕ ನಡೆಯುವವನಿಗೆ ಅಗಮ್ಯ



ಸುಖಶಾಂತಿಗಳು ಲಭಿಸುತ್ತವೆ. ಹೀಗೆ ಜೀವಿಯ ಜೀವನದ ಸುಖ, ಶಾಂತಿಗಳೊಳಗೆ ಯಾವುದೇ ಅಂತರವನ್ನೂ ನೋಡದೆ ಧರ್ಮನೇತಾರರು ಅಥವಾ ಧರ್ಮೇಶ್ವರರೆನಿಸಿದ ತೀರ್ಥಾಧೀಶರು ಜೀವಿಗಳ ಮಹಾಸುಖದ ಸಾಧನೆಯನ್ನೇ 'ಧರ್ಮ' ಎಂಬ ಹೆಸರಿನಲ್ಲಿ ವಿವರಿಸಿದ್ದಾರೆ. ಇದನ್ನೇ ಸಮಂತಭದ್ರಾಚಾರ್ಯರು :- 'ಸದ್ದೃಷ್ಟಿಜ್ಞಾನವೃತ್ತಾನಿ ಧರ್ಮಂ ಧರ್ಮೇಶ್ವರಾ ವಿದುಃ॥' ಎಂದು ನಿಜದ ನಂಬಿಕೆ, ನಿಜದ ತಿಳವಳಿಕೆ, ನಿಜದ ಆಚರಣೆಗಳ ಒಕ್ಕೂಟವೇ ಧರ್ಮವೆಂದು ಧರ್ಮೇಶ್ವರರು ತಿಳಿಸಿದ್ದಾರೆ. ಈ ಸಾಧನೆಯೇ ತ್ರೈರತ್ನಮಾರ್ಗಗಳಾದ ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ ಮತ್ತು ಸಮ್ಯಕ್ ಚಾರಿತ್ರ ಎಂಬ ಧರ್ಮದ ವೈಜ್ಞಾನಿಕ ಸೂತ್ರಗಳಾಗಿವೆ. ಹೀಗೆ ಒಬ್ಬ ವ್ಯಕ್ತಿಯ ನಂಬಿಕೆ, ತಿಳಿವಳಿಕೆ, ನಡವಳಿಕೆಗಳಿಂದ ರೂಪಿತವಾದುದೇ ಸುಖದ ಸಾಧನ. ಇದನ್ನೇ ರತ್ನಾಕರ ಕವಿಯು 'ಧರ್ಮದಿಂದಾದುದು ಸಿರಿ ಎಂದು ಸುಖಿಸುತ್ತ ಧರ್ಮವ ಮರೆಯರುತ್ತಮರು' ಎಂದು ಧರ್ಮದಿಂದ ಒದಗುವ ಮಹತ್ತರ ಫಲವನ್ನು ನಿರ್ದೇಶಿಸಿ ಇಂತಹ ಸುಖದಾಯಕವಾದ ಧರ್ಮವನ್ನು ಯಾರೂ ಮರೆಯದಿರಲಿ ಎಂದೂ, ಸುಖಾಪೇಕ್ಷಿಗಳೆಲ್ಲ ಧಾರ್ಮಿಕರಾಗಲಿ ಎಂದೂ ಪ್ರೇರೇಪಿಸಿದ್ದಾನೆ.

ಎಲ್ಲಾ ಕಲೆಗಳಲ್ಲೂ ಧರ್ಮದ ಕಲೆಯು ಶ್ರೇಷ್ಠವಾದುದು. ಯಾವುದನ್ನು ನಾವು ಜೀವನದ ಕಲೆ ಎಂದು ಮಾನ್ಯ ಮಾಡುತ್ತೇವೋ ಅದು ಸುಖದ ಯೋಜನೆಯೇ ಆಗಿದೆ. ಯಾರು ಅದನ್ನು ಆಚರಿಸಿ, ಅನುಷ್ಠಾನಕ್ಕೆ ತಂದು ಕೊಂಡಿದ್ದಾರೋ ಅದೇ ಅವರ ಅನುಭವದ ಸಫಲ ಜೀವನದ ಪರಿಭಾಷೆಯಾಗಿದೆ. ಅವರು ಸ್ವತಃ ಅನುಸರಿಸಿ, ಅನುಭವಿಸಿ ತೋರುವ ಮಾರ್ಗವು ಅನುಸರಿಸುವವರಿಗೆ ಆದರ್ಶವಾಗಿರುತ್ತದೆ. ಈ ಉಪಕಾರ ಸ್ಮರಣೆಗಾಗಿ ಆ ಧರ್ಮನಿರೂಪಕನಿಗೆ ಪೂಜೆ, ಸನ್ಮಾನ, ಸ್ವಾಗತ ಮುಂತಾದ ಲೌಕಿಕ ಮಹತ್ವವೂ ತನ್ನಿಂದ ತಾನೇ ಆಗುತ್ತವೆ. ಈ ಕ್ರಿಯೆಗಳಾದವೂ ಆ ಧರ್ಮಾತ್ಮನಿಗೆ ಅಪೇಕ್ಷೆ ಇಲ್ಲದಿದ್ದರೂ ಆತ್ಮಶಾಂತಿ, ಸತ್ಪರಿಣಾಮ, ಸುಖ ಸಮಾಧಾನ ಹೊಂದಿದವರು ತಾವಾಗಿಯೇ ಮಾಡುವ ಕಾರ್ಯಗಳಾಗಿವೆ.

ಧರ್ಮೇಶ್ವರರನ್ನು ಆಶ್ರಯಿಸಿ, ಆತನ ತತ್ತ್ವಗಳನ್ನು ನಂಬುವುದು ಮೊದಲ ಕಾರ್ಯವಾಗಿದೆ. ಇದು ಧಾರ್ಮಿಕನ ಪ್ರಥಮ ಕರ್ತವ್ಯ. ಈ ನಂಬಿಕೆಯನ್ನು ತೀರ್ಥಾಧೀಶರಲ್ಲೂ, ಅವರು ನಿರೂಪಿಸಿದ ತತ್ತ್ವ ನಿರೂಪಿತವಾದ ಶಾಸ್ತ್ರದಲ್ಲೂ, ಅವರ ವಾಣಿಯನ್ನು ಪ್ರಸಾರ ಮಾಡುತ್ತಿರುವ ಸಾಧುಗಳಲ್ಲೂ ಇಟ್ಟು, ಇವುಗಳ ಬಗ್ಗೆ ಭಕ್ತಿ, ಶ್ರದ್ಧೆ, ವಿನಯ ವಿಧೇಯತೆಯಿಂದ ವರ್ತಿಸುವುದು ಸಮ್ಯಗ್ದರ್ಶನವಾಗಿದೆ.

ಜೀವನದ ಸಫಲತೆಯ ಮಾರ್ಗವು ಯಾವಾಗಲೂ ನಿರಾತಂಕವಾಗಿರುವುದಿಲ್ಲ. ಈ ಮಾರ್ಗದಲ್ಲಿ ಮುನ್ನಡೆಯುವ ವ್ಯಕ್ತಿಗೆ ದಾರಿಯಲ್ಲಿ ಕಲ್ಲು ಮುಳ್ಳುಗಳು, ಗಾಳಿ ಮಳೆಗಳು, ಚಳಿ ಬಿಸಿಲುಗಳು ಮುಂತಾದುವುಗಳೆನಿಸಿದ ಹರ್ಷ ವಿಷಾದಗಳು ಒದಗುತ್ತವೆ. ಆದುದರಿಂದ ತನ್ನ ನಂಬಿಕೆಗೆ ಯಾವುದರಿಂದಲೂ ಧಕ್ಕೆಯಾಗದಂತೆ ಕಾಪಾಡಿಕೊಂಡು ಮುನ್ನುಗ್ಗುವ ತಿಳುವಳಿಕೆ ಅಥವಾ ಜ್ಞಾನವನ್ನು ಆತ ಪಡೆದುಕೊಳ್ಳಬೇಕು. ತನ್ನ ನಂಬಿಕೆ ಅಚಲವಾದುದು, ಅದರ ವಿಷಯ ಮಹತ್ವಪೂರ್ಣವಾದುದು ಎಂದು ದೇವ, ಶಾಸ್ತ್ರ, ಗುರುಗಳ ವಿಷಯವನ್ನು ಆಳವಾಗಿ ಅರಿತುಕೊಳ್ಳಬೇಕು. ಆಗಲೇ ಆತನು ಸಮ್ಯಗ್‌ಜ್ಞಾನಿ ಎನಿಸುತ್ತಾನೆ. ಆನಂತರ ಆತ ಸಹಿಷ್ಣುವೆನಿಸಿ, ಬರುವ ಎಡರು ತೊಡರುಗಳನ್ನು ನಿವಾರಿಸಿಕೊಂಡು ಜಗ್ಗದೆ, ಕುಗ್ಗದೆ ಮುನ್ನುಗ್ಗುವ ಉಪಾಯಗಳನ್ನು ಕಂಡುಕೊಂಡು ಹಿಡಿದ ಧರ್ಮವನ್ನು ಸುಖದ ಸಾಧನವೆಂದು ತಿಳಿದು ನಡೆಸಲು ಸಿದ್ಧನಾಗುತ್ತಾನೆ.

ಸಮ್ಯಗ್ದರ್ಶನ ಮತ್ತು ಸಮ್ಯಗ್‌ಜ್ಞಾನದ ಮುಂದಿನ ವಿಭಾಗವೇ ಸಮ್ಯಕ್ ಚಾರಿತ್ರ. ಇದು ಆಚರಿಸಿ ತೋರಿಸುವಂತಹದು, ಹೇಳಿ ಬಿಡುವಂತಹದಲ್ಲ. ನಿಯಮ ಬದ್ಧವಾದ ನಿಷ್ಠಾವಂತ ಜೀವನ ನಡಾವಳಿಕೆಯೇ ಈ ಚಾರಿತ್ರವೆಂಬುದು. ಇದು ಯತ್ಯಾಚಾರ, ಮತ್ತು ಶ್ರಾವಕಾಚಾರ ಎಂದು ಎರಡು ವಿಭಾಗ. ಸರ್ವಸಂಗ ಪರಿತ್ಯಾಗಿಗಳಾಗಿ ಅಂತರಂಗ ಬಹಿರಂಗ ಪರಿಗ್ರಹಗಳನ್ನು ದೂರ ಮಾಡಿ ಮೋಹ ಮಮತೆಗಳನ್ನು ತ್ಯಜಿಸಿ ಕೇವಲ ಆತ್ಮಾರಾಧನೆಯಲ್ಲಿ ತೊಡಗಿರುವ ಮಹಾ ತ್ಯಾಗಿಗಳು ನಡೆಸುವುದೇ ಯತ್ಯಾಚಾರ. ಅದಕ್ಕೆ ಮುಂಚೆ ಸಾತ್ವಿಕ ವೃತ್ತಿಯಿಂದ ಅಣುರೂಪದಲ್ಲಿ ನಿಯಮಾದಿಗಳನ್ನು ಪಾಲಿಸುತ್ತ ಆಧ್ಯಾತ್ಮದ ಅಭ್ಯಾಸದಲ್ಲಿ ಇದ್ದು ಯತ್ಯಚಾರದ ಪಾಲನೆಗೆ ಬೇಕಾದ ಅರ್ಹತೆಯನ್ನು ಗಳಿಸಲು ನಡೆಸುವ ಪ್ರಾರಂಭಿಕ ಕ್ರಿಯೆಗಳೇ ಶ್ರಾವಕಾಚಾರವೆನಿಸುತ್ತದೆ. ಶ್ರಾವಕನಾಗಿ ನಿಷ್ಠನಾದವನು ಮುಂದೆ ಯತಿಯಾಗಿ ಶುದ್ಧ ಚಾರಿತ್ರವನ್ನು ಪಾಲಿಸಬಲ್ಲನು.

ಹೀಗೆ ಧರ್ಮದ ರತ್ನತ್ರಯ ಮಾರ್ಗವು ಜೀವಿಯನ್ನು ಎತ್ತರದ ಮಟ್ಟಕ್ಕೆ ಏರಿಸಿ, ಆತ್ಮಸಾಕ್ಷಾತ್ಕಾರ ಮಾಡಿಸುತ್ತದೆ. ಆತ್ಮ ತನ್ನಲ್ಲಿಯೇ ಇದೆ. ಅದರ ಸಾಕ್ಷಾತ್ಕಾರವಾಗಬೇಕಾಗಿದೆ ಅಷ್ಟೇ. ಅದನ್ನು ಉಂಟುಮಾಡುವುದೇ ರತ್ನತ್ರಯ ಧರ್ಮ.

ಸುಖೀ ಮಾನವನ ಜೀವನ ನಿರ್ಮಾಣಕ್ಕೆ ಈ ರತ್ನತ್ರಯ ಧರ್ಮದ



ನಂಬಿಕೆ, ತಿಳುವಳಿಕೆ, ಪಾಲನೆ, ಅವಶ್ಯಕ. ಅದಕ್ಕಾಗಿ ಮೊದಲು ಮಾನಸಿಕವಾದ ಶಂಕಾದಿ ದೋಷಗಳ ತ್ಯಾಗವು ಎಲ್ಲಕ್ಕಿಂತಲೂ ದೊಡ್ಡ ಯೋಗದಾನ ವಾಗಿರುತ್ತದೆ. ಮಾನಸಿಕ ದೋಷಗಳಿಂದ ಯುಕ್ತನಾದ ವ್ಯಕ್ತಿಯನ್ನು ತನ್ನ ಜೀವನದಲ್ಲಿ ಏನನ್ನೂ ಸಾಧಿಸಲಾರ. ಆತನ ಪಾಲಿಗೆ ಜೀವನ ದುಃಖಮಯ ವಾಗುತ್ತದೆ. ಮಾನಸಿಕ ದೋಷಗಳು ಪತಿತ ಜೀವನದ ಚಿಹ್ನೆಯಾಗಿದೆ. ಇಂಥವನನ್ನು ಸರ್ಪ, ಸಿಂಹ ಮುಂತಾದ ಭಯಂಕರವಾದ ಪ್ರಾಣಿಗಳ ಶ್ರೇಣಿಯಲ್ಲಿ ಸೇರಿಸುತ್ತಾರೆ. ಕಾರಣ ಆತನಿಂದ ಸಮಾಜಕ್ಕೆ ಹಾನಿಯಾಗುತ್ತದೆ.

ಇಂದಿನ ಸಮಾಜಕ್ಕೆ ಉನ್ನತ, ಉದಾತ್ತ ಹಾಗೂ ಪವಿತ್ರ ಮಾನಸಿಕ ಸ್ಥಿತಿಯ ಮಾನವರ ಮಾರ್ಗದರ್ಶನದ ಅವಶ್ಯಕತೆಯಿದೆ. ಇದರಿಂದ ಸಮಾಜದ ಆದರ್ಶಗಳು ಸುರಕ್ಷಿತವಾಗುತ್ತವೆ. ಮಾನವೀಯ ಸಭ್ಯತೆಯೂ ಆದರ್ಶ ವ್ಯಕ್ತಿಗಳ ಛಾಯೆಯಲ್ಲಿ ಸುರಕ್ಷಿತವಾಗಿ ಇರಬಲ್ಲುದು.

ಇಂತಹ ಉನ್ನತ, ಉದಾತ್ತ ಮತ್ತು ಪವಿತ್ರವಾದ ರತ್ನತ್ರಯ ಸಮ್ಯಗ್ಧರ್ಮವು ಶ್ರಮಣ ಸಂಸ್ಕೃತಿಯ ದಿವ್ಯ ಸಂದೇಶವಾಗಿದೆ. ಇದು ವಿಶ್ವ ಶಾಂತಿಯ, ವಿಶ್ವಮೈತ್ರಿಯ ಸಂದೇಶವಾಗಿದೆ. ಇದನ್ನು ನಂಬಿ, ತಿಳಿಯುವುದರ ಜೊತೆಗೆ ನಮ್ಮದನ್ನಾಗಿ ಮಾಡಿಕೊಳ್ಳುವ ಸಾಹಸವನ್ನು ಮಾಡಬೇಕು. ಆಗ ಇಚ್ಛಿತವಾದ ಸುಖ, ಶಾಂತಿ, ನೆಮ್ಮದಿ, ತೃಪ್ತಿಗಳು ದೊರೆಯುತ್ತವೆ.

ಶ್ರಮಣ ಸಂಸ್ಕೃತಿಯು ಈ ರತ್ನತ್ರಯದ ಒಡವೆಯನ್ನು ಪ್ರತಿಯೋರ್ವ ಆತ್ಮರಿಗೂ ತೊಡಿಸಲು ಪ್ರತಿ ವರ್ಷವೂ ಪರ್ಯುಷಣ ಪರ್ವದ ಹೆಸರಿನಲ್ಲಿ ಬರುತ್ತದೆ. ಇದು ಹತ್ತು ಲಕ್ಷಣಗಳಿಂದ ಕೂಡಿದ್ದು ಉತ್ತಮವೆನಿಸಿದೆ. ಇದೇ ಭಾದ್ರಪದ ಶುದ್ಧ ಪಂಚಮಿಯಿಂದ ಚತುರ್ದಶಿಯವರೆಗೆ ಹತ್ತುದಿನಗಳೂ ಆಚರಿಸಲ್ಪಡುವ ದಶಲಕ್ಷಣ ಪರ್ವ. ಅವುಗಳೆಂದರೆ,- ಉತ್ತಮಕ್ಷಮಾ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪ, ತ್ಯಾಗ, ಆಕಿಂಚನ್ಯ, ಬ್ರಹ್ಮಚರ್ಯ ಎಂದು ಈ ಹತ್ತನ್ನೂ ಕ್ರಮ ಪೂರ್ವಕವಾಗಿ ನಿಯಮಬದ್ಧವಾಗಿ ಆರಾಧಿಸಬೇಕು, ಆಚರಿಸಬೇಕು.ಇವು ಆಚರಿಸಿ ತೋರಿಸುವಂತಹವೇ ವಿನಃ ಹೇಳಿ ಬಿಡುವಂತಹುವಲ್ಲ.

**ಉತ್ತಮ ಕ್ಷಮಾ–**

ಶ್ರಮಣ ಸಂಸ್ಕೃತಿಯ ಸಂದೇಶದ ಪ್ರಕಾರ ಇವು ಆತ್ಮಧರ್ಮವಾಗಿರುವುದರಿಂದ ಈ ಗುಣಗಳನ್ನು ಪ್ರಕಟ ಮಾಡಿಕೊಂಡು

ಮೀಸಲೆನಿಸಿದುದೇ ಈ ಪರ್ವದ ಆಚರಣೆ. ಆತ್ಮೋದ್ಧಾರದ ಅಮೋಘ ಸಾಧನೆಯೇ ಧರ್ಮ. ಧರ್ಮಕ್ಕೆ ಮೂಲವೇ ದಯೆ. ಕ್ಷಮಾಗುಣ ಉಳ್ಳವನಲ್ಲಿ ದಯಾ ಪಾಲನೆಯು ಆಚರಣೆಯಲ್ಲಿರುತ್ತದೆ. ಈ ಕ್ಷಮಾಗುಣವು ಕ್ರೋಧವೆಂಬ ಕಷಾಯವನ್ನು ದೂರ ಮಾಡಿದಾಗಲೇ ಉಂಟಾಗುವುದು. ಅದ್ದರಿಂದ ಧರ್ಮಸಾಧಕನು ಮೊದಲು ಕ್ರೋಧವನ್ನು ಗೆದ್ದು ಕ್ಷಮಾಗುಣವನ್ನು ಧರಿಸಬೇಕು. ಈ ಕ್ಷಮೆಯೇ ವೀರರ ಲಕ್ಷಣವಾಗಿದೆ. ಹೇಡಿಗಳಿಂದ ಕ್ಷಮೆಯ ಪಾಲನೆ ಅಸಾಧ್ಯ. ಅದಕ್ಕೇ 'ಕ್ಷಮಾ ವೀರಸ್ಯ ಭೂಷಣಂ' ಎಂದಿದ್ದಾರೆ. ಆತ್ಮವು ಆತ್ಮವನ್ನು ಗುರುತಿಸಿ ಅರಿತುಕೊಳ್ಳಲು ಈ ಕ್ಷಮಾಧರ್ಮದಿಂದಲೇ ಸಾಧ್ಯ. ಈ ಮೂಲಕ ಆತ್ಮೋತ್ಥಾನವಾಗಿ ನೈಜ ಸುಖದತ್ತ ಸಾಗಬಹುದು. ಕ್ರೋಧದ ಕಾರಣವನ್ನು ತಿಳಿದು ತ್ಯಜಿಸುವುದೇ ಕ್ಷಮೆ. ತನ್ನನ್ನು ದ್ವೇಷಿಸುವವನನ್ನೂ, ತನಗೆ ಅಪಕಾರ ಮಾಡಿದವನನ್ನು ಕ್ಷಮಿಸುವುದೇ ಉತ್ತಮ ಕ್ಷಮೆ.

**ಉತ್ತಮ ಮಾರ್ದವ–**

'ಮೃದೋಃ ಭಾವಃ ಮಾರ್ದವಂ' ಮೃದುವಾದ ಸ್ವಭಾವದ ಗುಣವನ್ನು ಹೊಂದುವುದೇ ಮಾರ್ದವ. ಮೃದುಭಾವ ಪ್ರಕಟವಾಗಲು ಮಾನವೆಂಬ ಕಷಾಯವನ್ನು ದೂರ ಮಾಡಬೇಕು. ಮಾನವೆಂದರೆ ಅಹಂಕಾರ ಅಥವಾ ಗರ್ವ ಎಂದರ್ಥ. ಅಹಂಕಾರಿಯಾದವನಲ್ಲಿ ಮಾರ್ದವವಿರಲಾರದು. ಯಾವ ಮದವೂ ಇರಬಾರದು. ತನಗೆ ಒದಗಿರುವ ಯಾವದೂ ತನ್ನಿಂದ ಪರವಸ್ತುವೇ ಆಗಿದ್ದು ಅದು ತನ್ನಾತ್ಮನಿಂದ ಭಿನ್ನವೇ ಆಗಿದ್ದು ನಶ್ವರವಾದುದಾಗಿರುವುದರಿಂದ ಯಾವುದಕ್ಕೆ ಗರ್ವಪಡಬೇಕು? ಮದವಿದ್ದವನಲ್ಲಿ ಮೃದುತ್ವ ಇರುವುದಿಲ್ಲ.

**ಉತ್ತಮ ಆರ್ಜವ–**

'ಯೋಗಸ್ಯಾವಕ್ರತಾ ಆರ್ಜವಂ' ಮನ ವಚನ ಕಾಯಗಳ ಕುಟಿಲತೆಯನ್ನು ತ್ಯಜಿಸುವುದೇ ಆರ್ಜವವು. ಮಾಯವೆಂಬ ಕಷಾಯವನ್ನು ಬಿಡುವುದೂ, ವಿಶ್ವಾಸ ಘಾತವನ್ನು ಮಾಡದಿರುವುದೂ, ನಿರ್ವಂಚನೆಯಿಂದ ಆರ್ಜವ ಧರ್ಮದ ಲಕ್ಷಣ. ಕಪಟಿಗಳು ನಿಂದೆಗೆ ಗುರಿಯಾಗುತ್ತಾರೆ.

**ಉತ್ತಮ ಶೌಚ–**

'ಪ್ರಕರ್ಷ ಪ್ರಾಪ್ತ ಲೋಭಾನ್ನಿವೃತ್ತಿಃ ಶೌಚಂ' ಲೋಭದ ನಿವೃತ್ತಿಯೇ ಶೌಚ. ಅಂದರೆ ಲೋಭವೆಂಬ ಕಷಾಯವನ್ನು ತ್ಯಜಿಸುವುದು. ಶೌಚ ಎಂದರೆ ಪವಿತ್ರತೆ ಎಂದರ್ಥ. ಪವಿತ್ರವಾದ ಭಾವನೆಗಳಿಂದ ನಿರ್ಮಲವಾದ ಅಂತಃಕರಣದಿಂದ



ಕೂಡಿರುವುದೂ ಪರಭಾವಗಳನ್ನು ದೂರಮಾಡುವುದೂ, ಬಾಹ್ಯಾಭ್ಯಂತರವಾಗಿ ಸರಳವಾದ ರೀತಿಯಲ್ಲಿ ವರ್ತಿಸುವುದು ಮನಸ್ಸು ಧಾರಾಳದಿಂದ ಕೂಡಿದ್ದು ಜಿಪುಣತನ, ಜಿಗುಟುತನವನ್ನು ತ್ಯಜಿಸಿ ನ್ಯಾಯೋಪಾರ್ಜಿತ ಧನದಲ್ಲಿ ತನಗಾಗಿ ಮಿಕ್ಕದ್ದನ್ನು ದಾನಧರ್ಮ ಪರೋಪಕಾರ ಮಾಡುವುದೂ, ಇರುವ ಶಕ್ತಿಯನ್ನು ಮರೆಮಾಚದೆ ಧರ್ಮಸೇವೆ ಮಾಡುವುದು ಶೌಚಧರ್ಮಾಚರಣೆ ಎನಿಸುತ್ತದೆ. ಒಳಗೂ, ಹೊರಗೂ ಶುದ್ಧನಿರಬೇಕು.

**ಉತ್ತಮ ಸತ್ಯ–**

'ಸತ್ಯೇನ ಹೀನಾ ನ ಚ ಭಾತಿ ವಾಣೀ' ಸತ್ಯವಿಲ್ಲದ ವಚನಕ್ಕೆ ಶೋಭೆ ಇಲ್ಲ. ಅಸತ್ಯವನ್ನು ತ್ಯಜಿಸಿ ಸತ್ಯದ ನೈಜದ ವ್ಯವಹಾರ ಮಾಡುವುದೂ, ತನ್ನ ಮಾತು ಹಿತ-ಮಿತ, ಮೃದು-ಮಧುರವಾದುದೂ ಆಗಿರವುದೂ ಇದ್ದಂಥವನು ಯಾವಾಗಲೂ ನಂಬಿಕೆಗೆ ಪಾತ್ರನಾಗಿ ಗೌರವಾನ್ವಿತ ವ್ಯಕ್ತಿಯಾಗುತ್ತಾನೆ ಅದುದರಿಂದ ಸತ್ಯವು ಜೀವನದಲ್ಲಿ ಸೌಂದರ್ಯವನ್ನೂ ಶಿವಪದವಿಯನ್ನೂ ದೊರಕಿಸುವ ಸಾಧನವಾಗಿದೆ.

**ಉತ್ತಮ ಸಂಯಮ–**

ಮನಸ್ಸು ಮತ್ತು ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ವ್ರತಾಚರಣೆಯನ್ನು ಮಾಡುವುದು ಸಂಯಮವೆನಿಸುತ್ತದೆ. ಆಸೆ ಆಕಾಂಕ್ಷೆಗಳಿಗೆ ಮಿತಿ ಹಾಕಿ ಆತ್ಮೋತ್ಥಾನಕ್ಕೆ ಸಹಕಾರಿಯಾದ ನಿಯಮವನ್ನು ಪಾಲಿಸುವುದೂ ಉತ್ತಮ ಸಂಯಮಾಚರಣೆಯಾಗಿದೆ. ಅಹಿಂಸಾಪಾಲನೆಯೂ ಸಂಯಮವೇ.

**ಉತ್ತಮ ತಪ–**

'ಇಚ್ಛಾನಿರೋಧಸ್ತಪಃ' ಇಚ್ಛೆಯನ್ನು ನಿರೋಧಿಸುವುದು ತಪವೆನಿಸುತ್ತದೆ. ಬಂಗಾರವನ್ನು ಕಾಯಿಸಿ ಬಡಿಯುವುದರಿಂದ ಅದು ಹೇಗೆ ಶುದ್ಧವಾಗುತ್ತದೆಯೋ ಹಾಗೆ ಬಾಹ್ಯ ಮತ್ತು ಆಭ್ಯಂತರವಾದ ಆಸೆ ಆಕಾಂಕ್ಷೆಗಳನ್ನು ತ್ಯಜಿಸಿ ಆತ್ಮಾರಾಧನೆಯಲ್ಲಿ ತೊಡಗುವುದೂ, ಧರ್ಮ ಗ್ರಂಥಗಳನ್ನು ಓದುವುದೂ ಉಪವಾಸಾದಿಗಳನ್ನು ಮಾಡುವುದೂ ಉತ್ತಮ ತಪವೆನಿಸುತ್ತದೆ.

**ಉತ್ತಮ ತ್ಯಾಗ–**

'ಸಂಯತಸ್ಯ ಯೋಗ್ಯಂ ಜ್ಞಾನಾದಿದಾನಂ ತ್ಯಾಗಃ' ಧನಕನಕಾದಿ ಪದಾರ್ಥಗಳು

ಕರ್ಮದ ಉದಯದಿಂದ ಪ್ರಾಪ್ತವಾಗುತ್ತವೆಂದು ತಿಳಿದು ಅವುಗಳ ಮೇಲಿನ ಮೋಹವನ್ನು ತ್ಯಜಿಸುವುದು ತ್ಯಾಗವೆನಿಸುತ್ತದೆ. ಒದಗಿರುವ ಸಂಪತ್ತನ್ನು ಅದು ನಾಶಹೊಂದುವುದರೊಳಗೇ ದಾನಧರ್ಮ ಪರೋಪಕಾರದಲ್ಲಿ ವ್ಯಯಮಾಡುವುದೂ, ಸಂಯಮಿಗಳಾದ ಮುನಿ ಮೊದಲಾದವರಿಗೆ ಆಹಾರ ಔಷಧ, ಅಭಯ ಮತ್ತು ಜ್ಞಾನ(ಶಾಸ್ತ್ರ) ಹೀಗೆ ಚತುರ್ವಿಧ ದಾನ ಮಾಡುವುದೂ ಉತ್ತಮ ತ್ಯಾಗವಾಗಿದೆ.

**ಉತ್ತಮ ಆಕಿಂಚನ್ಯ:–**

ಮನಸ್ಸಿನ ದುಗುಡವನ್ನು ಬಿಟ್ಟು ಆತ್ಮತತ್ತ್ವದಲ್ಲಿ ಶ್ರದ್ಧೆಯಿಟ್ಟು ಆಧ್ಯಾತ್ಮ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವುದೂ, ತೃಷ್ಣಾಭಾವನೆಯನ್ನು ಬಿಡುವುದೂ ಆಕಿಂಚನ್ಯವೆನಿಸುತ್ತದೆ.

**ಉತ್ತಮ ಬ್ರಹ್ಮಚರ್ಯ:–**

ಜ್ಞಾನಮಾರ್ಗದಲ್ಲಿ ನಡೆಯಲು ಶೀಲಪಾಲನೆಯು ಅಗತ್ಯ. ಅದಕ್ಕೆ ಬ್ರಹ್ಮಚರ್ಯದ ನಡತೆ ಉತ್ತಮವಾದುದು. ಬ್ರಹ್ಮಜ್ಞಾನ ಎಂದರೆ ಆತ್ಮಜ್ಞಾನ ದಲ್ಲಿ ಚರಿಸುವುದರಿಂದ ಬ್ರಹ್ಮತೇಜಸ್ಸು ಉಂಟಾಗಿ ನೈಜ ಸುಖ-ಶಾಂತಿಗೆ ಪಾತ್ರನಾಗುತ್ತಾನೆ.

ಹೀಗೆ ಆತ್ಮಕಲ್ಯಾಣಕಾರಿಯಾದ ಸುಖಸಾಧನೆಯ ಮಾರ್ಗವಾದ ಈ ದಶಧರ್ಮವನ್ನು ಗೃಹಸ್ಥರೂ, ಯತಿಗಳೂ ತಮ್ಮ ತಮ್ಮ ಯೋಗ್ಯತಾನುಸಾರ ಪಾಲಿಸಲು ಅವಕಾಶ ಉಂಟು. ಮರೆತು ಹೋದ ಕರ್ತವ್ಯವನ್ನು ಮತ್ತೆ ಆಧ್ಯಾತ್ಮದಲ್ಲಿ ತೊಡಗಿಸುವ ಈ ದಶಧರ್ಮಗಳ ಆಚರಣೆಯು ಎಲ್ಲರಿಗೂ ಆವಶ್ಯಕವಿದೆ. ಈ ಸಂದೇಶವನ್ನು ಸಾರುತ್ತ ಪ್ರತಿವರ್ಷ ಬರುವ ಈ ಪರ್ವವು ಒಂದು ಆಧ್ಯಾತ್ಮಿಕ ಪರ್ವವೇ ಆಗಿದೆ. ನಿಜವಾದ ಸುಖದ ಮಂದಿರಕ್ಕೆ ಮಾರ್ಗ ತೋರುವ ಜ್ಯೋತಿಯಾಗಿದೆ. ಇಚ್ಛಿತ ಸುಖವನ್ನು ಕೊಡುವ ಕಲ್ಪವೃಕ್ಷವಾಗಿದೆ. ತನ್ನಲ್ಲಿ ಅಡಗಿರುವ ಆತ್ಮಗುಣಗಳನ್ನು ಹೊರಗೆಡಹಿಕೊಳ್ಳಲು ಅಥವಾ ಕಂಡುಕೊಳ್ಳಲು ಸಹಕಾರಿಯಾಗಿದೆ. ಎಲ್ಲ ಮುಕ್ತಾತ್ಮರೂ ಇದನ್ನು ಆರಾಧಿಸಿ, ಆಚರಿಸಿದ್ದಾರೆ. ಎಲ್ಲ ಆಧ್ಯಾತ್ಮಿಗಳಿಗೂ ಇದರ ಅನುಕರಣೆ, ಅನುಸರಣೆ ಬೇಕಾಗಿದೆ. ಆದುದರಿಂದ ಇದಕ್ಕೆ ನಿಜಸುಖದಾಯಿ ದಶಧರ್ಮವೆಂಬ ಮಾತು ಸತ್ಯಂ ಶಿವಂ ಸುಂದರಂ ಆಗಿದೆ.